
# ಕೊಡಗು ಸಂಗಾತಿ

ಏಪ್ರಿಲ್ 16 ರಿಂದ 30, 2001 ಪಾಕ್ಷಿಕ ಪತ್ರಿಕೆ (ಪಗ್ಗ 3-17)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 8 ಪುಟಗಳು : 24 ಬೆಲೆ ರೂ. : 6-00

ಲೇಖನ : ಒಳಪುಟಗಳಲ್ಲಿ

## ಜನಸೇವೆ ಮಾಡುವಲ್ಲಿ ರಾಜಕೀಯ ಸಲ್ಲದು

### ಕೇಂದ್ರ ಜವಳಿ ಮತ್ತು ಕೈ ಮಗ್ಗ ನಿರ್ದೇಶಕ ತಳೂರು ಕಿಶೋರ್‌ಕುಮಾರ್

# ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆ, ಮೈಸೂರು

ಸಂಗಾತಿಯ ಮಾನ್ಯ ಚಂದದಾರರಾಗಿದ್ದು 31-12-19999ಕ್ಕಿಂತ ಹಿಂದಿನಿಂದಲೂ ಪತ್ರಿಕೆಯು ನವೀಕರಣಗೊಳ್ಳದೆ ಇರುವ ಕಾರಣ ಈ ಕೆಳಕಾಣಿಸಿದ ಸಂಗಾತಿ ಚಂದದಾರರಿಗೆ ಪತ್ರಿಕೆಯನ್ನು ದಿನಾಂಕ 16-4-2001ರಿಂದ ನಿಲ್ಲಿಸಲಾಗಿದೆ. ಈ ಪ್ರಯುಕ್ತ ಬಾಕಿ ಬರಲಿರುವ ಹಣಕ್ಕೆ ಪತ್ರವನ್ನು ಬರೆಯಲಾಗಿದೆ. ಮಾನ್ಯ ಚಂದದಾರರು ತಮ್ಮ ಬಾಕಿಯನ್ನು ಕಳುಹಿಸಿ, ನವೀಕರಿಸಿಕೊಳ್ಳುವಂತೆ ಇನ್ನೊಮ್ಮೆ ನಮ್ಮ ಕೋರಿಕೆ.

**ಸಂಪಾದಕಿ : ಪಟ್ಟಡ ಶೀಲಾಮಣಿ, ದೂರವಾಣಿ : 0821 / 516771**

**ಮಿಲಿಟರಿ** 10. **ಮಂಡ್ಯ** 7, 16, 25, 29, 31, 43. **ಮೈಸೂರು ಜಿಲ್ಲೆ** 20, 22, 23, 30, 49, 51.
**ಮಡಿಕೇರಿ ನಗರ** 44, 78, 89, 139, 144, 145, 151. **ಇತರ ಕಡೆಗಳಿಗೆ** 1, 6, 7,18, 22, 26, 31, 52, 58, 64.
**ದಕ್ಷಿಣ ಕನ್ನಡ** 11, 13, 14, 17, 19, 21, 26, 30, 31, 32, 33, 37, 40, 43, 68.
**ಮೈಸೂರು** 16, 27, 30, 38, 44, 59, 72, 76, 77, 84, 99, 101, 103, 116, 117, 145, 187, 191, 193, 204, 206, 209, 216, 222, 228, 235, 237, 239, 241, 242, 259.
**ಬೆಂಗಳೂರು** 9, 41, 74, 82, 93, 94, 110, 122, 132, 139, 148, 151, 157, 159, 184, 186, 194, 195, 197, 199, 203, 206, 207, 215, 217, 223, 225, 228, 230, 233, 238, 239, 240, 242, 245, 247, 250, 253, 254, 255, 258, 260, 261, 262, 264, 265, 266, 271, 288, 289, 293, 319.
**ಕೊಡಗು** 5, 7, 9, 12, 13, 18, 26, 28, 29, 40, 41, 42, 50, 55, 64, 65, 90, 128, 136, 139, 144, 156, 157, 162, 204, 211, 212, 216, 220, 243, 249, 252, 255, 258, 263, 265, 297, 304, 309, 315, 332, 342, 347, 349, 352, 356, 357, 361, 362, 363, 364, 366, 368, 376, 377, 384, 392, 396, 403, 406, 412, 413, 419, 420, 421, 423, 424, 425, 428, 430, 432, 434, 437, 439, 445, 449, 454, 460, 463, 479, 483, 486, 490, 491, 492, 493, 496, 499, 502, 503, 504, 505, 507, 515, 517, 518, 519, 523, 528, 534, 536, 540, 541, 543, 545, 546, 547, 548, 552, 554, 556, 558, 562, 563, 564, 567, 570, 572, 575, 579, 585, 597, 598, 603, 605, 606, 607, 608, 609, 611, 614, 622, 628, 633, 635, 636, 641, 642, 644, 668, 674, 680, 682, 685, 689, 690, 691, 693, 694, 695, 696, 702, 703, 705, 708, 710, 712, 713, 715, 717, 719, 720, 722, 723, 732, 733, 734,738, 739,740,741,744,747,752,754,755, 757, 759,760, 762, 764,770,771, 772,774, 776,778,780,785,788, 790,793, 794, 795,796, 797, 798, 803, 804, 805, 806, 808, 814,817,819,823,831, 842,843, 848,850,858,881,901,907,909,915,916,917,919,922, 923,928, 929, 930, 936, 937, 941, 942, 945, 947, 949, 951, 952, 963, 979, 991, 993, 994, 1005, 1024,1039,1046.

## ವರ ಬೇಕಾಗಿದೆ

26 ವರ್ಷ 5'4" ಎತ್ತರದ ಆರೋಗ್ಯವಂತೆಯಾದ B.A. ಆಗಿರುವ ಕನ್ಯೆಗೆ ಪಧವೀದರ ಉದ್ಯೋಗಸ್ತರು, ಕೃಷಿಕರು, ವ್ಯಾಪಾರಸ್ಥರಾಗಿರುವ ಕೊಡಗು ಗೌಡ ಜನಾಂಗಕ್ಕೆ ಸೇರಿದ ವಿಶಾಲ ಹಾಗೂ ಉದಾರ ಮನೋಭಾವದ ವರನ ಅಗತ್ಯವಿದೆ. ಆಸಕ್ತರು ಕೂಡಲೇ ಸಂಪರ್ಕಿಸಿ

**ಸಂಪರ್ಕಿಸಿ :** ಬಾಕ್ಸ್ ನಂ. 8
C/0 ಕೊಡಗು ಸಂಗಾತಿ, ನಂ. 36,
ಸವಿತಾ ನಿಲಯ, 1ನೇ ಕ್ರಾಸ್, 4ನೇ ಬ್ಲಾಕ್,
ಕೊಡಗು ಗೌಡ ವಿದ್ಯಾರ್ಥಿ ಭವನ ಹಿಂಭಾಗ ರಸ್ತೆ,
ಜಯಲಕ್ಷ್ಮಿ ಪುರಂ, ಮೈಸೂರು -12

## ದ್ವಿತೀಯ ವರ್ಷದ ಪುಣ್ಯಸ್ಮರಣೆ

**ದಿ|| ಕಟ್ಟೆಮನೆ ಗಣಪತಿ (ಮಂಜು)** ಶಿಸ್ತಿನ ಸಿಪಾಯಿ ಆಗಿ 15 ವರ್ಷದ ದೇಶ ಸೇವೆ ಮಾಡಿ ಮನೆಗೆ ಹಿಂತಿರುಗಿ ಗುಂಡಿನ ದುರ್ಮರಣಕ್ಕೆ ಬಲಿಯಾಗಿ ಎರಡು ವರ್ಷ ಸಂದರೂ ನಿಮ್ಮ ಸವಿನೆನಪು ಮಾತ್ರ ಸದಾ ನಮಗಿಂದು ಉಳಿದಿದೆ.



ಜನನ : 17-3-1961
ಮರಣ : 17-4-1999

ಪರಮಾತ್ಮನು ನಿಮ್ಮ ಯೋಧಾತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ನಾವು ಅನುದಿನವೂ ಪ್ರಾರ್ಥಿಸುತ್ತೇವೆ.

ಪತ್ನಿ : **ಕಟ್ಟೆಮನೆ ಸುಧಾ ಗಣಪತಿ**
ಮಕ್ಕಳು : **ಪರವೀಣ್ ಗಣಪತಿ, ಅಮೂಲ್ಯ ಗಣಪತಿ**
ಪ್ರಕಟಣೆ : **ತೇನನ ರಾಜೇಶ್ ಸೋಮಣ್ಣ**, ಬೆಂಗಳೂರು.

## ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಸಂಗಾತಿಯು ಐದನೇ ವರ್ಷಕ್ಕೆ ಪಾದರ್ಪಣೆ | - ಸಂಪಾದಕೀಯ | 02 |
| ಪೆರಾಜೆಯಲ್ಲಿ ಜರುಗಿದ ಭಗವತಿ ದೊಡ್ಡಮುಡಿ ಉತ್ಸವ | - ಎಂ. ಆರ್. ಗೋಪಾಲ್ | 03 |
| ಕವನ : ನಾನು ಪೈಲಟ್ ಆಗುವೆ | - ವಾಣಿ ಕುಮಾರ್ | 03 |
| ಜನಸೇವೆ ಮಾಡುಲ್ಲಿ ರಾಜಕೀಯ ಸಲ್ಲದು : ಕೇಂದ್ರ ಜವಳಿ ಮತ್ತು ಕೈಮಗ್ಗ ನಿರ್ದೇಶಕ ತಳೂರು ಕಿಶೋರ್‌ಕುಮಾರ್ | - ಪಟ್ಟಡ ಶಿವಕುಮಾರ್ | 04 |
| ರಾಜಾಸೀಟು : ನಿಸರ್ಗದ ಸಿರಿ, ಸಂಪತ್ತು | - ಅನಿಲ್. ಎಚ್. ಟಿ. | 05 |
| ಚುಟುಕು | - ಚಂಡೀರ ಸುಮಿತ್ರ ಅಪ್ಪಾಜಿ | 06 |
| "ಗೌಡ ಸಮ್ಮೇಳನ" ನಡೆಸಿ ತಮ್ಮ ಸಂಸ್ಕೃತಿ ಬಿಂಬಿಸುವ ನಿರ್ಧಾರ, ಗೌಡ ಸಾಂಸ್ಕೃತಿಕ ಅಕಾಡೆಮಿಯ ವಾರ್ಷಿಕ ಮಹಾಸಭೆಯ ಅಂಗೀಕಾರ | - ಪಟ್ಟಡ ಶಿವಕುಮಾರ್ | 07 |
| ಅರೆಭಾಷೆ ಗೌಡರು ಹಾಗೂ ಅವರ ಭಾಷೆಯ ಹಿನ್ನೋಟ | - ಬೈತಡ್ಕ ಎ. ಬೆಳ್ಯಪ್ಪ | 08 |
| ಕವನ : ಓ.... ಪ್ರಿಯತಮೆ | - ಬಾರಿಕ್ಕೇರ ಮಂಜು ನಾಗರಾಜ್ | 09 |
| ಗೌಡ ಕನ್ನಡ ಎಂಬ ಕನ್ನಡದ ಪ್ರಭೇದ | - ಪ್ರೊ. ಕೋಡಿ ಕುಶಾಲಪ್ಪ ಗೌಡ | 10 |
| ವ್ಯಕ್ತಿ ಪರಿಚಯ : ಶ್ರೀಮತಿ ಕೆ.ಎಸ್. ಜಾನಕಿ ದೇವಪ್ಪ. | - ಚಿಲ್ಲನ ಗೀತಾ ಗಿರೀಶ್ | 12 |
| ಬೊಜ್ಜ : ಸಾವಿನ ಸಾಂಕೇತಿಕ ಪ್ರತಿನಿಧೀಕರಣ | - ಡಾ. ಪುರುಷೋತ್ತಮ ಬಿಳಿಮಲೆ | 13 |
| ಕೊಡಗು ಸಂಗಾತಿ ಲಾಟರಿ (ಅದೃಷ್ಟ) ಯೋಜನೆ ಮತ್ತು ಫಲಿತಾಂಶ | - ಮಂಜ್ಞಾಪುರ ಧರಣಿ ಗಣಪತಿ | 16 |
| ಕವನ : ಪ್ರೌಢ ಕೋಗಿಲೆ | - ಬಿಟ್ಟೀರ ಚೋಂದಮ್ಮ ಶಂಭು | 16 |
| **ಅರೆಭಾಷಿಕ ವಿಭಾಗ** | | |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 31 | - ಶಂಕರನ ಬಸಪ್ಪ | 17 |
| ಕವನ : ಮಣ್ಣಿನ ಮಕ್ಕಳಿಗೆ | - ಯನ್. ಪದ್ಮನಾಭಗೌಡ | 20 |
| ಪತ್ರವಿಭಾಗ | - ತೆಕ್ಕಡೆ ಬಿ. ರಘುನಾಥ | 20 |
| ಹಟ ಬೇಕು - 8 | - ಪಟ್ಟಡ ಪ್ರಭಾಕರ | 20 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35, "ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **95821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಕುಂಭಗೌಡನ ಪ್ರವೀಣ್‌ಕುಮಾರ್, ವೆಜಿಟೆಬಲ್ ಶಾಪ್, ಪಾಂಡನ ಕಾಂಪೌಂಡ್, ಅಪ್ಪಯ್ಯಗೌಡ ರಸ್ತೆ, ಮಡಿಕೇರಿ, |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಸಂಗಾತಿಯು ಐದನೇ ವರ್ಷಕ್ಕೆ ಪಾದರ್ಪಣೆ

ಕೊಡಗು ಸಂಗಾತಿ ಹುಟ್ಟಿ 4 ವರ್ಷಗಳನ್ನು ಕಳೆದು 5ನೇ ವರ್ಷಕ್ಕೆ ಕಾಲಿಡುತ್ತಿದೆ. ಸಂಗಾತಿ ಕೊಡಗಿನ ಗೌಡರ ಸಂಸ್ಕೃತಿ, ಇತಿಹಾಸ ಮತ್ತು ಅರೆಭಾಷೆಯ ಲೇಖನಗಳನ್ನು ಪ್ರಕಟಿಸಿ ನಶಿಸಿ ಹೋಗುತ್ತಿರುವ ಸಂಸ್ಕೃತಿಯನ್ನು ಪುನಶ್ಚೇತನಗೊಳಿಸುವುದಕ್ಕೆ ಗೌಡರ ಇತಿಹಾಸದ ಬಗ್ಗೆ ಬೆಳಕನ್ನು ಚೆಲ್ಲುವ ದಿಶೆಯಲ್ಲಿ ಮರೆತೇ ಹೋಗುತ್ತಿದೆ ಎಂಬ ರೀತಿಯಲ್ಲಿದ್ದ ಅರೆಭಾಷೆಯನ್ನು ಯುವಪೀಳಿಗೆಗೆ ತಿಳಿಸುವ ಕೆಲಸವನ್ನು ಮಾಡಿದೆ.

ಭಾರತೀಯ ಸಂಸ್ಕೃತಿ ವೈವಿಧ್ಯರೂಪದಿಂದ ಪ್ರಾದೇಶಿಕ, ಧರ್ಮ, ಜಾತಿ, ಹಾಗೂ ವಿವಿಧ ಭಾಷೆಗಳ ಬುನಾದಿಯ ಮೇಲೆ ನಿಂತಿದೆ. ಒಂದು ಕಟ್ಟಡದ ತಳಪಾಯ ಯಾವ ರೀತಿಯಲ್ಲಿ ಕಲ್ಲು, ಮರಳು, ಮಣ್ಣು, ಸಿಮೆಂಟಿನಿಂದ ನಿರ್ಮಿತವಾಗಿದೆಯೋ ಅದೇ ರೀತಿ, ವಿವಿಧ ಭಾಷೆ, ಧರ್ಮ,ಜಾತಿ ಸಂಸ್ಕೃತಿಗಳಿಂದ ಹಾಸುಹೊಕ್ಕಾಗಿ ಬೆಳೆದ ಸಂಸ್ಕೃತಿಯಾಗಿದೆ. ಇದರಲ್ಲಿ ಯಾವ ರೀತಿ ಕಟ್ಟಡದ ತಳಪಾಯಕ್ಕೆ ಹಾಕಿರುವ ಕಲ್ಲು, ಮಣ್ಣು ಯಾ ಸಿಮೆಂಟ್ ನಾಶವಾದರೆ ಕಟ್ಟಡದ ತಳಪಾಯವೇ ಹಾಳಾಗಿ ಕಟ್ಟಡವೇ ಉರುಳುವ ರೀತಿಯಲ್ಲಿ ಯಾವುದೇ ಭಾಷೆ, ಜಾತಿಯ, ಧರ್ಮದ ಪ್ರಾದೇಶಿಕ ಸಂಸ್ಕೃತಿ ನಾಶವಾದರೆ ಭಾರತೀಯ ಸಂಸ್ಕೃತಿಯ ಅಡಿಪಾಯವೇ ನಾಶವಾಗುವ ಪರಿಸ್ಥಿತಿ ಉಂಟಾಗಬಹುದು.

ಕೆಲವರು ಅರೆಭಾಷೆ ಎಂದರೆ ಜಿಜ್ಞಾಸೆ ಪಡುತ್ತಿರುವುದನ್ನು ಕೆಲವು ಲೇಖನಗಳಿಂದ ತಿಳಿಯುತ್ತದೆ. ಅರೆ ಭಾಷೆ ಎಂದರೆ ಗೌಡರಾಡುವ ಭಾಷೆ ಎಂದರ್ಥವಲ್ಲ. ಈ ಅರೆಭಾಷೆಯನ್ನು ಹವೀಕ ಬ್ರಾಹ್ಮಣರು ಆಡುವ ಕನ್ನಡವನ್ನು ಅರೆಭಾಷೆ ಎಂದೇ ಕರೆಯುತ್ತಾರೆ. ಅದೇ ರೀತಿ ಕುಂಬಾರರೂ, ಜೇನು ಕುರುಬರು, ಸೋಲಿಗರೂ ಅವರಾಡುವ ಭಾಷೆಯನ್ನು ಅರೆಭಾಷೆ ಎಂದೇ ಕರೆಯುತ್ತಾರೆ. ಅರೆಭಾಷೆ ಎಂದರೆ ಗೌಡರ ಭಾಷೆ ಮಾತ್ರ ಎಂದರ್ಥವಲ್ಲ. ನಡುಗನ್ನಡದ ಪಳೆಯುಳಿಕೆಯೇ ಅರೆಭಾಷೆ (ಅರೆಬಾಸೆ) ಯಾಗಿದೆ. ಹೊಸಗನ್ನಡವು ಬಯಲು ಸೀಮೆಯಲ್ಲಿ ಸೀಮಂತವಾಗಿ ಬೆಳೆದರೆ ನಡುಗನ್ನಡವು ಪಶ್ಚಿಮ ಘಟ್ಟದ ಮಲೆನಾಡು ಪ್ರದೇಶಗಳಲ್ಲಿ ಉಳಿದು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಪ್ರಾದೇಶಿಕ ಭಾಷೆಯಾಗಿ ಇಂದು ಕೆಲವು ಜನಾಂಗದವರಿಂದ ಮಾತ್ರವೇ ಮಾತನಾಡಿಸಿಕೊಳ್ಳುವಂತಾಗಿದ. ಅರೆಭಾಷೆ (ಅರೆಬಾಸೆ) ಕನ್ನಡದ ಹಿಂದಿನ ರೂಪಾಂತರವಾಗಿದೆ ಯಲ್ಲದೆ ಎಂದೂ ನೀವು ತಿಳಿದಂತೆ ಅರ್ಧಭಾಷೆಯಂತೂ ಖಂಡಿತಾ ಅಲ್ಲಾ. ಅರೆ ಅಂದರೆ ಓದುವ ಅಥವಾ ಬರೆಯುವ ಭಾಷೆಯಲ್ಲಿ ಕೆಲವು ಅಕ್ಷರಗಳನ್ನು ಬಿಟ್ಟು ಆಡುವ ಭಾಷೆಗೆ ಅರೆಭಾಷೆ ಎನ್ನುತ್ತಾರೆ. ಉದಾ ಹರಣೆಗೆ " ಹೋಗುತ್ತೇನೆ" ಎಂಬ ಪದದಲ್ಲಿ "ಗುತ್ತೇ" ಎಂಬೆರಡು ಅಕ್ಷರಗಳನ್ನು ಬಿಟ್ಟಾಗ "ಹೋನೆ" ಎಂಬುದಾಗಿಯೂ, "ಬರುತ್ತೇನೆ" ಎಂಬ ಪದದಲ್ಲಿಯೂ ಸಹ "ರುತ್ತೇ" ಎಂಬ ಅಕ್ಷರಗಳನ್ನು ಬಿಟ್ಟು "ಬನ್ನೆ" ಎಂಬುದಾಗಿ ಉಪಯೋಗಿಸುವುದಕ್ಕೆ ಅರೆಭಾಷೆ ಎಂಬುದಾಗಿ ಕರೆಯುತ್ತಾರೆ. ಅರೆಗೌಡರು ಎಂಬುದಾಗಿ ಯಾರಾದರು ಕರೆದರೆ ಅದು ಆ ರೀತಿ ಕರೆಯುವವರ ಅಜ್ಞಾನವನ್ನು ತೋರಿಸುತ್ತದೆ. ಆ ರೀತಿ ಹೇಳುವವರಿಗೆ ತನ್ನ ತಪ್ಪು ಏನೆಂಬುದನ್ನು ತಿಳಿದವರು ತಿಳಿ ಹೇಳಬೇಕು. ಬಹುಷಃ ಅರೆಗೌಡರೆಂದು ಕರೆದವರು ಅರೆಭಾಷೆಯನ್ನಾಡುವ ಗೌಡರನ್ನು ಹಿಯ್ಯಾಳಿಸುವುದಕ್ಕಾಗಿ ಕರೆದರೆಂದು ಹೇಳುವುದಕ್ಕಾಗುವುದಿಲ್ಲ. ಸೋಮವಾರ ಪೇಟೆ ಕಡೆಯ ಒಕ್ಕಲಿಗ ಗೌಡರು ಅರೆಭಾಷೆ ಮಾತಾಡುವ ಗೌಡರನ್ನು ಅರೆಗೌಡರೆಂದು ಕರೆಯುವುದನ್ನು ಸಂಗಾತಿಯ ಗಮನಕ್ಕೆ ಬಂದಿದೆ. ಹಾಗೆ ಕರೆದವರಿಗೆ ತಿಳಿ ಹೇಳಿದಾಗ ಒಪ್ಪಿಕೊಳ್ಳುತ್ತಾರೆ. ಇದಕ್ಕಾಗಿ ಜಿಜ್ಞಾಸೆ ಪಡುವ ಅವಶ್ಯಕತೆ ಇಲ್ಲ. ಡಾ|| ಪರಮೇಶ್ವರ ಭಟ್ಟರು ಹವೀಕರಾಡುವ ಭಾಷೆಗೆ ಹವೀಕ ಕನ್ನಡ. ಗೌಡರಾಡುವ ಅರೆಭಾಷೆಗೆ ಗೌಡ ಕನ್ನಡವೆಂದು ಕರೆದಿದ್ದಾರೆ. ಆದರೆ ಸಾಮಾನ್ಯ ಜನರು ಎಲ್ಲಾ ಜಾತಿಯಲ್ಲಿ ಅರೆಭಾಷೆ ಎಂದು ಕರೆಯುತ್ತಾರೆ.


ಕೊಡಗು ಸಂಗಾತಿ ತನ್ನ ಚಂದದಾರರಿಗೆ ಗೌಡ ಜನಾಂಗದ ಸಂಘ ಸಂಸ್ಥೆಗಳು ಕೊಡಗಿನಲ್ಲೂ ಹಾಗೂ ಕೊಡಗಿನಿಂದ ಹೊರ ಪ್ರದೇಶಗಳಲ್ಲಿ ಈ ನಾಲ್ಕು ವರ್ಷಗಳಲ್ಲಿ ನಡೆಸಿದ ಕಾರ್ಯಕ್ರಮ ಗಳನ್ನು ಇಲ್ಲಿನ ಜನರು ತಮ್ಮ ಜೀವನದಲ್ಲಿ ಸಾಧಿಸಿದ ಸಾಧನೆಗಳನ್ನು ಸಾಂಸ್ಕೃತಿಕ ಚಟುವಟಿಕೆಗಳನ್ನು ಯುವಕ ಯುವತಿಯರಿಗೆ ಸರ್ಕಾರದಿಂದ ಹಾಗೂ ಖಾಸಗಿ ಕಂಪನಿಗಳ ಉದ್ಯೋಗಾವಕಾಶವನ್ನು ಪ್ರಕಟಿಸಿ ತಿಳುವಳಿಕೆಯನ್ನು ಕೊಟ್ಟು ಉಪಕಾರ ಮಾಡಿದೆ. ಅಲ್ಲಲ್ಲಿ ನಡೆಯುವ ಉತ್ಸವ, ಮದುವೆ ಕಾರ್ಯಗಳ ವಿಷಯದಲ್ಲೂ ಸಂಗಾತಿಯ ಗಮನಕ್ಕೆ ಬಂದದ್ದನ್ನು ಪ್ರಕಟಿಸಿದೆ. ಸುಮಾರು 150ಕ್ಕಿಂತಲೂ ಹೆಚ್ಚಿನ ಬರಹಗಾರರನ್ನು ಹುಟ್ಟು ಹಾಕಿದೆ. ಜನಾಂಗದಲ್ಲಿ ಸಾಹಿತ್ಯದ ಅಭಿರುಚಿ ಹುಟ್ಟಲು ಪ್ರೇರೇಪಿಸಿದೆ. ಈ ರೀತಿಯಾಗಿ ಗೌಡರ ಸಂಸ್ಕೃತಿ, ಭಾಷೆ, ಇತಿಹಾಸದ ವಿಷಯದಲ್ಲಿ ಮುಂದಿನ ಪೀಳಿಗೆಗೆ ತಿಳಿಯುವಂತೆ ಮಾಡಿದೆ. ಅಲ್ಲದೆ ಇನ್ನೂ ಮುಂದಕ್ಕೂ ಜನರಿಂದ ಜನರಿಗೆ ಸಂಪರ್ಕ ಕಲ್ಪಿಸುವ ಒಂದು ಮಾಧ್ಯಮವಾಗಿ ಕೆಲಸ ಮಾಡಲು ಬಯಸುತ್ತದೆ.

ಯಾವ ಕಾರ್ಯದಲ್ಲೂ ಸಂಗಾತಿಯ ಕಡೆಯಿಂದ ಸಮಾಜದ ಸಂಸ್ಕೃತಿ, ಭಾಷೆ, ಆರೋಗ್ಯ, ವಿದ್ಯಾಭಿವೃದ್ಧಿ ಆರ್ಥಿಕ ರಾಜಕೀಯ ಉನ್ನತಿಯನ್ನು ಬಯಸಿ ಕೆಲಸಮಾಡುವ ನಿಟ್ಟಿನಲ್ಲಿ ಈ ವರೆಗೆ ಸಿಕ್ಕಿದ ಪ್ರೋತ್ಸಾಹ ಮುಖ್ಯ. ಮೆಚ್ಚಿಗೆಗಳನ್ನು ಮುಂದಕ್ಕೂ ನಿರೀಕ್ಷಿಸುತ್ತದೆಂದು ಸಂಗಾತಿ ತಿಳಿಸಲು ಸಂತೋಷ ಪಡುತ್ತದೆ.

— ಸಂಗಾತಿ

ಒಳ್ಳೆಯ ಗುಣಗಳು ವಜ್ರ ವೈಡೂರ್ಯಗಳಿಗಿಂತ ಬೆಲೆ ಉಳ್ಳದ್ದು

# ಪೆರಾಜೆಯಲ್ಲಿ ಜರುಗಿದ ಭಗವತಿ ದೊಡ್ಡಮುಡಿ ಉತ್ಸವ



ಶ್ರೀ ಭಗವತಿ ದೊಡ್ಡಮುಡಿ ಒಂದು ನೋಟ

ಪೆರಾಜೆ ಶಾಸ್ತಾವು ದೇವಾಲಯದಲ್ಲಿ ಜರುಗುವ ಕಾಲಾವಧಿ ಜಾತ್ರೋತ್ಸವವು ಮಾರ್ಚ್ 26ರಂದು ಶಾಸ್ತಾವು ದೇವರ ಬಲಿಯೊಂದಿಗೆ ಪ್ರಾರಂಭವಾಯಿತು. 27ರ ಬೆಳಿಗ್ಗೆ ಹಗಲು ದರ್ಶನ ಬಲಿ, ತುಳು ಕೋಲದ ಬೆಳ್ಳಾಟ, ಕರಿ ಮಗನ್ ಈಶ್ವರನ್ ದೈವಗಳು, 29ರಂದು ಪಳ್ಳಿಯಾರ ಬಾಗಿಲು ತೆರೆಯುವ ಉತ್ಸವ ಮತ್ತು ಕರಿಂತಿರಿ ನಾಯರ್, ಪುಲಿಮಾರುತನ್ ದೈವಗಳು, 30ರಂದು ಕಾಳಪುಲಿಯನ್, ಪಿಲಿಕಂಡನ್ ಮತ್ತು ಇತರ ದೈವಗಳು ಜರುಗಿದವು. ಮುನ್ನಾದಿನ ಆಕಾಶವಾಣಿ ಕಲಾವಿದೆ ಕು. ಮಂಜುಳಾ ಅವರಿಂದ ಭಕ್ತ ಪ್ರಹ್ಲಾದ ಹರಿಕಥಾ ಪ್ರಸಂಗ ಜರುಗಿತು. ಮಾರ್ಚ್ 31ರಂದು ರಾತ್ರಿ ಈಶ್ವರನ್ ದೈವ, ಪೊಲ್ಲೂರು ಕಣ್ಣನ್, ಬೆಳ್ಳಾಟ, ವಿಷ್ಣುಮೂರ್ತಿ ತೊಡಂಜಲು, ರಕ್ತೇಶ್ವರಿ ತೊಡಂಜಲು, ಪೊಟ್ಟನ್ ದೈವರ ತೊಡಂಜಲು, ಬೇಟೆ ಕರಿಮಗನ್ ಬೆಳ್ಳಾಟ, ಆಯರ್ ಭಗವತಿ ತೊಟ್ಟಂ, ಮಟಿಕ್ಕಾರಿ ತಿರುವಪ್ಪಗಳು ಜರುಗಿದವು.

ಏಪ್ರಿಲ್ 1ರ ಬೆಳಿಗ್ಗೆ ವಿಷ್ಣುಮೂರ್ತಿ ದೈವ ಮತ್ತು ಉಪ ದೈವಗಳು, ಅಪರಾಹ್ನ 3ಗಂಟೆಗೆ 'ಶ್ರೀ ಭಗವತಿ ದೊಡ್ಡಮುಡಿ' ಉತ್ಸವ ಜರುಗಿತು. ಸುಮಾರು 3ಸಾವಿರಕ್ಕೂ ಹೆಚ್ಚಿನ ಭಕ್ತಾದಿಗಳು ಉತ್ಸವದಲ್ಲಿ ಪಾಲ್ಗೊಂಡರು. ಮೂರು ಹಂತದಲ್ಲಿ ಜರುಗುವ ಪೆರಾಜೆ ಜಾತ್ರೆಯು ಪ್ರಥಮವಾಗಿ ದೇವರ ಜಾತ್ರೆ, ಎರಡನೇ ಹಂತದಲ್ಲಿ ತುಳು ಭೂತಗಳ ಜಾತ್ರೆ, ಕೊನೆಯ ಹಂತದಲ್ಲಿ ಮಲಯಾಳ ಭೂತಗಳ ಜಾತ್ರೆಗಳು ಜರುಗುತ್ತವೆ. ಮಾರ್ಚ್ 26ರಿಂದ ಏಪ್ರಿಲ್ 10ರ ವರೆಗೂ ಸುದೀರ್ಘವಾಗಿ ಜಾತ್ರೆ ನಡೆಯುತ್ತವೆ. ನೂರೊಂದು ಭೂತಗಳನ್ನೊಳಗೊಂಡ ಪೆರಾಜೆ ಜಾತ್ರೆಯಲ್ಲಿ ತುಳು -ಕೊಡಗ-ಮಲಯಾಳಿ ಭೂತಗಳ ಸಮ್ಮಿಲನವಾಗಿದೆ.

ಏಪ್ರಿಲ್ 5ರಂದು ಕರಿಭೂತ ಕೋಮಾಳಿ ಕೋಲ, ರಾತ್ರಿ ಯಕ್ಷಗಾನ ಬಯಲಾಟ, ತಾ. 6ರಂದು ಕರಿಭೂತ ಹರಕೆ ಕೋಲಗಳು, ಶಾಸ್ತಾವು ಯಕ್ಷಗಾನ ಕಲಾಸಂಘ, ಪೆರಾಜೆ ಇವರಿಂದ ಭೀಷ್ಮ ವಿಜಯ ನಡೆಯಿತು.

ದಿನಾಂಕ 9ರಂದು ರಾತ್ರಿ ಸ್ಥಳೀಯ ಯುವಶಕ್ತಿ ಕ್ರೀಡಾ ಮತ್ತು ಕಲಾ ಸಂಘದ ವತಿಯಿಂದ ಹೊನಲು ಬೆಳಕಿನ, ಮುಕ್ತ ಕಬಡ್ಡಿ ಪಂದ್ಯಾಟ ನಡೆಯಿತು. ಅಂದು ಮಹಾ ವಿಷ್ಣುಮೂರ್ತಿ ಒತ್ತೆಕೋಲಕ್ಕೆ ಕೂಡಿ, ಏಪ್ರಿಲ್ 10ರಂದು ಜಾತ್ರಾ ವಿಶೇಷದಲ್ಲೊಂದಾದ ಮಹಾವಿಷ್ಣುಮೂರ್ತಿ ಒತ್ತೆಕೊಲ ಜರುಗಿತು.

ಸುಮಾರು 3000ಕ್ಕೂ ಹೆಚ್ಚು ಭಕ್ತಾದಿಗಳು ಶ್ರದ್ಧಾಭಕ್ತಿಯಿಂದ ಪಾಲ್ಗೊಂಡರು

— ವರದಿ : ಎಂ. ಆರ್. ಗೋಪಾಲ್,ಪೆರಾಜೆ.

---

## ಕವನ: ನಾನು ಪೈಲಟ್ ಆಗುವೆ

ನಿತ್ಯ ಶಾಲೆಗೆ ಹೋಗಿ ನಾನು  
ವಿದ್ಯೆಯನ್ನು ಕಲಿಯುವೆ |  
ಮುಂದೆ ವಾಯುಸೇನೆ ಸೇರಿ  
ನಾನು ಪೈಲಟ್ ಆಗುವೆ ||೧||

ಶ್ರದ್ಧೆಯಿಂದ ತರಬೇತಿ ಮುಗಿಸಿ  
ಧೀರ ಪೈಲಟ್ ಆಗುವೆ |  
ದೇಶ ವಿದೇಶಕೆ ಗಗನದಲ್ಲಿ  
ವಿಮಾನವನ್ನು ಹಾರಿಸುವೆ ||೧||

ಕಾರು ಜೀಪುಗಳನ್ನು ಓಡಿಸಿ  
ನಾನೇ ಚಾಲಕನಾಗುವೆ |  
ಯುದ್ಧದಲಿ ತೊಡಗಿ ವಿಮಾನ ಹಾರಿಸಿ  
ಸ್ವದೇಶ ರಕ್ಷಣೆ ಮಾಡುವೆ ||೧||

ನಾನು ಪೈಲಟ್ ಆಗುವೆ

— ವಾಣಿ ಕುಮಾರ್ ಮಂಡೆಕೋಲು

---

ವ್ಯಾಮೋಹದಿಂದಭ್ರಾಂತಿ ಹುಟ್ಟುತ್ತೆ.

# ಜನಸೇವೆ ಮಾಡುವಲ್ಲಿ ರಾಜಕೀಯ ಸಲ್ಲದು : ಕೇಂದ್ರ ಜವಳಿ ಮತ್ತು ಕೈಮಗ್ಗ ನಿರ್ದೇಶಕ ತಳೂರು ಕಿಶೋರ್‌ಕುಮಾರ್



ಅವಕಾಶವಾದಿ ರಾಜಕಾರಣಕ್ಕೆ ಕಟ್ಟುಬೀಳದೆ, ತನ್ನ ನಿಷ್ಠೆ, ಪ್ರಾಮಾಣಿಕತೆ ಮತ್ತು ಎಡೆಬಿಡದ ಶ್ರಮದ ಮೂಲಕ ತನ್ನ ಕಿಶೋರಾವಸ್ಥೆ ಯಲ್ಲೆ ಉನ್ನತ ಸ್ಥಾನಕ್ಕೇರಿದ ನಮ್ಮ ಜನಾಂಗದ ವ್ಯಕ್ತಿ ತಳೂರು ಕಿಶೋರ್‌ಕುಮಾರ್‌ರವರು. ಹಗಲಿರಲಿ, ಇರುಳಿರಲಿ ಯಾರೇ ಬಂದು ಸಹಾಯ ಕೇಳಲಿ ಸಮಸ್ಯೆಗೆ ಸ್ಪಂದಿಸುವ ಇವರ ದೊಡ್ಡಗುಣ, ದೊಡ್ಡ ಸ್ಥಾನಮಾನವನ್ನೆ ಇವರಿಗೆ ದೊರಕಿಸಿಕೊಟ್ಟಿದೆ. ಕೇಂದ್ರ ಸರ್ಕಾರದ ಜವಳಿ ಮತ್ತು ಕೈಮಗ್ಗ ನಿಗಮದ ನಿರ್ದೇಶಕರಾಗಿ ಕರ್ನಾಟಕದಿಂದ ಆಯ್ಕೆಯಾಗಿರುವ ಏಕೈಕ ವ್ಯಕ್ತಿ ಶ್ರೀ ತಳೂರು ಕಿಶೋರ್‌ಕುಮಾರ್‌ರವರು. ಇವರನ್ನು 'ಕೊಡಗು ಸಂಗಾತಿ'ಮಾತನಾಡಿಸಿದಾಗ ಅವರಾಡಿದ ಬಿಚ್ಚು ನುಡಿಗಳನ್ನು ನಿಮ್ಮ ಮುಂದಿಡುದ್ದೇವೆ.

**ಕೊ.ಸಂ:** ಗೌಡ ಜನಾಂಗಕ್ಕೆ ತಮ್ಮ ಪರಿಚಯ ನೀಡುವಿರಾ?

**ಉ:** ತಳೂರು ಅಚ್ಚಯ್ಯ ಮತ್ತು ಬೊಳ್ಳಮ್ಮ ದಂಪತಿಗಳ ಏಳು ಜನ ಮಕ್ಕಳಲ್ಲಿ ಕೊನೆಯವನಾದ ನಾನು ಬೆಟ್ಟಗೇರಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಮುಗಿಸಿ, ಮಡಿಕೇರಿ ಯಲ್ಲಿ ಪಿ.ಯು.ಸಿ. ಮತ್ತು ಡಿಗ್ರಿಯನ್ನು ಪಡೆದು ಮೈಸೂರಿನ ಮಾನಸಗಂಗೋತ್ರಿಯಿಂದ ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದೆನು.

**ಕೊ.ಸಂ:** ಕೇಂದ್ರ ಕೈಮಗ್ಗ ಮತ್ತು ಜವಳಿ ನಿಗಮಕ್ಕೆ ಕರ್ನಾಟಕದಿಂದ ಏಕೈಕ ವ್ಯಕ್ತಿಯಾಗಿ ಆಯ್ಕೆಯಾಗಿರುವ ನಿಮ್ಮ ಹಿಂದಿರುವ 'ಶಕ್ತಿ'ಯೇನು?

**ಉ:** ಮುಖ್ಯವಾಗಿ ನಾನು ಭಾರತೀಯ ಜನತಾ ಪಕ್ಷದಲ್ಲಿ ಸಲ್ಲಿಸಿರುವ ಪ್ರಾಮಾಣಿಕಸೇವೆ. ಇದರೊಡನೆ ಕೊಡಗು ಜಿಲ್ಲಾ ಬಿ.ಜೆ.ಪಿ. ಅಧ್ಯಕ್ಷರಾದ ಕೆ.ಜಿ. ಬೋಪಯ್ಯನವರ ಸಹಕಾರ ಹಾಗೂ ನಮ್ಮ ಪ್ರತಿನಿಧಿ ಹಾಗೂ ಕೇಂದ್ರ ಸಚಿವರಾದ ಧನಂಜಯಕುಮಾರ್‌ರವರ ಕೃಪೆಯಿಂದ ನನಗೆ ಈ ಅವಕಾಶ ಲಭಿಸಿದೆ.

**ಕೊ.ಸಂ.:** ನಿಗಮದ ನಿರ್ದೇಶಕರಾಗಿ ನಿಮ್ಮ ಹೊಣೆಗಾರಿಕೆಯೇನು?

**ಉ:** ನಾನು ಈಗಷ್ಟೇ ಆಯ್ಕೆಗೊಂಡಿದ್ದೇನೆ. ಇನ್ನು ಅನುಭವವನ್ನು ಗಳಿಸಿಕೊಳ್ಳಬೇಕಿದೆ. ಈ ನಿಗಮದಲ್ಲಿ ಒಟ್ಟು 29 ಮಂದಿ ಸದಸ್ಯರಿದ್ದಾರೆ. ಅವರಲ್ಲಿ 10ಮಂದಿ ಐ.ಎ.ಎಸ್ ದರ್ಜೆಯವರು, 10 ಮಂದಿ ಕೆ.ಎ.ಎಸ್. ದರ್ಜೆಯವರು ಉಳಿದ 9ಮಂದಿ ನಾಮಕರಣ ಸದಸ್ಯರು ಇದ್ದೇವೆ. ಇವತ್ತು ಕಸ್ಟಮ್ಸ್ ಬಿಟ್ಟರೆ ಅತ್ಯಂತ ಹೆಚ್ಚು ಆದಾಯ ಸರಕಾರಕ್ಕೆ ನೀಡುವುದು ನಮ್ಮ ನಿಗಮ. ಆದುದರಿಂದ ಸಾಕಷ್ಟು ಮಟ್ಟಿಗೆ ನಮ್ಮ ನಾಡಿಗೆ, ನಮ್ಮ ಜನತೆಗೆ ಅನುಕೂಲವಾಗುವಂತಹ ನಿರ್ಧಾರ ತಳೆಯುವ ಸಲಹೆ ಸೂಚನೆಗಳನ್ನು ನೀಡುತ್ತೇನೆ. ಕುಶಾಲನಗರದಲ್ಲಿ ಬಟ್ಟೆ ಕೈಗಾರಿಕೆ ತೆರೆಯುವ ಮತ್ತು ಮಡಿಕೇರಿಯಲ್ಲಿ ಎಲ್ಲಾ ವಿಧವಾದ ಬಟ್ಟೆ ಬರೆ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸುವ ವಿಚಾರ ಈಗ ನನ್ನ ಪರಿಶೀಲನೆಯಲ್ಲಿದೆ. ರೇಷ್ಮೆ ಬೆಳೆಗಾರರ ಹಿತಕ್ಕೂ ಆದ್ಯ ಗಮನವನ್ನು ನೀಡುತ್ತೇನೆ.

**ಕೊ.ಸಂ. :** ನೀವು ಇತರ ಯಾವಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದೀರಿ?

**ಉ:** ಸಹಕಾರ ಕ್ಷೇತ್ರಗಲ್ಲಿ ನಾನು ಸೇವೆ ಸಲ್ಲಿಸುತ್ತಿದ್ದೇನೆ. ಮಡಿಕೇರಿ ಕ್ಷೇತ್ರ "ಸಹಕಾರ ಭಾರತಿ"ಯ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಬೆಟ್ಟಗೇರಿ ವ್ಯವಸಾಯ ಸೇವಾ ಸಂಘದಲ್ಲಿ ಏಳು ವರ್ಷ ಅಧ್ಯಕ್ಷನಾಗಿ, ಈಗಲೂ ನಿರ್ದೇಶಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಬೆಟ್ಟಗೇರಿ ಉದಯ ಪ್ರೌಢಶಾಲೆಯಲ್ಲಿ 13 ವರ್ಷ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಈ ಸಂದರ್ಭದಲ್ಲಿ ಇಂಗ್ಲೀಷ್ ಮಾಧ್ಯಮ ತೆರೆಯಲು ಸಫಲ ಯತ್ನ ನಡೆಸಿದ್ದೇನೆ. ಈಗಲೂ ಕಂಪ್ಯೂಟರ್ ಮತ್ತು ವಿಜ್ಞಾನ ವಿಷಯ ತೆರೆಯಲು ಪ್ರಯತ್ನ ಮುಂದುವರೆಸಿದ್ದೇನೆ.

**ಕೊ.ಸಂ.:** ಗೌಡ ಜನಾಂಗಕ್ಕೆ ನಿಮ್ಮ ಸಲಹೆಯೇನು?

**ಉ :** ನಾನು ದುಡಿದಂತಹ ಎಲ್ಲಾಕ್ಷೇತ್ರಗಳಲ್ಲಿ ನಮ್ಮ ಜನಾಂಗಕ್ಕೆ ನೀಡಬಹುದಾದ ಎಲ್ಲಾ ಪ್ರಾತಿನಿಧ್ಯವನ್ನು ನೀಡಿದ್ದೇನೆ. ಉನ್ನತ ಸ್ಥಾನದಲ್ಲಿರುವವರು ಕಾನೂನಿನ ಚೌಕಟ್ಟಿನಲ್ಲಿ ನಮ್ಮ ಜನಾಂಗಕ್ಕೆ ಕೈಲಾದ ಸೇವೆ ಸಲ್ಲಿಸಬೇಕು. ಚುನಾವಣೆಯವರೆಗೆ ಮಾತ್ರ ರಾಜಕೀಯ ಇರಬೇಕೇ ಹೊರತು, ಸೇವೆ ಸಲ್ಲಿಸುವಲ್ಲಿ ರಾಜಕೀಯ ಮಾಡಬಾರದು. ನಮ್ಮ ಯುವಕರು ಹಿಂಜರಿಕೆ ಬಿಟ್ಟು ಆತ್ಮ ವಿಶ್ವಾಸ ಬೆಳೆಸಿಕೊಳ್ಳಬೇಕು.

**ಕೊ.ಸಂ.:** ಗೌಡ ಸಂಸ್ಥೆಗಳ ಬಗ್ಗೆ ತಮ್ಮ ಅಭಿಪ್ರಾಯವೇನು?


**ಉ :** ಇತ್ತೀಚಿನ ದಿನಗಳಲ್ಲಿ ಗೌಡ ಸಂಸ್ಥೆಗಳು ಜನಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿವೆ. ಅದರಲ್ಲೂ ಅಕಾಡೆಮಿ ಅತ್ಯುತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ವಿದ್ಯಾಸಂಘ ಮತ್ತು ಸಮಾಜಗಳು ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ.

**ಕೊ.ಸಂ.:** ಕೇಂದ್ರದಲ್ಲಿ ನಿಮ್ಮ ಪಕ್ಷದ ಮೇಲೆ 'ತೆಹಲ್ಕಾ ಡಾಟ್‌ಕಾಂ'ಆರೋಪವಿದೆಯಲ್ಲ ಮಡಿಕೇರಿ ತಾಲ್ಲೂಕು ಬಿ.ಜೆ.ಪಿ. ಪ್ರಧಾನ ಕಾರ್ಯದರ್ಶಿಯಾಗಿ ಇದರ ಬಗ್ಗೆ ಏನೆನ್ನುತ್ತೀರಿ?

**ಸುಳ್ಳುತನವೆಂಬ ಪರದೆಯನ್ನು ಮಾತ್ರ ಹಾಕಿಕೊಳ್ಳಬೇಡಿ.**

6 ನೇ ಪುಟಕ್ಕೆ

# ರಾಜಾಸೀಟು : ನಿಸರ್ಗದ ಸಿರಿ, ಸಂಪತ್ತು



ರಾಜಾಸೀಟಿನ ವಿಹಂಗಮ ನೋಟ

ಮಡಿಕೇರಿ ಎಂದಾಕ್ಷಣ ಹಲವರಿಗೆ ರಾಜಾಸೀಟಿನ ಚಿತ್ರ ಕಣ್ಮುಂದೆ ಬರಬಹುದು. ಕೊಡಗಿನ ಪ್ರಮುಖ ಪ್ರವಾಸಿ ತಾಣವಾಗಿ ಗುರುತಿಸಿಕೊಂಡಿರುವ ಮಡಿಕೇರಿಯ ರಾಜಾಸೀಟು ಸಂದರ್ಶಕರ ಆದ್ಯ ಸ್ಥಳ. ರಾಜಾಸೀಟು ಭೇಟಿಯಿಲ್ಲದೆ ಕೊಡಗು ಜಿಲ್ಲಾ ಪ್ರವಾಸ ಪರಿಪೂರ್ಣವಾಗದು.

ಕಡಿವಾಣ ಗುಡ್ಡದ ಮೇಲಿನ ಮೈದಾನದಲ್ಲಿರುವ ಉದ್ಯಾನವನದಲ್ಲಿ ಚೌರಸಿ ವಿನ್ಯಾಸವನ್ನು ಹೊಂದಿರುವ ಮಂಟಪವೇ 'ರಾಜಾಸೀಟು' ಎಂದು ಕರೆಯಲ್ಪಡುತ್ತದೆ. ಕೊಡಗನ್ನಾಳಿದ ರಾಜ ತನ್ನ ರಾಣಿಯ ಜತೆ ಈ ತಾಣದಿಂದ ನಿಸರ್ಗ ಸೌಂದರ್ಯ ವೀಕ್ಷಿಸುತ್ತಿದ್ದರಿಂದ ಇದಕ್ಕೆ 'ರಾಜಾಸೀಟು' ಎಂಬ (RAJA'S SEAT) ಹೆಸರು ಬಂತು. ರಾಜ ಕಟ್ಟಿಸಿದ ಎನ್ನಲಾದ ಮಂಟಪವು ಗಾರೆ ಮತ್ತು ಇಟ್ಟಿಗೆಗಳಿಂದ ನಿರ್ಮಿತವಾದ ಸಾಮಾನ್ಯ ಮಂಟಪವಾಗಿದ್ದು ಯಾವುದೇ ಆಕರ್ಷಣೆಯನ್ನು ಹಿಂದಿನಿಂದಲೂ ಪಡೆದುಕೊಂಡು ಬಂದಿಲ್ಲ. ಆಗಿದ್ದರೂ ರಾಜಾಸೀಟಿನಿಂದ ಕಾಣುವ ನಯನ ಮನೋಹರ ನಿಸರ್ಗ ವೈಭವವೇ ಇಲ್ಲಿನ ಪ್ರಧಾನ ಆಕರ್ಷಣೆ.


ರಾಜಾಸೀಟಿನಿಂದ ಕೆಳಗಡೆ ದೃಷ್ಟಿ ಹಾಯಿಸಿದರೆ ಹೆಬ್ಬಾವಿನಂತೆ ಅಂಕು ಡೊಂಕಾಗಿ ಮಲಗಿರುವ ಮಂಗಳೂರು - ಮಡಿಕೇರಿ ಹಾದಿ. ಅಂತೆಯೇ ಬಲು ದೂರದಲ್ಲಿ ಪರ್ವತ ಸಿಗುವ ಮಡಿಕೇರಿ ತಲಕಾವೇರಿ ರಸ್ತೆ ಕಂಡು ಬರುತ್ತದೆ. ಮಂಟಪದ ಮುಂದಿನ ಹಾದಿಯಿಂದ ನಿಂತು ನೋಡಿದರೆ, ಎತ್ತರದಲ್ಲಿ ಒಂದಕ್ಕೊಂದು ಪೈಪೋಟಿ ನೀಡುತ್ತಿರುವಂತೆ ಕಂಡು ಬರುವ ಪಶ್ಚಿಮ ಘಟ್ಟ ಶ್ರೇಣಿಯ ಶಿಖರಗಳ ಸಾಲಿದೆ.

ನಿಸರ್ಗ ಮಾತೆಗೆ ಹಸಿರು ಸೀರೆಯಂತಿರುವ ಕಾಡು, ಹೊಲ ಗದ್ದೆಗಳು ನೋಡುಗರ ಹೃನ್ಮನ ತಣಿಸುತ್ತವೆ. ಈ ಪ್ರಕೃತಿ ವೈಭವ ಸವಿಯುವ ಸಂದರ್ಶಕ ಬಲುಬೇಗನೆ ನಿಸರ್ಗದ ಮಡಿಲಿನಿಂದ ಜಾರಲು ಬಯಸಲಾರ.

ಬೆಳಗಿನ ಹೊತ್ತಿನ ರಾಜಸೀಟೇ ಬೇರೆ. ಮಂಜಿನ ಮುಸುಕು ಗಾಢವಾಗಿ ಹೊದ್ದಿರುವ ಪ್ರಕೃತಿಯಲ್ಲಿ ಸೂರ್ಯನ ಕಿರಣಗಳು ಗಾಢವಾಗಿ ಪ್ರವೇಶಿಸುವಾಗ ಅದು 'ಮುತ್ತಿನ ಹಾರ' ಆದೀತು ಬೇಕೋ ಬೇಡವೋ ಎಂಬಂತೆ ಮಂಜಿನ ರಾಶಿ ಸರಿಸಲ್ಪಟ್ಟಾಗ, ಇಬ್ಬನಿಯ 'ಪ್ರೀತಿ'ಯಲ್ಲಿ ತೊಯ್ದು ಭೂರಮೆ ಮತ್ತಷ್ಟು ಪರಿಶುಭ್ರಳಾಗಿ ಕಂಡಾಳು! ರಾಜಾಸೀಟಿನಲ್ಲಿ ಸೂರ್ಯೋದಯ ವೀಕ್ಷಣೆಗೆ ಜನರ ಸಾಲು ಇದ್ದೇ ಇರುತ್ತದೆ.

ಸುಮಾರು ಐದು ಎಕರೆ ವಿಸ್ತಾರದ ರಾಜಾಸೀಟಿನ ಹೂಬನದಲ್ಲಿ ಹಾಯಾಗಿ ಹೆಜ್ಜೆ ಹಾಕಬಹುದು. ನೆನಪಿರಲಿ ಸಂದರ್ಶಕರು ಇಡುತ್ತಿರುವ ಹೆಜ್ಜೆಯಿಂದ ಆಂಗ್ಲರ ಮಣ್ಣುಪಾಲಾದ ದೇಹವಿದೆ! ಹೌದು! ಬ್ರಿಟಿಷರ ಕಾಲದಲ್ಲಿ ಈ ರಾಜಾಸೀಟು ಆಂಗ್ಲರ ಸ್ಮಶಾನವಾಗಿತ್ತು. ಬ್ರಿಟಿಷ್ ಅಧಿಕಾರಿಗಳು ಮೃತ ದೇಹಗಳನ್ನು ಇಲ್ಲೇ ಸಮಾಧಿ ಮಾಡಲಾಗುತ್ತಿತ್ತು. ಅದರ ಪ್ರತೀಕವಾಗಿಯೇ ಇಂದಿಗೂ ರಾಜಾಸೀಟಿನಲ್ಲಿ ಕಂಡುಬರುವ ಶಿಲಾಫಲಕದಲ್ಲಿ ನಮ್ಮ ಕಾಫಿ ಮತ್ತು ಇತರ ಬೆಳೆಗಳನ್ನು ಬೆಳೆಸುವಲ್ಲಿ ಸಹಾಯ -ಸಹಕಾರ ನೀಡಿದ ಬ್ರಿಟಿಷ್ ಅಧಿಕಾರಿಗಳ ಪಾರ್ಥಿವ ದೇಹ ಇಲ್ಲಿದ್ದು, ಇವರಿಗೆ ನಾವು ಕೊಡಗಿನ ಜನತೆ ಗೌರವಪೂರ್ಣ ನಮನ ಸಲ್ಲಿಸುತ್ತೇವೆ ಎಂದು ಬರೆದು ಕೊಡಗಿನ ಜನರು ವಿಶಾಲತೆ ಮೆರೆದಿದ್ದಾರೆ. 1970ರಲ್ಲಿಯೇ ಸ್ಮಶಾನವನ್ನು ಪೂರ್ಣವಾಗಿ ಮುಚ್ಚಿ ಪುಷ್ಪವನ ನಿರ್ಮಿಸಲಾಯಿತು. ಬ್ರಿಟಿಷರ ಸ್ಮಶಾನದಲ್ಲಿ ಅರಳಿದ ಭಾರತೀಯರ ಹೂಬನ ಎಂದು ಧಾರಾಳವಾಗಿ ರಾಜಾಸೀಟನ್ನು ಕರೆಯಬಹುದು. ಮೊದಲು ರಾಜಾಸೀಟಿನ ಅಲ್ಲಲ್ಲಿ ಮರಗಳಿದ್ದು ಅದರಲ್ಲಿ ವಿಧ ವಿಧ ಪಕ್ಷಿಗಳು ನೆಲೆಗೊಂಡು ಚಿಲಪಿಲ ನಿನಾದವನ್ನು ಆ ಪರಿಸರದಲ್ಲಿ ಪಸರಿಸುತ್ತಿದ್ದವಾದರೂ 1982ರಲ್ಲಿ ಮರಗಳನ್ನು ಕಡಿದ ನಂತರವೇ ರಾಜಾಸೀಟು ಬರೀ ಬೋಳು ಬೋಳು. ಪುಷ್ಪೋದ್ಯಾನ ಇದೆಯಾದರೂ ಅತ್ಯಂತ ಆಕರ್ಷಕ ಎನಿಸುವ ಹೂಗಳೇನಿಲ್ಲ. ಪೂರ್ವದ ನಡುವಿನ ನೀರಿನ ಕಾರಂಜಿಯೂ ನೀರು ಚಿಮ್ಮಿಸುವುದು ಅಪರೂಪವೇ.

ರಾಜಾಸೀಟಿನಲ್ಲಿರುವ ಹತ್ತಾರು ದೀಪಗಳು ಎಲ್ಲವೂ ರಾತ್ರಿ ಬೆಳಗಿದರೆ ಅದೇ ಬೆಳಗ್ಗಿನ ವಿಶೇಷವಾದೀತು. ಮಂಪಟದ ಮುಂದಿನಿಂದ ನಿಸರ್ಗ ಸವಿಯೋಣ ಎಂದರೆ ಎಂಟು ವರುಷದ



ರಾಜಾಸೀಟಿನಿಂದ ಕಾಣುವ ನಿಸರ್ಗ ಸಿರಿ

ಸುಗಾರು ಮಿತ್ರರಿಲ್ಲೆಂದು ಭಾವಿಸಬೇಡಿ, ಮಾನವ ನಿನ್ನಿಂದಲೇ ಧನೋತ್ಪಾಧನೆ—ವಿವೇಕಾನಂದ

ಪ್ರಕೃತಿ ವೀಕ್ಷಣೆಗೆ ಅಡ್ಡಿಯುಂಟು ಮಾಡಲು ಪೈಪೋಟಿ ನಡೆಸಿವೆ. ಇದನ್ನು ಬೆಳೆದರೆ ಸೃಷ್ಟಿ ಸವಿಯುವುದಕ್ಕಿಂತ ರಾಜಾಸೀಟಿನ ಕಲ್ಲು ಬೆಂಚಿನಲ್ಲಿ ಕುಳಿತು ಆಕಾಶ ನೋಡಬೇಕಾದ ದಿನಗಳು ಬಂದಾವು!

ಯಾಕೆ ರಾಜಾಸೀಟನ್ನು ಮತ್ತಷ್ಟು ಚಿತ್ತಾರದಿಂದ ಮಾಡ ಲಾಗೊಲ್ಲ? ವೀಕ್ಷಣಾ ಗೋಪುರಗಳನ್ನು ನಿರ್ಮಿಸಲಾಗೊಲ್ಲ? ನೀರಿನ ಕಾರಂಜಿ....ಮೆಲು ಸಂಗೀತ ವ್ಯವಸ್ಥೆ... ವೈವಿಧ್ಯಮಯ ಹೂಗಳು... ರಾತ್ರಿಯಲ್ಲೂ ಸಮರ್ಪಕ ಬೆಳಕಿನ ವ್ಯವಸ್ಥೆ ಯಾಕಾಗೊಲ್ಲ? ಎಂದರೆ 'ಹಣ ಎಲ್ಲಿಂದ ತರೋದು ಸ್ವಾಮಿ?' ಎಂಬ ಸಿದ್ಧ ಉತ್ತರ ಅಧಿಕಾರಿ ವರ್ಗದವರಿಂದ. ಪ್ರವಾಸೋದ್ಯಮ ಕ್ಷೆಗೆ ಸೇರ್ಪಡೆಯಾಗಲು ಒಂದು ದಶಕದಿಂದಲೂ ಸಿದ್ಧವಾಗಿ ಮುಹೂರ್ತ ಕಾಯುತ್ತಿರುವ ಕೊಡಗಿನ ಪ್ರಮುಖ ಪ್ರವಾಸಿ ತಾಣದ ಗತಿಯೇ ಹೀಗಾದರೆ ಉಳಿದವುಗಳ ವಿವರಣೆ ಬೇಕಿಲ್ಲವಷ್ಟೆ. ರಾಯಚೂರು, ಗುಲ್ಬರ್ಗಗಳಿಂದ ಅತೀವ ನಿರೀಕ್ಷೆ ರಿಸಿ ಬಂದ ಪ್ರವಾಸಿಗರು ಗೊಣಗುವಂತಿದೆ. ಸರಿಯಾಗಿ ಹೂವು ಲ್ಲ. ಸೀನರಿ ನೋಡಕ್ಕೂ ಆಗಲ್ಲ. ನಾವು ಏನೋ ತಿಳ್ಕಂಡಿದ್ದೆವು. ವರದೂ ಅಂತಿಲ್ಲ. ಕೊಡಗಿನವರದೂ ಅದೇ ಸಪ್ಪೆ ಮುಖವೇ. ದರೆ ಅಭಿವದ್ಧಿ ಕಾಣದ ರಾಜಾಸೀಟು ಅವರ ಕಣ್ಣಿಗೆ ಭ್ಯಾಸವಾಗಿದೆಯಷ್ಟೇ.

ಇಂಥಹ ರಾಜಾಸೀಟಿಗೆ ಸಂಜೆ ವಾಯು ಸೇವನೆಗೆ ಬರುವ ಂದರ್ಶಕರಿಗೆ ಪ್ರತಿ ರವಿವಾರ ಸಂಗೀತದ ಆಸ್ವದ ಡೋಣವೆಂದು ಕೊಡಗು ಜಿಲ್ಲಾ ಲೇಖಕ-ಕಲಾವಿದರ ಬಳಗ ರ್ಯಕ್ರಮವೊಂದನ್ನು ಹಮ್ಮಿಕೊಂಡಿತ್ತು. ಕಿಕ್ಕಿರಿದ ಜನಸ್ತೋಮದ ನಡುವೆ ನಾಲ್ಕು ಕಾರ್ಯಕ್ರಮ ನೀಡುವಾಗಲೇ ಜಿಲ್ಲಾಡಳಿತದಿಂದ ಆದೇಶ ಬಂತು ' ರಾಜಾಸೀಟು ಸರಕಾರಿ ಆಸ್ತಿ. ಇಲ್ಲಿ ಖಾಸಗಿಯಾಗಿ ಮನರಂಜನೆ ನೀಡುವಂತಿಲ್ಲ' ತಾನೂ ಮಾಡ ಬೇರೆಯವರಿಗೂ ಬಿಡ ಎಂಬ 'ಸರಕಾರಿ ನೀತಿ ವಾಕ್ಯ' ಇಲ್ಲೂ ಸತ್ಯವಾಯಿತು. ಇನ್ನು ಮಡಿಕೇರಿ ಪುರಸಭೆ ರಾಜಾಸೀಟನ್ನು ಖಾಸಗಿ ಸಂಸ್ಥೆಯ ಮೇಲುಸ್ತುವಾರಿಗೆ ನೀಡುವ ಕನಸನ್ನು ಎರಡು ವರ್ಷದಿಂದ ಕಾಣುತ್ತಲೇ ಬಂದಿದೆ. ಜನ ನಿಟ್ಟುಸಿರು ಬಿಡುತ್ತಲೇ ಇದ್ದಾರೆ.

ಕೊಡಗಿನ ಏಕೈಕ ಮತ್ತು ಪ್ರಥಮ ರೈಲು ಎನಿಸಿರುವ 'ಬಾಬಾ ಸಾಹೇಬ್ ಎಕ್ಸ್‌ಪ್ರೆಸ್' ರಾಜಾಸೀಟಿನ ಪಕ್ಕದಲ್ಲೇ ಸಂಚರಿಸುತ್ತಿದೆ. ಈ ಪುಟಾಣಿ ರೈಲು -ಕಾವೇರಿ ಪಟ್ಟಣ, ಬ್ರಹ್ಮಗಿರಿ ಕಣಿವೆಗಳನ್ನು ಸುತ್ತು ಬಳಸಿ ಬಂದು ರೈಲಿನಿಂದಲೇ ರಾಜಾಸೀಟು ನೋಡಬಹುದಾದ ಅವಕಾಶ ಕಲ್ಪಿಸುತ್ತಿದೆ. ಕಿರಿಯರ ರೈಲಾದರೂ ಇವರಲ್ಲಿ ಹಿರಿಯರು ಆನಂದಿಸಿದ್ದೆ ಹೆಚ್ಚು!

ಮತ್ತೆ 'ರಾಜಾಸೀಟು'ಗೆ ಮರಳುವುದಾದರೆ ಚಿಕ್ಕವೀರ ರಾಜೇಂದ್ರನ ಕಾಲದಲ್ಲಿ ತಪ್ಪು ಮಾಡಿದವರಿಗೆ ರಾಜನು ಮಂಟಪದಿಂದ ಕೆಳಗಿನ ಕ್ರೂರ ಶಿಕ್ಷೆಯನ್ನು ಜಾರಿಗೊಳಿಸುತ್ತಿದ್ದ ನಂತೆ. ತಪ್ಪಿತಸ್ಥನನ್ನು ಆನೆಯ ಸೊಂಡಿಲಿನಿಂದ ಕೆಳಗಿನ ಪ್ರಪಾತಕ್ಕೆ ಎಸೆಯಲಾಗುತ್ತಿತಂತೆ. ಅಂತೆಯೇ ಕಠಿಣ ಶಿಕ್ಷೆಯಾಗಿ ಅಪರಾಧಿಯ ಶಿರಚ್ಛೇಧನ ಮಾಡಲಾಗುತ್ತಿತಂತೆ. ಹೀಗೆ ಮಾಡಿದಾಗ ರುಂಡ ಹೋಗಿ ಬೀಳುತ್ತಿದ್ದ ಸ್ಥಳವೇ ತಲೆ ಮಸಿ ಎಂದು ಕರೆಯಿಸಿಕೊಂಡು ಮುಂದೆ ಈಗಿರುವ 'ತಾಳತ್ತಮನೆ' ಎಂದು ಗ್ರಾಮವಾಯಿತು ಎಂದು ಕೆಲ ಹಿರಿಯರು ಹೇಳುವುದಿದೆ. ಅದೇನೆ ಇರಲಿ, ರಾಜಾಸೀಟು - ಆಗಿನ ರಾಜ್ಯದ ಸುಂದರ ಉಪಯುಕ್ತ ಯೋಜನೆ ಎನ್ನುವುದಕ್ಕೆ ಅಡ್ಡಿಯಿಲ್ಲ. ಸದ್ಯಕ್ಕಂತೂ ದಿನ ನಿತ್ಯ ಹತ್ತು ಹಲವು ರಾಜಾ ರಾಣಿಯರ ಜೋಡಿ ರಾಜಾಸೀಟಿನಲ್ಲಿ ಹೆಜ್ಜೆ ಹಾಕುವುದಿದೆ.

— ಅನಿಲ್. ಎಚ್.ಟಿ.

---

4 ನೇ ಪುಟದಿಂದ

ಉ : ಇದು ರಾಜಕೀಯ ದುರುದ್ದೇಶದಿಂದ ಕೂಡಿದ ಕಟ್ಟು ಕತೆ. ಜಾರ್ಜ್‌ಫರ್ನಾಂಡೀಸ್‌ರಂತಹ ವ್ಯಕ್ತಿ ಭ್ರಷ್ಟಾಚಾರದಲ್ಲಿ ತೊಡಗಲು ಸಾಧ್ಯವಿಲ್ಲ. ನಮ್ಮ ಪಕ್ಷದ ಅಧ್ಯಕ್ಷರು ಪಕ್ಷಕ್ಕಾಗಿ ಹಣ ಪಡೆದದ್ದು ನಿಜ ಎಂದು ಒಪ್ಪಿಕೊಂಡಿದ್ದಾರೆ. ಇದೊಂದು ಅರಿವಿಲ್ಲದೆ ಆದ ಪ್ರಮಾದ. ಕಿಶೋರ್‌ಕುಮಾರ್‌ರವರು ಇನ್ನೂ ಮದುವೆಯಾಗದ ಯುವಕರು. ಇವರ ಬಳಿ ಇನ್ನೂ ಶಕ್ತಿಯಿದೆ, ದುಡಿಯುವ ವಯಸ್ಸಿದೆ, ಎಲ್ಲಕ್ಕಿಂತಲೂ ಮಿಗಿಲಾಗಿ ದುಡಿಯುವ ಮನಸ್ಸಿದೆ. ಇವರು ಸಾಕಷ್ಟು ಸಾಧಿಸಿದ್ದಾರೆ, ಸಾಧಿಸಬೇಕಾದದ್ದು ಬಹಳಷ್ಟಿದೆ. ರಾಜಕೀಯ ರಂಗದಲ್ಲಿ ಉಜ್ವಲ ತಾರೆಯಾಗಿ ಇವರು ಬೆಳಗಲಿ ಆ ಮೂಲಕ ನಮ್ಮ ಜನಾಂಗಕ್ಕೂ ಬೆಳಕು ನೀಡಲೆಂಬುದೇ ಸಂಗಾತಿಯ ಹಾರೈಕೆಯಾಗಿದೆ

— ಸಂದರ್ಶನ ಲೇಖನ : ಪಟ್ಟಡ ಶಿವಕುಮಾರ್
ಉಪನ್ಯಾಸಕ, ನಾಪೋಕ್ಲು

## ಚುಟುಕು

ಒಂದು ಬಸ್ ನಿಲ್ದಾಣದಲ್ಲಿ ಸುಂದರಳಾದ ಯುವತಿಯೊಬ್ಬಳು ಅಲ್ಲಿದ್ದ ಬೆಂಚಿನ ಮೇಲೆ ಕುಳಿತುಕೊಂಡು ಬಸ್ಸನ್ನು ಕಾಯುತ್ತಿದ್ದಳು. ಆಗ ಒಬ್ಬ ಸೂಟುಧಾರಿಯು ಬಂದು ಅವಳ ಪಕ್ಕದಲ್ಲಿ ಕುಳಿತುಕೊಂಡು, ಬಹಳ ಜೋರಿನಿಂದ ಸಿಗರೇಟನ್ನು ಹೊತ್ತಿಸಿ ಹೊಗೆ ಬಿಡತೊಡಗಿದನು. ಹೊಗೆಯ ಘಾಟನ್ನು ತಡೆಯಲಾರದೆ ಆ ಯುವತಿಯು ಕೆಮ್ಮತೊಡಗಿದಳು. ನಂತರ ಬಹಳ ಸಿಟ್ಟಿನಿಂದ ಛಿ ನಿನಗೆ ನಾಚಿಕೆಯಾಗುವುದಿಲ್ಲವೆ ನೀನು ನನ್ನ ಪತಿಯಾಗಿದ್ದರೆ ನಿನಗೇನು ಮಾಡುತ್ತಿದ್ದೆ ಗೊತ್ತೆ ವಿಷಕೊಟ್ಟು ಕೊಲ್ಲುತ್ತಿದ್ದೆ ಎಂದಳು. ಆಗ ಆ ಸೂಟುಧಾರಿಯು ನೀನು ನನ್ನ ಪತ್ನಿಯಾಗಿದ್ದರೆ ನೀನು ಕೊಟ್ಟ ವಿಷವನ್ನು ಕುಡಿದು ಸಂತೋಷದಿಂದ ಪ್ರಾಣ ಬಿಡುತ್ತಿದ್ದೆ ಎಂದನು.

— ಚಂಡೀರ ಸುಮಿತ್ರ ಅಪ್ಪಾಜಿ, ಚೆಯ್ಯಂಡಾಣೆ.

---

ದುಡಿತವು ದುಡ್ಡಿನ ತಾಯಿ ಅಷ್ಟೆ ಅಲ್ಲ ಮೋಕ್ಷದ ತಾಯಿಯೂ ಹೌದು —ಗಾದೆ.

# "ಗೌಡ ಸಮ್ಮೇಳನ" ನಡೆಸಿ ತಮ್ಮ ಸಂಸ್ಕೃತಿ ಬಿಂಬಿಸುವ ನಿರ್ಧಾರ, ಗೌಡ ಸಾಂಸ್ಕೃತಿಕ ಅಕಾಡೆಮಿಯ ವಾರ್ಷಿಕ ಮಹಾಸಭೆಯ ಅಂಗೀಕಾರ

ಕೊಡಗು ಮತ್ತು ದ. ಕನ್ನಡ ಜಿಲ್ಲೆಯಲ್ಲಿರುವ ಅರೆಭಾಷಿಕ (ಗೌಡ ಕನ್ನಡ) ಗೌಡ ಜನಾಂಗವನ್ನು ಸೇರಿಸಿ ಮಡಿಕೇರಿಯಲ್ಲಿ ಬೃಹತ್ ಸಮ್ಮೇಳನವನ್ನು ಸಂಘಟಿಸಿ, ಆ ಸಮ್ಮೇಳನದಲ್ಲಿ ಇಲ್ಲಿರುವ ಗೌಡ ಜನಾಂಗದ ವಿಶಿಷ್ಟ ಪರಂಪರೆ, ಭಾಷೆ, ಸಂಸ್ಕೃತಿ, ಆಚಾರ, ವಿಚಾರಗಳನ್ನು ಪ್ರತಿಬಿಂಬಿಸಿ, ಸರಕಾರದ ಕಣ್ತೆರೆಸಿ, ಆ ಮೂಲಕ ಗೌಡ ಜನಾಂಗದ ಹಿತರಕ್ಷಣೆಗೆ ಕಟಬದ್ದತೆಯನ್ನು ಪಡೆದುಕೊಳ್ಳಬೇಕೆಂದು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯು ಸರ್ವಾನುಮತದ ನಿರ್ಧಾರ ತೆಗೆದುಕೊಂಡಿದೆ.

ಏಪ್ರಿಲ್ ಒಂದರಂದು ಮಡಿಕೇರಿಯ ಗೌಡ ಸಮಾಜಲ್ಲಿ ನಡೆದ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿಯ ಮೂರನೇ ವರ್ಷದ ವಾರ್ಷಿ ಮಹಾಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಿ ಪಡಿಸಿದ ಸದಸ್ಯರು, ಗೌಡಜನಾಂಗ ಸಾಕಷ್ಟು ತುಳಿತಕ್ಕೊಳಗಾಗಿದ್ದರೂ ಸಹ ಸರಕಾರದ ಪಟ್ಟಿಯಲ್ಲಿ ಮುಂದುವರಿದ ಜನಾಂಗವೆಂದು ನಮೂದಿಸಲ್ಪಟ್ಟು ಮೀಸಲಾತಿಯಿಂದ ವಂಚಿತರಾಗಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಈ ದಿಸೆಯಲ್ಲಿ ಗೌಡ ಜನಾಂಗವನ್ನು ಸಂಘಟಿಸಿ, ಸಮ್ಮೇಳನದ ಮೂಲಕ ಸರಕಾರದ ಮೇಲೆ ಒತ್ತಡ ಹೇರಿ, ಸೂಕ್ತ ಸೌಲಭ್ಯಗಳನ್ನು ಪಡೆಯುವಂತಾಗಬೇಕು ಎನ್ನುವ ನಿರ್ಧಾರವನ್ನು ತಳೆಯಲಾಯಿತು.

ಇದಕ್ಕೂ ಮೊದಲು ಸ್ವಾಗತ ಭಾಷಣ ಮಾಡಿದ ಅಕಾಡೆಮಿಯ ಅಧ್ಯಕ್ಷ ತುಂತಜೆ ಗಣೇಶ್ ವೆಂಕಟೇಶರವರು ಮಾತನಾಡಿ ಗೌಡ ಸಾಂಸ್ಕೃತಿಕ ಅಕಾಡೆಮಿಯು ಜನಾಂಗದ ಏಳಿಗೆಗಾಗಿ ಸಾಕಷ್ಟು ಕೆಲಸಗಳನ್ನು ಮಾಡುತ್ತಾ ಬರುತ್ತಿರುವುದಾಗೀ ತಿಳಿಸಿ, ಸಂಘಟನೆಯ ಅಭಿವೃದ್ಧಿಗಾಗಿ ವಿವಿಧ ಕ್ರೀಡೆಗಳನ್ನು ಪ್ರೋತ್ಸಾಹಿಸುವುದಾಗಿ ತಿಳಿಸಿದರು. ಅದಕ್ಕಾಗಿ ಮುಂಬರುವ ದಿನಗಳಲ್ಲಿ ಗೌಡ ಜನಾಂಗದ ನಡುವೆ ವಾಲಿಬಾಲ್, ಥ್ರೋಬಾಲ್, ಕ್ರಿಕೆಟ್ ಮೊದಲಾದ ಪಂದ್ಯಾವಳಿಗಳನ್ನು ವಿವಿಧ ಭಾಗಗಳಲ್ಲಿ ನಡೆಸಲಾಗುವುದು ಎಂದು ತಿಳಿಸಿದರಲ್ಲದೆ, ಅರೆಭಾಷೆಯ ಕವಿಗೋಷ್ಠಿ ನಡೆಸುವ ಬಗ್ಗೆ ಚಿಂತಿಸಲಾಗುವುದು ಎಂದು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರಿಸಿದರು. ಉತ್ತಮ ಕವಿತೆಗಳನ್ನು ರಚಿಸಿದ್ದರೆ, ಅಂತಹವುಗಳನ್ನು ಗಮನಿಸಿ ಕ್ಯಾಸೆಟ್ ಬಿಡುಗಡೆಗೂ ಪ್ರಯತ್ನಿಸಲಾಗುವುದು ಎನ್ನುವ ಭರವಸೆಯನ್ನು ಮತ್ತೊಬ್ಬ ಸದಸ್ಯರಿಗೆ ನೀಡಿದರು. ಕಳೆದ ಒಂದು ವರ್ಷದ ಅವಧಿಯಲ್ಲಿ ಅಕಾಡೆಮಿಯು ಹಮ್ಮಿಕೊಂಡು ಯಶಸ್ಸುಗಳಿಸಿದ ಕಾರ್ಯಕ್ರಮಗಳ ಸಮಗ್ರವರದಿಯನ್ನು ಸಭೆಯ ಮುಂದಿಟ್ಟವರು ಕಾರ್ಯದರ್ಶಿ ಕೋಡಿ ಚಂದ್ರಶೇಖರ್‌ರವರು, ಇವರು ಮಾತನಾಡಿ ಇನ್ನು ಹೆಚ್ಚಿನ ಜನಪ್ರಿಯ ಕೆಲಸಗಳನ್ನು ಮಾಡುವ ಮೂಲಕ ಸರಕಾರದ ಗಮನ ಸೆಳೆದು ಸರಕಾರದ ಅನುದಾನ ಪಡೆಯುವ ನಿಟ್ಟಿನಲ್ಲಿ ಶ್ರಮಿಸಲಾಗುವುದು ಎನ್ನುವ ಭರವಸೆಯನ್ನು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರ ನೀಡಿದರು.

ಗೌಡ ಸಾಂಸ್ಕೃತಿಕ ಅಕಾಡೆಮಿಯು ಕಳೆದ ನಾಲ್ಕು ವರ್ಷಗಳಿಂದ ನಿರಂತರವಾಗಿ ಚಟುವಟಿಕೆಯಲ್ಲಿ ತೊಡಗಿದ್ದರೂ ಸಹ ತನ್ನದೇ ಆದ ಸ್ವಂತ ಕಟ್ಟಡವನ್ನು ಹೊಂದಲು ಸಾಧ್ಯವಾಗದೆ ಇರುವ ವಿಷಯ ಚರ್ಚೆಗೆ ಬಂದು ಗೌಡ ವಿದ್ಯಾಸಂಘದ ಅಧೀನದಲ್ಲಿರುವ ಜಾಗದಿಂದ, ಅಗತ್ಯ ಸ್ಥಳವನ್ನು ಪಡೆದು ಕೊಂಡು ಅಲ್ಲಿ ಸ್ವಂತ ಕಟ್ಟಡ ಹೊಂದುವ ಬಗ್ಗೆ ಪ್ರಯತ್ನ ಪಡುವ ವಿಷಯವನ್ನು ಸಭೆ ಸರ್ವಾನುಮತದಿಂದ ನಿರ್ಣಯಿಸಿತು.

ಕಾರ್ಯಕ್ರಮಕ್ಕೆ ಮೊದಲು ಉಪಾಧ್ಯಕ್ಷೆ ಮಂಞಂಡ್ರ ರೇಖಾ ಉಲ್ಲಾಸ್‌ರವರು ಪ್ರಾರ್ಥಿಸಿದರು. ತೋಟಂಬೈಲು ಮೋಹನ, ದೇರಣ್ಣನ ರಾಮಯ್ಯ ಮೊದಲಾದ ಸದಸ್ಯರ ನಿಧನಕ್ಕೆ ಸಭೆ ಸಂತಾಪ ಸೂಚಿಸಿತು. ಸಭೆಯ ಕೊನೆಯಲ್ಲಿ ಕುಟ್ಟನ ಮುತ್ತಪ್ಪನವರು ವಂದನಾರ್ಪಣೆಗೈದರು. ವೇದಿಕೆಯಲ್ಲಿ ಕೊಂಪುಳಿರ ಗಣೇಶ್ ಬೋಪಯ್ಯ, ಅಚ್ಚಾಂಡಿರ ಬೋಪಣ್ಣ, ಬೈತಡ್ಕ ಅರುಣ್‌ಕುಮಾರ್, ಕುಂಜಿಲನ ಸತೀಶ್, ನಡುವಟ್ಟಿರ ಅನಂತ್ ಸೇರಿದಂತೆ ಹಲವು ನಿರ್ದೇಶಕರು ಉಪಸ್ಥಿತರಿದ್ದರು.

— ಪಟ್ಟಡ ಶಿವಕುಮಾರ್

## ಶುಭ ಮದ್ವೆ

ಮಡಿಕೇರಿ ನಿವಾಸಿ ನಂಗಾರು ಉತ್ತಪ್ಪನವರ ಮಗಳು ಜಾಯ್ B.E. Comp. Science, ಎಂಬ ವಧುವಿಗೂ ಮತ್ತು ಬೆಂಗಳೂರು ನಿವಾಸಿ, ಕುಂಬುಗೌಡನ ದಿ|| ವಸಂತನವರ ಮಗ ಅಶೋಕ B.E. M.Tech. ಎಂಬ ವರನಿಗೂ ದಿನಾಂಕ 8-4-2001 ರಲ್ಲಿ ಮಡಿಕೇರಿಯ ಕೆಳಗಿನ ಗೌಡ ಕಲ್ಯಾಣ ಮಂಟಪದಲ್ಲಿ ಬಾರಿ ವಿಜೃಂಭಣೆಯಿಂದ ನಡೆಯಿತು.

ಸಿದ್ದಾಪುರದ ಅಭ್ಯತ್ ಮಂಗಲ ಎಸ್ಟೇಟ್‌ನ ಮಾಲೀಕರಾದ ಕರ್ಣಯನ ಪೂಣಚ್ಚನವರ ಮಗಳು ಕುಮುದಿನಿ ಎಂಬ ವಧುವಿಗೂ ಮತ್ತು ಶಿವಮೊಗ್ಗದ ಯನ್.ಟಿ. ವಿಜೇಂದ್ರನವರ ಮಗ ಜಿತೇಂದ್ರ ಎಂಬ ವರನಿಗೂ ದಿನಾಂಕ 11-4-2001ರಲ್ಲಿ ಶಿವಮೊಗ್ಗದ ಶಿವಪ್ಪ ನಾಯಕ ಎಕ್ಸ್‌ಟೆನ್ಷನ್ ನಲ್ಲಿರುವ ಜಯಲಕ್ಷ್ಮಿ ಕಟ್ಟೆ ಸುಬ್ಬಣ್ಣ ಛತ್ರದಲ್ಲಿ ಭಾರಿ ವಿಜೃಂಭಣೆಯಿಂದ ನಡೆಯಿತೆಂದು ತಿಳಿದು ಬಂದಿದೆ.

— ಸಂಗಾತಿ

ಬರ ಮೂರು ದಿವಸ, ವ್ಯವಹಾರ ಅನುಗಾಲ — ಗಾದೆ.

# ಅರೆಭಾಷೆ ಗೌಡರು ಹಾಗೂ ಅವರ ಭಾಷೆಯ ಹಿನ್ನೋಟ

ಜನಸಂಖ್ಯೆ ಹೆಚ್ಚಾದಂತೆಲ್ಲಾ ವಲಸೆ ಹೋಗುವುದು ಸ್ವಾಭಾವಿಕ. ಅರೆಭಾಷೆ ಗೌಡರ ಮೂಲ ನೆಲೆಯ ಸಂಶೋಧನೆ ಆಗಬೇಕಿದೆ. ಗೌಡ ಎಂಬುದು ನಾಮವಾಚಕ ಪದ. ಅದಕ್ಕೆ ಒಡೆಯ, ಯಜಮಾನ ಎಂಬ ಅರ್ಥ ಇದೆ. ಈ 'ಗೌಡ' ಪದವು ಕನ್ನಡ ನಾಡಿನ ಕನ್ನಡ ಭಾಷಿಕರಿಗೆ ಸಲ್ಲುತ್ತದೆ. ಆದರೆ ಒಂದು ವಿಚಾರ ಕನ್ನಡ ಮಾತನಾಡುವವರೆಲ್ಲರು ಗೌಡರಲ್ಲ! ಗೌಡರಲ್ಲಿ ಒಕ್ಕಲಿಗರು, ಒಕ್ಕಲುಗೌಡರು ಮತ್ತು ಅದರ ಎಷ್ಟೋ ಉಪ ಪಂಗಡಗಳಿವೆ. ಗೌಡ ಪದ ಜಾತಿವಾಚಕವಾಗಿರದೆ ದೇಶವಾಚಕವಾಗಿದ್ದು ಎಷ್ಟೋ ಶತಮಾನಗಳ ಹಿಂದೆ ಗೌಡ ಎಂಬ ರೂಪವನ್ನು ಪಡೆದಿದೆ ಎಂದು ನಿಖರವಾಗಿ ಹೇಳಲು ಅಸಾಧ್ಯ. ಆರ್ಯರ ಕಾಲದಲ್ಲಿ ವರ್ಣಭೇದಗಳು ರಚನೆ ಆಯಿತು. ಅವರ ಮೂಲ ನೆಲೆ ಪಂಜಾಬ ಪ್ರಾಂತ ಆಗಿತ್ತು ಎಂದು ತಿಳಿದು ಬರುತ್ತದೆ. ಅಲ್ಲಿಂದ ನಿಧಾನವಾಗಿ ಇವರು ಹೊರಟು ಸಿಂಧ್, ರಜಪುತಾನ, ಇಂದ್ರಪ್ರಸ್ಥ, ಮಥುರಾ, ಪ್ರಯಾಗ(ಅಲಹಾಬಾದ್) ಬನಾರಸ್ (ಕಾಶಿ) ಮೊದಲಾದ ಕಡೆ ಬಂದು ನೆಲೆಹೂಡಿದರು. ಹೀಗೆ ವಲಸೆ ಹೋದವರು ಮಿಥಿಲೆಯಲ್ಲಿರುವ ಆಧುನಿಕ ತಿರಹಟ್ ಪ್ರದೇಶದಲ್ಲಿ ನೆಲೆಸಿದರು. ಬದುಕಿನ ಮಾರ್ಗ ಮುಖ್ಯ ಕೃಷಿಯನ್ನೇ ಜೀವಾಳವಾಗಿಟ್ಟುಕೊಂಡು ತಮ್ಮ ಬದುಕಿಗೆ ರಕ್ಷಣೆಯ ಅವಶ್ಯಕತೆ ಕಂಡು ಒಗ್ಗಟ್ಟಿನಿಂದ ಬಂಗಾಳದ ವಿಸ್ತಾರವಾದ ನದಿ ಮುಖಜ ಪ್ರದೇಶದಲ್ಲಿ ಕಬ್ಬು ಬೆಳೆದು ಬೆಲ್ಲ ತಯಾರಿಸುತ್ತಿದ್ದರೆಂದು ಆಧಾರಗ್ರಂಥಗಳಿಂದ ತಿಳಿದು ಬಂದಿದೆ. 'ಗೂಡ್' ಎಂದರೆ ಬೆಲ್ಲ ಎಂಬ ಅರ್ಥ. ಬೆಲ್ಲವನ್ನು ತಯಾರಿಸುತ್ತಿದ್ದ ಆ ಪ್ರದೇಶ 'ಗೂಡ್‌ದೇಶ್' ಎಂದರೆ ದೇಶವಾಚಕ ಪದದಿಂದ ಕರೆಯಲ್ಪಟ್ಟು ಮುಂದೆ ಗೌಡದೇಶವಾಗಿರಬೇಕೆಂದು ಊಹಿಸಬಹುದು. ಈ ಗೌಡದೇಶ ತುಂಬಾ ವರ್ಷಗಳ ಕಾಲ ಪ್ರಖ್ಯಾತಿ ಹೊಂದಿತ್ತು. ಕನ್ನಡ ನಾಡಿನ ರಾಜರುಗಳ ಚರಿತ್ರೆಯಲ್ಲಿ ಕಂಡು ಬರುವಂತೆ ಗೌಡದೇಶದೊಂದಿಗೆ ಸಂಪರ್ಕವಿಟ್ಟುಕೊಂಡು ಹೆಣ್ಣುಕೊಡುವುದು ತರುವುದು ನಡೆದಿದೆ. ಕಸುಬಿನಲ್ಲಿ ಕೃಷಿಕನಾಗಿ ಭೂಮಿಯ ಒಡೆಯನೆನಿಸಿಕೊಂಡು ಗ್ರಾಮದ ಒಡೆಯ 'ಗಾಮುಂಡ' ಎಂಬ ಬಿರುದು ಅವನದ್ದಾಗಿತ್ತು. ಹಳೆಕಾಲದಲ್ಲಿ ಪ್ರದೇಶಕ್ಕೊಂದು ದೇಶ, ದೇಶಕ್ಕೊಂದುರಾಜ ರಾಜ್ಯಭಾರ ಮಾಡುತ್ತಿದ್ದರು. ಭೂಮಿಯ ಒಡೆಯನಿಗೆ ರಾಜ ಮಹಾರಾಜರುಗಳ ರಾಜಬೊಕ್ಕಸ ತುಂಬಿಸುವ ವಿಚಾರದಲ್ಲಿ ನಿಷ್ಠೆಯಿಂದ ಮೇಲ್ವಿಚಾರಣೆ ವಹಿಸುತ್ತಿದ್ದ ಗಾವುಂಡ (ಮುಂದೆ ಬರಬರುತ್ತಾ ಗೌಡನಾಗಿದ್ದಾನೆ) ರಾಜರುಗಳಿಗೆ ಅತೀ ಹತ್ತಿರದವನಾಗಿದ್ದಿರಬೇಕು. ಕೋಟೆ ಕೊತ್ತಳಗಳ ರಕ್ಷಣೆಯ ಪಾತ್ರವೂ ಇವನದ್ದಾಗಿ ಕ್ಷತ್ರಿಯನಾಗಿದ್ದಿರಬೇಕು. ಕೊಡಗಿನ ರಾಜರು ಜಮ್ಮ ಜಹಂಗೀರು ತರಹ ಬೇಕಾದಷ್ಟು ವಿಸ್ತಾರ ಭೂಮಿಯನ್ನು ಉಸ್ತುವಾರಿ ಮಾಡಿ ಅನುಭವ ಸ್ವಾಧೀನಪಡೆದು ರಕ್ಷಣಾ ಪಡೆಗಳಲ್ಲಿ ದುಡಿದು ಕ್ಷತ್ರಿಯವರ್ಗಕ್ಕೂ ಸೇರಿ, ಮೂಲಕಸಬು ಅಂದರೆ ಭೂಮಿ ಉಳುವವನಾಗಿ, ಭೂಮಿ ಒಡೆಯ ಗೌಡನೆನಿಸಿಕೊಂಡಿದ್ದಾನೆ. ಜಾತಿ ವರ್ಣಭೇದಗಳಿಂದ ಗೌಡಪದ ಬಂದಿಲ್ಲ. ಗೌಡನಾದವನು ಈ ಭೂಮಿ ಹುಟ್ಟಿದಲ್ಲಿಂದಲೇ ಅಂದರೆ ಮಾನವ ನಾಗರೀಕನಾದ ಆ ಶತಮಾನದಿಂದಲೇ ಇದ್ದಿರಲೇಬೇಕು. ಆಧುನಿಕಕಾಲದಲ್ಲಿ ಉದ್ಯೋಗ ಅನ್ವೇಷಣೆ ಹೇಗೆ ಅವಶ್ಯಕತೆಯೊ ತದೋರೀತಿ ಶತಮಾನಗಳು ಪೂರ್ತಿ ಫಲವತ್ತಾದ ಭೂಮಿಯ ಅನ್ವೇಷಣೆ ನಡೆಯುತ್ತಾ ಅಲೆಮಾರಿಗಳಾಗಿಯೂ ತಮ್ಮ ಒಕ್ಕಲುತನವನ್ನು ಮುಂದುವರಿಸಿ ಒಕ್ಕಲು ಗೌಡನೆನಿಸಿಕೊಂಡಿದ್ದಾನೆ. ಸಾರಸ್ವತ ಗೌಡರಿಗೂ ಇದೇ ರೀತಿ ಉ. ಭಾರತದ ಯಾವುದೊ ಸರಸ್ವತಿ ನದಿ ಪ್ರದೇಶದಲ್ಲಿ ನೆಲೆವೂರಿದ್ದ ಕಾರಣ ಆ ಹೆಸರು ಬಂದಿದೆ ಎಂದು ವಾಡಿಕೆ. ಮೂಲತಃ ಅವರು ಬ್ರಾಹ್ಮಣ ವರ್ಗಕ್ಕೆ ಸೇರಿದ್ದವರಾಗಿದ್ದು ಜೀವನೋಪಾಯ ಸಲುವಾಗಿ ತಮ್ಮ ಚಾತುರ್ವರ್ಣಗಳಲ್ಲಿನ ವೈಶ್ಯರಂತೆ ತಾವೂ ವಾಣಿಜ್ಯ ವ್ಯಾಪಾರ ಕೈಗಾರಿಕೋದ್ಯಮದಲ್ಲಿ ತಮ್ಮ ಭವಿಷ್ಯವನ್ನು ಕಂಡುಕೊಂಡರು.

ಗೌಡರಲ್ಲಿ ಅರೆಭಾಷೆಗೌಡರೆಂದು ಕರೆಯಲ್ಪಡುವ ಜನಾಂಗದವರು ಮೂಲ ಕನ್ನಡ ಭಾಷಿಕರಿಂದ ವರ್ಗೀಕರಣರಾದವರೊ ಅಥವಾ ಹಳೆಗನ್ನಡ ನಡುಗನ್ನಡ ಕಾಲದಲ್ಲಿ ತಮ್ಮದೇ ಆದ ಈ ಅರ್ಥ ಅಂದರೆ ದೀರ್ಘವಲ್ಲದ (Shortcut) ಭಾಷೆಯನ್ನು ಉಳಿಸಿಕೊಂಡು ಬಂದವರೊ ಎಂಬುದರ ಸಂಶೋಧನೆ ನಡೆಯಬೇಕಾಗಿದೆ. ಕನ್ನಡ ನಾಡಿನ ಇತರ ಎಲ್ಲಾ ಗೌಡಜನಾಂಗದವರ ಕನ್ನಡಭಾಷೆ ನಡುಗನ್ನಡ, ಹೊಸಕನ್ನಡದಿಂದ ಬಳಸಲ್ಪಟ್ಟಂತ ಕನ್ನಡವೆಂಬುದನ್ನು ಒಪ್ಪುವಂತದ್ದೇ. ಆದರೆ ಅರೆಭಾಷೆ (ಅರೆಭಾಷೆ ತತ್ಸಮ, ಅರೆಭಾಸೆ ತತ್ಭವ) ಹೊಸಗನ್ನಡ ರಚನೆಯಾಗುವುದಕ್ಕೆ ಬಹಳ ಹಿಂದೆ ಇದ್ದಿರಬೇಕು. ಹೊಸಗನ್ನಡದಲ್ಲಿ 52 ಅಕ್ಷರಗಳಿದ್ದರೆ, ಅರೆಭಾಷೆಯು ತಮಿಳ್ ಭಾಷೆಯಷ್ಟೆ ಹಳೆಯ ಭಾಷೆಯಾಗಿದೆಯೆಂದು ಸಂಶೋದಕರು ತಿಳಿಸುತ್ತಾರೆ. ಅರೆಭಾಷೆಯು ಅಸಡ್ಡೆ ಭಾಷೆ ಅಲ್ಲ. ಹತ್ತು ಕುಟುಂಬ ಹದಿನೆಂಟು ಗೋತ್ರದವರು ಶೃಂಗೇರಿ ಮಠಾಧೀಶ್ವರರ ಮಾರ್ಗದರ್ಶನದಂತೆ ಕಟ್ಟೆಮನೆಯವರ ಮುಂದಾಳತ್ವದಲ್ಲಿ ವಿಶಿಷ್ಟವಾದ ಆಚಾರ ವಿಚಾರಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಈ ಜನಾಂಗದವರಿಗೆ ಅದರದೇ ಆದ ಶಾಸ್ತ್ರನಿಯಮಾವಳಿಗಳಿವೆ. ಸೋಬಾನೆ ಹಾಡುಗಳಿವೆ. ಈ ಜನಾಂಗದವರ ಸಂಸ್ಕೃತಿಯ ಅಡಿಯಲ್ಲಿ ಬರುವ ಆಚಾರ ವಿಚಾರಗಳು ಇತರ ಯಾವುದೇ ಗೌಡ ಜನಾಂಗ ಅಥವಾ ಉಪಗೌಡಜನಾಂಗಗಳ ಆಚಾರ ವಿಚಾರಗಳಿಗೆ ಹೋಲದೆ ಪ್ರತ್ಯೇಕ ರೂಪತಾಳಿದೆ. ಅರೆಭಾಷೆಗೌಡರು ವೈಷ್ಣವ ದೈವಭಕ್ತರು. ಶ್ರೀ ತಿರುಪತಿ ವೆಂಕಟರಮಣ ದೇವರನ್ನು ಕುಲದೇವರಾಗಿ ಆರಾಧಿಸುತ್ತಾ ಬಂದಿರುವವರು. ಹಿಂದೂ ಧರ್ಮದಡಿಯಲ್ಲಿ ಶೈವಾರಾಧನೆ ಮಾಡುತ್ತಾರೆ ಹಾಗೂ ದೇವಿ ಪೂಜಿಕರೂ ಹೌದು. ಆದರೆ ವಿಶೇಷವಾಗಿ ವೆಂಕಟರಮಣ ದೇವರ ಹರಿಸೇವೆಯನ್ನು ಆಚರಿಸುತ್ತಾರೆ. ಈ ಎಲ್ಲಾ ವೈಶಿಷ್ಟ್ಯಗಳನ್ನು ಪರಿಪಾಲಿಸಿಕೊಂಡು

---

ಬಂದಿರುವ ಅರೆಭಾಷೆ ಜನಾಂಗದವರ ಮೂಲ ಇಂದು ನೆನ್ನೆಯದಲ್ಲ, ಕನ್ನಡ ಜಿಲ್ಲೆಯಿಂದ ಬಂದವರು, ಐಗೂರು ಸೀಮೆ ಯಿಂದ ಬಂದವರು, ಎಂದು ಮಾತ್ರ ತಿಳಿದುಕೊಂಡಿದ್ದೇವೆ ಅಷ್ಟೇ.

ವಿಜಯನಗರ ಸಾಮ್ರಾಜ್ಯದ ಆಡಳಿತ ಕಾಲದಲ್ಲಿ ಹಿಂದೂ ಧರ್ಮದ ಉದ್ಧಾರವಾಯಿತು. ಕನ್ನಡನಾಡಿನ ಇತಿಹಾಸದಲ್ಲಿ ಧರ್ಮದ್ವೇಷವಾಗಲೀ ಅದರ ಪರಿಣಾಮವಾದ ರಕ್ತಪಾತವಾಗಲಿ ಎಂದೂ ನಡೆದಿಲ್ಲ. ಭಿನ್ನ ಭಿನ್ನ ಧರ್ಮ ಪುರಸ್ಕರ್ತರೊಳಗೆ ಪರಸ್ಪರ ಸಿದ್ಧಾಂತಗಳ ಖಂಡನೆ ಮಂಡನೆಗಳ ಸಂದರ್ಭಗಳಲ್ಲಿ ಹಣಾಹಣಿಯಾಗಿ ವಾಗ್ಯುದ್ಧಗಳು ನಡೆದಿರುವುದೇನೊ ನಿಜ. ಆದರೆ ಇಂತಹ ಘರ್ಷಣೆಗಳು ವ್ಯಕ್ತಿದ್ವೇಷಕ್ಕಾಗಲಿ, ಧರ್ಮ ದ್ವೇಷಕ್ಕಾಗಲಿ ಅವಕಾಶ ಕೊಟ್ಟಿರಲಿಲ್ಲ. ಅನ್ಯಮತ ದ್ವೇಷವನ್ನು ಉಲ್ಲೇಖಿಸುವ ದಂತಕಥೆಗಳು ಇಲ್ಲೊಂದು ಅಲ್ಲೊಂದು ದೊರೆಯ ಬಹುದಾದರೂ ಅವುಗಳಿಗೆ ಶಾಸನಾಧಾರಗಳಿಲ್ಲ. ಶೈವರು ವಿಷ್ಣು ದೇವಾಲಯಗಳನ್ನು ಕಟ್ಟಿಸಿದರು, ವೈಷ್ಣವರು ಶೈವದೇವಾಲಯ ಗಳನ್ನು ನಿರ್ಮಿಸಿದರು! ವೈಷ್ಣವ ಮತದ ಮೂಲ ರೂಪವು ಕ್ರಿ.ಶ. 2ನೇ ಶತಮಾನಗಳಷ್ಟು ಹಿಂದೆ ಹೋಗುತ್ತದೆ. ವಿಜಯನಗರ ಶ್ರೀ ಕೃಷ್ಣ ದೇವರಾಯನ ಕಾಲದಲ್ಲಿ ಉತ್ತಮವಾದ ವಿದ್ಯಾ ಪದ್ಧತಿ ಇದ್ದಿತು. ವರ್ಣಾಶ್ರಮ ಧರ್ಮಬೋಧನೆಯೊಂದಿಗೆ ಒಳ್ಳೆಯ ಗ್ರಂಥ ಭಂಡಾರಗಳಿದ್ದುವು. ಇವು ಧಾರ್ಮಿಕ ಮಠಗಳಾಗಿದ್ದುವು. ವಶೀಕೃತಮಠ, ಮುಹತ್ತುಮಠ, ವಿರಕ್ತಮಠ ಎಂಬ ಮಠಗಳಿದ್ದುವು. ಬ್ರಾಹ್ಮಣರಿಗೆ ಆಡಳಿತವರ್ಗದ ಪ್ರಧಾನ ಶ್ರೇಣಿ ಮೀಸಲಿಡಲಾಗಿತ್ತು. ಸಂಗಮ, ಸಾಳುವ ಹಾಗೂ ತುಳುವಂಶ ಅರಸರ ಕಾಲದಲ್ಲಿ ಗಾಮುಂಡ (ಗೌಡ) ಹುದ್ದೆಗಳಿದ್ದು, ಬ್ರಾಹ್ಮಣರಿಗೆ ವೇದ, ಪುರಾಣ ಉಪನಿಷತ್‌ಪಠನಗಳಾದುವು. ರಾಜನ ಬೊಕ್ಕಸಕ್ಕೆ ಪ್ರಾಮಾಣಿಕತೆಯಿಂದ ತೆರಿಗೆ ವಸೂಲಾತಿಯ ಜವಾಬ್ದಾರಿಕೆ ಕೆಲಸ ಗೌಡನಿಗಿದ್ದಿತು. ಗ್ರಾಮಲೆಕ್ಕಿಗ, ಶಾನುಭೋಗ ಎಂಬ ಹುದ್ದೆಗಳು ಗೌಡನಿಗೆ ಮೀಸಲಾಗಿತ್ತು. ವಿಜಯನಗರ ರಾಜರ ಕಾಲದಲ್ಲಿ ಕನ್ನಡನಾಡಿನ ಕನ್ನಡವು ಕಾವ್ಯ, ಕವನ ಮತ್ತು ನಾಟಕಗಳಲ್ಲಿ ರೂಪುರೇಖೆಗಳನ್ನು ಕಾಣಲು ಸಾಧ್ಯವಾಯಿತು. ಹವೀಕ್ ಬ್ರಾಹ್ಮಣ ಜನಾಂಗದವರ ಹವೀಕ್ ಕನ್ನಡ ಭಾಷೆಗೂ ಅರೆಭಾಷೆಯನ್ನಾಡುವ ಗೌಡರ ಭಾಷೆಗೂ ಅತ್ಯಂತ ಸಾಮ್ಯವಿರು ವುದು ನಮಗೆಲ್ಲ ತಿಳಿದಿರುವ ವಿಷಯ. ವಿಜಯನಗರ ಪತನವಾದ ನಂತರ ಅಲ್ಲಲ್ಲಿ ಹಂಚಿ ಚದುರಿ ಹೋಗಿರಬಹುದಾದ ಈ ಎರಡು ಶ್ರಮಜೀವಿ ಜನಾಂಗಗಳು ಬಹಳಕಾಲ ಅತೀ ಅನ್ಯೋನ್ಯತೆಯಿಂದ ಕೃಷಿಕ್ಷೇತ್ರಗಳಲ್ಲಿ ದುಡಿದು ತಮ್ಮ ಜೀವನ ಮಾರ್ಗವನ್ನು ಕಂಡುಕೊಂಡಿರಬೇಕು. ವಿಜಯನಗರದ ಹಂಪಿಯಲ್ಲಿರುವ 12ಕಂಭಗಳ ಮದುವೆ ಮಂಟಪ, ಹಿಂದಿನ ಕಾಲದಿಂದ ನಾವು ಆಚರಿಸಿಕೊಂಡು ಬರುತ್ತಿದ್ದಂತ ಬ್ರಾಹ್ಮಣ ಧಾರೆ ಪದ್ಧತಿ, ತಲೆಗೆ ಕಟ್ಟುವ ಪಟ್ಟೆಬಾಸಿಂಗ, ಶೃಂಗೇರಿ ಮಠಕ್ಕೆ ಕೊಡುತ್ತಿದ್ದ ಕನ್ಯೆಯ ಮುತ್ತೈದೆ ತನದ ತೆರವಿನ ಹಣವನ್ನು ಈಗಲೂ ತೆಗೆದಿಡುವುದಿದೆ. ಆದರೆ ಇತ್ತೀಚೆಗಿನ ವರ್ಷಗಳಿಂದೀಚೆ ಮಠಕ್ಕೆ ಕಳುಹಿಸುವುದರ ಬದಲು ಹರಕೆ ಹಣದ ಜತೆಯಲ್ಲಿ ಅದು ತಿರುಪತಿ ತಿಮ್ಮಪ್ಪನ ಮುಡುಪು ಸೇರುತ್ತದೆನೋ!

ಹಿಂದಿನಕಾಲದಲ್ಲಿ ಅರೆಭಾಷೆಗೌಡರು ಸಸ್ಯಾಹಾರಿಗಳಾಗಿದ್ದು ಹವೀಕ್ ಬ್ರಾಹ್ಮಣರ ಕೃಷಿಕ ಜೀವನ ಶೈಲಿ ನಮ್ಮವರಿಗೆ ಹೋಲುತ್ತಿತ್ತು. ಶಂಭಾ ಜೋಶಿಯವರ ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆಯಲ್ಲಿ ಕಂಡುಬರುವ ಕಂನ್ನಡಿ ಭಾಷೆಯು ಮುಂದೆ ನರ್ಮದಾ ಕೃಷ್ಣಾನದಿಗಳ ನಡುವಣ ನಾಡಿನ ಸಂಸ್ಕೃತ, ಪ್ರಾಕೃತ ಭಾಷಿಕರ ಸಂಪರ್ಕದಲ್ಲಿ ಆರಿಯ ಭಾಷೆಯಾಗಿ ಪರಿಣಮಿಸಿದ ಕ್ರಮುವನ್ನು ಪರಿಶೀಲಿಸಿದ್ದಾಗ ಮರಾಠಿಕನ್ನಡ ಮಿಶ್ರಿತ ಭಾಷೆಯೊಂದಿತ್ತು. ಅದನ್ನೇ ಆರಿಯಾ ಭಾಷೆಯೆಂದು ಕರೆಯು ತ್ತಿದ್ದರು. ಕ್ರಿ. ಶ. 10ರ ನಂತರ ಮರಾಠಿಭಾಷೆಯ ಉದ್ಭವ ವಾದದ್ದು. ಹಾಗಿರುವಾಗ ಇದೇ ಆರಿಯಭಾಷೆ ಬರಬರುತ್ತಾ ಯಾಕೆ ಅರಿಯ - ಅರೆಭಾಷೆಯಾಗಿರಬಾರದು? ಹೀಗೆ ನಮ್ಮ ಮೂಲ ಸಂಶೋಧನೆ ಆಗಬೇಕಾಗಿದೆ. ಅದನ್ನು ಬಿಟ್ಟು ನಾವು ನಮ್ಮನ್ನೇ ಹೀಯಾಳಿಸಿಕೊಳ್ಳುವಂತೆ ಮಾತನಾಡಿ ಕೊಳ್ಳಬಾರದು. ನಾವು ಕನ್ನಡ ಜಿಲ್ಲೆಯಿಂದ ಬಂದವರೆಂದಿಷ್ಟೆ ನಮಗೆ ನಮ್ಮ ತಾತಂದಿರು ತಿಳಿಸಿದ್ದು. ಆದರೆ ಇನ್ನೂ ಹಿಂದಿನ ನಮ್ಮ ಚರಿತ್ರೆಯ ಪುಟಗಳನ್ನು ತೆರೆಯಬೇಕಾಗುತ್ತದೆ. ಶೃಂಗೇರಿ ಮಠದ ಗುರುಗಳ ಮಾರ್ಗದರ್ಶನದಲ್ಲಿ ಕಟ್ಟೆಮನೆಯವರ ನಾಯಕತ್ವಕ್ಕೆ ಒಪ್ಪಿಸಿ, ಅಂದು ಈ ವಿಶಿಷ್ಟಕರವಾದ ಸಂಸ್ಕೃತಿಯ ಅಡಿಯಲ್ಲಿ ಕಟ್ಟಿರುವ ಜನಾಂಗವು ಇಂದು ಗುರುವನ್ನು ಮರೆತು ಕೂತಿರುವುದರಿಂದ ನಮಗೆ ಗುರದೋಷವಿರಬಾರದೆನ್ನುತ್ತೀರಾ?

— ಬೈತಡ್ಕ ಎ. ಬೆಳ್ಯಪ್ಪ, ಮಡಿಕೇರಿ.

---

ಕವನ : ಓ.... ಪ್ರಿಯತಮೆ

ಓ ಪ್ರಿಯತಮೆ........
ಈ ನಿನ್ನ ಮೊಗವು
ಬೆಳದಿಂಗಳ ಹೊಳಪು

ನೀನಿರೆ ಆಕಾಶಕ್ಕೆ ತಾರೆಗಳೇಕೆ ?
ನೀನಿರೆ ಸುಮಕ್ಕೆ ಚೆಲುವೇಕೆ ?
ನೀನಿರೆ ಚಂದನಕ್ಕೆ ಸುಗಂಧವೇಕೆ ?
ನೀನಿರೆ ಕಸ್ತೂರಿಗೆ ಕಂಪೇಕೆ ?
ದಯಮಾಡಿ ಒಗೆಳತಿ ಉತ್ತರಿಸು

ನನ್ನ ಮನದ ಬೇಗೆಯನ್ನು ತಣಿಸು
ಗ್ರಹ ತಾರೆಗಳು ಆಕಾಶದಲ್ಲಿ
ನೀ ಮಾತ್ರ ನನ್ನ ಹೃದಯದಲ್ಲಿ
ಈ ಎಲ್ಲಕು ಸ್ಫೂರ್ತಿ ನೀನಾಗಿರುವಾಗ
ಮೌನ ಮನದ ಹಕ್ಕಿ ನೀನಾಗಿರುವಾಗ

ಮುಂದೆ ಏನೆಂದು ಬರೆಯಲಿ ನಾನು
ತುಂಬಿರುವೆ ನನ್ನಲ್ಲೂ.......ನೀನು

— ಬಾರಿಕ್ಕೇರ ಮಂಜು ನಾಗರಾಜ್ ವಿರಾಜಪೇಟೆ

---

**ದಿನಕ್ಕೊಂದು ಪರಿಚಯ, ಜನ್ಮಕ್ಕೊಂದು ಸ್ನೇಹ**

# ಗೌಡ ಕನ್ನಡ ಎಂಬ ಕನ್ನಡದ ಪ್ರಭೇದ

ದಕ್ಷಿಣ ಕನ್ನಡ ಜಿಲ್ಲೆಯ ಪೂರ್ವ ಭಾಗದಲ್ಲಿ ಹಾಗೂ ಕೊಡಗಿನಲ್ಲಿ ವಾಸವಾಗಿರುವ ಗೌಡರ ಮಾತು, ಶಾಲೆ ಕಾಲೇಜುಗಳ, ವ್ಯಾಪಾರ ಹಾಗೂ ಸರಕಾರ ವ್ಯವಹಾರಗಳಲ್ಲಿ ಪ್ರಯೋಗವಾಗುವ ಕನ್ನಡಕ್ಕಿಂತ ವಿಶಿಷ್ಟವಾಗಿದೆ. ಕನ್ನಡದಲ್ಲಿರುವ ಹಲವು ಪ್ರಾದೇಶಿಕ ಹಾಗೂ ಸಾಮಾಜಿಕ ಉಪಭಾಷೆಗಳಲ್ಲಿ ಇದೂ ಒಂದು. ಇದು ಕೇವಲ ಈ ಸಮಾಜದ ವ್ಯಕ್ತಿಗಳ ನಡುವೆ ಹಾಗೂ ಗೃಹಕೃತ್ಯಗಳಲ್ಲಿ ಬಳಕೆಯಾಗುತ್ತಿದ್ದ ಮಾತಾಗಿ, ಇತರ ಜನರಿಗೆ ಈ ಮಾತನ್ನು ಕೇಳುವಾಗ ಅರ್ಧಂಬರ್ಧ ಅರ್ಥವಾಗುಂತಿದ್ದುದರಿಂದಲೋ ಏನೋ ಇದನ್ನು ಅರೆಬಾಸೆ, 'ಅರೆಗನ್ನಡ' ಎಂದು ಗುರುತಿಸಿದರು. ಈ ಶತಮಾನದ ಆರಂಭದ ದಶಕಗಳಲ್ಲಿ ಈ ಸಮಾಜದವರು ಇತರ ಸಮಾಜದವರ ಒತ್ತಡಕ್ಕೊಳಗಾಗಿ, ಹಿಂದುಳಿದವರೆಂದು ಪರಿಗಣಿತರಾಗಿದ್ದರು. ಇಂಗ್ಲಿಷ್ ವಿದ್ಯಾಭ್ಯಾಸ ಪಡೆದವರು, ಸರ್ವಜ್ಞರೆಂದು, ಪ್ರತಿಷ್ಠಿತರಾಗಿ, ಅವರದೆ ಆದ ವೇಷ ಭೂಷಣ, ಭಾಷೆ, ವ್ಯವಹಾರಗಳನ್ನು ನಡೆಸುವ ಶಿಷ್ಟರಾಗಿದ್ದ ಕಾಲದಲ್ಲಿ ಈ ಮಾತನ್ನು ಹೊರಗೆಲ್ಲಾದರೂ ಆಡಿದರೆ ಅಪಹಾಸ್ಯಕ್ಕೆ ಈ ನವ ನಾಗರೀಕರ ಎದುರಲ್ಲಿ ಗುರಿಯಾಗುವ ಕಾರಣವಿದ್ದುದರಿಂದ ಈ ಮಾತನ್ನು 'ಅರೆಬಾಸೆ'ಯಾಗಿ, 'ಅರೆಗನ್ನಡ'ವಾಗಿ, ಮನೆಯ ನಾಲ್ಕು ಗೋಡೆಗಳ ಮಧ್ಯೆ ಮುದುರಿಕೊಂಡಿದ್ದಂತಿತ್ತು.

ಹವ್ಯಕರ ಆಡುನುಡಿಯನ್ನು ಹವ್ಯಕ ಕನ್ನಡ, ಕೋಟದವರ ಕನ್ನಡವನ್ನು ಕೋಟ ಕನ್ನಡ ಎಂದು ಒಂದು ಜಾತಿಗೆ ಸೀಮಿತವಾದ ಕನ್ನಡದ ಪ್ರಭೇದವನ್ನು ಆಯಾ ಜಾತಿಯ ಹೆಸರಿಂದ ಗುರುತಿಸುವ ರೂಢಿ ಭಾಷಾವಿಜ್ಞಾನ ಕ್ಷೇತ್ರದಲ್ಲಿ ಬಳಕೆಗೆ ಬಂದ ಕಾರಣ, ಗೌಡರ ಕನ್ನಡ ಮಾತಿನ ಪ್ರಭೇದವನ್ನು 'ಗೌಡಕನ್ನಡ' ಎಂದು ಮೊದಲು ಪ್ರೊ||ಮರಿಯಪ್ಪ ಭಟ್ಟರು ಅಂಕಿತಗೊಳಿಸಿದರು. ಅವರನ್ನನುಸರಿಸಿ ಮುಂದೆ ಭಾಷಾವಿಜ್ಞಾನ ರೀತಿಯಲ್ಲಿ ಈ ಪ್ರಭೇದವನ್ನು ಅಧ್ಯಯನಕ್ಕೊಳಪಡಿಸಿದ ಲೇಖನಗಳಲ್ಲಿ ನಾನೂ ಇದನ್ನು 'ಗೌಡ ಕನ್ನಡ'ವೆಂದೇ ಗುರುತಿಸಿದೆ. 1968ರಲ್ಲಿ ಕನ್ನಡ ಭಾಷೆಯ ಶಾಸನಗಳ ಭಾಷಿಕ ಅಧ್ಯಯನ ಮುಗಿಸಿ ಪಿಎಚ್.ಡಿ. ಪಡೆದ ನಂತರ ಗೌಡ ಕನ್ನಡದ ಬಗ್ಗೆ ಸಮಗ್ರ ಭಾಷಿಕ ಅಧ್ಯಯನ ನಡೆಸಿ 1970ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಇದನ್ನು ಗ್ರಂಥರೂಪದಲ್ಲಿ ಪ್ರಕಟಿಸಿದ್ದೇನೆ. ಅಲ್ಲಿಂದೀಚೆಗೆ ಇನ್ನೂ ಕೆಲವರು ಅಲ್ಲಲ್ಲಿ 'ಗೌಡ ಕನ್ನಡ'ದ ಬಗ್ಗೆ ಬಿಡಿ ಬರಹಗಳನ್ನು ಪ್ರಕಟಿಸುತ್ತಿದ್ದಾರೆ. ಈ ಹೆಸರಿಗೆ ಒಂದು ತೊಡಕಿದೆ. ಅಂದರೆ ಸಾಮಾಜಿಕವಾಗಿ ಒಂದೇ ಆಗಿರುವ ಗೌಡರು ಎಲ್ಲರೂ ಈ ಮಾತಿನವರಲ್ಲ. ಹಲವರು ತುಳು ಮಾತೃಭಾಷೆಯವರಾಗಿದ್ದಾರೆ. ಒಂದೇ ಕುಟುಂಬದವರಲ್ಲಿ ಒಂದು ತಂದೆ ತಾಯಿಯ ಮಕ್ಕಳು ತುಳು ಮಾತಾಡುವವರು ಮತ್ತೊಂದು ತಂದೆ ತಾಯಿಯ ಮಕ್ಕಳು ಕನ್ನಡ ಮಾತಾಡುವವರು ಆಗಿರುವ ಉದಾಹರಣೆಗಳಿವೆ. ಗಂಡನಿಗೆ ತುಳು ಹೆಂಡತಿಗೆ ಕನ್ನಡ ಇಲ್ಲವೇ ಗಂಡನಿಗೆ ಕನ್ನಡ ಹೆಂಡತಿಗೆ ತುಳು ಮಾತೃಭಾಷೆಯಾಗಿರುವ ಉದಾಹರಣೆಗಳು ಬೇಕಾದಷ್ಟಿವೆ. ಆದುದರಿಂದ ಅಧಿಕೃತವಾಗಿ ಇದು ಗೌಡರ ಭಾಷೆ ಎನ್ನುವಂತಿಲ್ಲ. ಹವ್ಯಕ ಮುಂತಾದ ಪ್ರಭೇದಗಳಲ್ಲಿ ಆ ಸಮಾಜಕ್ಕೆ ಸೇರಿದ ಎಲ್ಲರೂ (ಕೆಲವು ಪ್ರಾದೇಶಿಕ ವ್ಯತ್ಯಾಸಗಳನ್ನು ಬಿಟ್ಟು) ಒಂದೇ ಮಾತನ್ನು ಆಡುತ್ತಾರೆ. ಈ ಪರಿಮಿತಿಯಲ್ಲಿ ಗೌಡ ಕನ್ನಡ'ಎಂಬ ಹೆಸರನ್ನು ಬಳಸಬೇಕಾಗಿದೆ.

ಶಿಷ್ಟ ಕನ್ನಡಕ್ಕಿಂತ ಇದು ಧ್ವನಿಸಮಾಮ್ನಾಯದಲ್ಲಿ (Phonology) ಹಾಗೂ ವ್ಯಾಕರಣ (Morphology)ವಾಕ್ಯ ರಚನೆ (Syntex)ಯಲ್ಲಿ ಗಣನೀಯ ವ್ಯತ್ಯಾಸಗಳನ್ನು ತೋರುತ್ತಿದೆ. ಅಂಥವನ್ನು ಸ್ಥೂಲವಾಗಿ ಕೆಳಗೆ ಗುರುತಿಸುತ್ತೇನೆ.

ಸ್ವರಗಳು: ಕನ್ನಡದ ವರ್ಣಮಾಲೆಯಲ್ಲಿಲ್ಲದ ಕೆಲವು ಸ್ವರಗಳು ಇದರಲ್ಲಿ ಧ್ವನಿಮಾಗಳೆಂದು ಪರಿಗಣಿತವಾಗುತ್ತವೆ.

ಮತ್ತು ಇಂತಹ ಧ್ವನಿಗಳು

| | |
|---|---|
| ಕೊಟ್ಟಿ (ಕ್ರಿಯಾಪದ) | ಕೊಟ್ಟು (ಹಾರೆ) ಗುದ್ದಲಿ |
| ಕ.ರಿ. (ಇದ್ದಿಲು) | ಕರಿ (ನಾಮಪದ) |
| ಹೆ.ರು. (ಹೆಪ್ಪು) | ಹೆರು (ಪಡೆಯು) |
| ಮೊ.ರಿ (ಬೊಗಳು) | ಮೊರಿ (ಕುನ್ನಿ, ನಾಯಿ, ಹಂದಿ ಇತ್ಯಾದಿಗಳು) |

ಮೇಲಿನ ಉದಾಹರಣೆಗಳಲ್ಲಿ ಉಚ್ಚಾರಣೆಯ ವ್ಯತ್ಯಯದೊಡನೆ ಅರ್ಥವ್ಯತ್ಯಯವೂ ಆಗುತ್ತದೆ. ಆ ಕಾರಣದಿಂದ ಆಯಾ ಸ್ವರಗಳು ಗೌ.ಕ.ದಲ್ಲಿ ಧ್ವನಿಮಾ ಸ್ಥಾನ ಪಡೆಯುತ್ತವೆ. ಇವುಗಳನ್ನು ಕನ್ನಡ ಲಿಪಿಯಲ್ಲಿ ಬರೆದು ತೋರಿಸಲು ಸುಲಭ ಮಾರ್ಗವಿಲ್ಲ. ಇಂತಹ ಇನ್ನೂ ಕೆಲವು ಉದಾಹರಣೆಗಳು ದೊರೆಯುತ್ತವೆ.

ವ್ಯಂಜನಗಳು: ಕಠಿಣ ಮತ್ತು ಮೃದು ವರ್ಣಗಳ ವ್ಯತ್ಯಯ (ಕ-ಗ,ಚ-ಜ,ಟಿ-ಚ, ತ-ದ, ಪ-ಬ)ಶಿಷ್ಟ ಕನ್ನಡದಲ್ಲಿರುವಂತೆ ಇದರಲ್ಲಿಯೂ ಇದ್ದು ಅವು ಪ್ರತ್ಯೇಕ ಪ್ರತ್ಯೇಕ ಧ್ವನಿಮಾಗಳಾಗುತ್ತವೆ. ಉದಾ : ಕೂಡು -ಗೂಡು, ನೇಚಿ - ನೇಜಿ, ನೋಟು- ನೋಡು, ಎತೆ-ಎದೆ, ಪೇಟೆ-ಬೇಟೆ ಎಂಬಂತೆ ಕನಿಷ್ಠ ಯುಗ್ಮಗಳು ಹೇರಳವಾಗಿ ದೊರೆಯುತ್ತವೆ. ಆದರೆ ಗೌ.ಕ.ದಲ್ಲಿ ಎರವಲಾದ ಪದಗಳಲ್ಲೂ ಮಹಾಪ್ರಾಣಗಳ ಬಳಕೆಯಿಲ್ಲ. ಕಲಿತವರ (?) ಮಾತಿನಲ್ಲಿ ಐಚ್ಛಿಕವಾಗಿ ಬರಬಹುದು. ಅನುನಾಸಿಕಗಳಲ್ಲಿ ಶಿ.ಕ.ದ ಲಿಪಿಯಲ್ಲಿ ಬಳಕೆಯಿದ್ದರೂ ಙ,ಞ ಗಳು ಧ್ವನಿಮಾಗಳಾಗಿಲ್ಲ. ಇವು ಗೌ.ಕ. ದಲ್ಲಿ ದ್ವಿತ್ವರೂಪದಲ್ಲಿ ಸಹಜವಾದ ಬಳಕೆಯಲ್ಲಿವೆ. ಉದಾ: ಮಙ(ಮಗ), ನೊಙ(ನೊಗ) ಹಞ್ಞಿ (ಸ್ವಲ್ಪ) ಕೊಞಿಲ್ಲೆ (ತೊದಲು ಮಾತು). ಈಗೀಗ ಸುಧಾರಿತರೆನಿಸಿಕೊಂಡವರಿಗೆ ಹಞ್ಞ ಎಂಬ ಪದಪ್ರಯೋಗದಲ್ಲಿ ಅಂಜಿಕೆ, ಅಳುಕುಗಳು ತಲೆದೋರಿ, 'ಸ್ವಲ್ಪ' ಎಂಬ ಶಿ.ಕ. ದಿಂದ ಕಡ ತಂದ (ಅದಕ್ಕೂ ಇದು ಸಂಸ್ಕೃತದಿಂದ ಎರವಲಾದ ಪದ) ಪದವನ್ನು ಬಳಸಲಾರಂಭಿಸಿದ್ದಾರೆ. ಕೆಲವರು ಹನೀಸ್, ಪ್ರಾಂತಿಕವಾಗಿ ಇನ್ನು ಕೆಲವರು ಹನಿಯ ಒಸಿ, ಒಸಿಯ ಎಂಬುದಾಗಿಯೂ ಬಳಸುತ್ತಾರೆ.

---

**ಸಾಧನೆ ಸಾಗರ ನೆಗೆಸಿತು, ಕಲ್ಪನೆ ಕೈಲಾಸ ಅಲ್ಲಾಡಿಸಿತು.**

ಊಷ್ಮಗಳಲ್ಲಿ ಸ, ಶ, ಷ, ಎಂಬ ಮೂರು ವಿಧ ಶಿ. ಕ. ದಲ್ಲಿದೆ. ಶ ಮತ್ತು ಷಗಳ ನಿಜವಾದ ಅಂತರ ವಿದ್ಯಾವಂತರ ಮಾತಿನಲ್ಲೂ ಉಚ್ಚಾರಣೆಯಲ್ಲಿ ಬರುವುದು ಅಪರೂಪ ವಾದರೂ, ಲಿಪಿಯಲ್ಲಿ ಸಂಜ್ಞೆಗಳು ಇರುವುದರಿಂದ ಬರಹದಲ್ಲಿ ಹೇಗೋ ಉಳಿದಿವೆ. ಇವುಗಳು ನಿಜವಾದ ಉಚ್ಚಾರಣಾ ಭೇದ ಅಸ್ಪಷ್ಟವಾದುದರಿಂದ ಅವುಗಳನ್ನು ಗುರುತಿಸಲು 'ಪಟ್ಟೆ ಶ', 'ಮುರುಟು ಶ' ಎಂಬ ಹೆಸರುಗಳನ್ನು, ಕೊಡಲಾಗಿದೆ. ಆದರೆ ಸಹಜವಾದ ಗೌ.ಕ.ದಲ್ಲಿ ಈ ಮೂರರ ಬದಲು ಒಂದೇ, ಸ ಮಾತ್ರ ಬಳಕೆಯಲ್ಲಿದೆ.

ಕ್ರಿಸ್ತ ಶಕ 10ನೇ ಶತಮಾನದಿಂದ ಪಕಾರಯುಕ್ತ ಪದಗಳು ಹಕಾರಯುಕ್ತವಾಗಿ ಪರಿವರ್ತಿತವಾದುವೆಂದು ಭಾಷಾವಿಜ್ಞಾನ ಚರಿತ್ರೆಯಿಂದ ತಿಳಿಯುತ್ತದೆ. ಗೌ. ಕ.ದಲ್ಲಿಯೂ ಹಕಾರ ಧ್ವನಿಮಾಸ್ಥಾನವನ್ನು ಪಡಕೊಂಡಿದೆ. ಪ ಮತ್ತು ಹ ಗಳ ನಡುವೆ ಅರ್ಥವೈದೃಶ್ಯವಿರುವ ಅನೇಕ ಸಂದರ್ಭಗಳು ಗೌ.ಕದಲ್ಲೂ ಇವೆ. ಉದಾ: ಪಾಲ್-ಹಾಲ್: ಪಾಡ್-ಹಾಡ್; ಪೆಟ್ಟ್-ಹೆಟ್ಟ್., ಹಟ್ಟ್,

**ವ್ಯಾಕರಣ : ಸ್ತ್ರೀಲಿಂಗ ವಿವಕ್ಷೆ**

ಗೌ.ಕ.ದ ಪ್ರಥಮ ಪುರುಷ ಸರ್ವನಾಮಗಳಲ್ಲಿ ಶಿ.ಕ.ಕ್ಕಿಂತ ವಿಶಿಷ್ಟತೆಯನ್ನು ಕಾಣುತ್ತೇವೆ. ಇದರಲ್ಲಿ ಪ್ರ.ಪು.ಸ.ನಾ ಸ್ತ್ರೀಲಿಂಗಕ್ಕೆ ಪ್ರತ್ಯೇಕ ಪದವಿಲ್ಲ. ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ಎರಡೇ ವಿಭಾಗವಿದೆ. ಉದಾ:

ಅಂವ (ಅವನು), ಇಂವ(ಇವನು), ಅದ್ (ಅವಳು ಅಥವಾ ಅದು), ಇದ್ (ಇವಳು ಅಥವಾ ಇದು) ಇಲ್ಲಿ ಇದು ತೆಲುಗು ಭಾಷೆಯ ವ್ಯಾಕರಣ ಪದ್ಧತಿಯನ್ನು ಹೋಲುತ್ತದೆ. ಅಲ್ಲಿಯೂ (ಎ) ವಾಡು, ವೀಡು (ಅವನು, ಇವನು), (ಬಿ) ಅದಿ, ಇದಿ(ಅವಳು, ಅದು; ಇವಳು, ಇದು) ಎಂಬ ಎರಡೇ ವಿಭಾಗಗಳನ್ನು ಕಾಣುತ್ತೇವೆ. ಗೌರವಾರ್ಥಕ ಏಕವಚನದಲ್ಲಿ ಮಾತ್ರ ತೆಲುಗಿನಲ್ಲಿ ಆಮೆ ಎಂಬ ಸ್ತ್ರೀವಾಚಕ ಪದವಿದೆ. ಗೌ.ಕ.ದಲ್ಲಿ ಅದೂ ಇಲ್ಲ ಈಗೀಗ ಸುಧಾರಿತರೆನಿಸಿಕೊಂಡವರು ಶಿ.ಕ.ದ ಅನುಕರಣೆಯಿಂದ ಅವ್ವ, ಇವ್ವ ಎಂದು ಸ್ತ್ರೀಲಿಂಗಕ್ಕೆ ಹೊಸ ರೂಪವನ್ನು ಗೌ.ಕ.ಕ್ಕೆ ಅಕ್ರಮಪ್ರವೇಶ ಮಾಡಿಸುತ್ತಿದ್ದಾರೆ. ಇದು ಸ್ತ್ರೀ ಮಾರ್ಯಾದೆಗೆ ಅಸ್ತಿತ್ವವನ್ನು ಕೊಡುತ್ತದಾದರೂ ಶತ ಶತಮಾನಗಳಿಂದ ಸಹಜವಾಗಿ ಬಂದಿರುವ ಭಾಷಾ ಮರ್ಯಾದೆಯನ್ನು ಕುಲಗೆಡಿಸುವಂತಾಗಿದೆ.

ಸರ್ವನಾಮದಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಎಂಬ ಎರಡು ವಿಭಾಗಗಳನ್ನು ಹೊಂದಿದ್ದರೂ, ಅದಕ್ಕೆ ಸಂವಾದಿಯಾಗಿ ಬರುವ ಕ್ರಿಯಾಪದಗಳಲ್ಲಿ ಈ ವ್ಯತ್ಯಯವೂ ಇಲ್ಲದೆ, ಏಕರೀತಿಯ ನಪುಂಸಕ ಪ್ರತ್ಯಯಾಂತ ರೂಪವೇ ಬರುತ್ತದೆ.

ಉದಾ: ಅಂವ ಬಾತ್(ಅವನು ಬಂದಿತು) ಇಂವ ಬಾತ್ (ಇವನು ಬಂದಿತು) ಅದ್ ಬಾತ್ (ಅವಳು ಅಥವಾ ಅದು ಬಂದಿತು) ಇದ್ ಬಾತ್ (ಇವಳು ಅಥವಾ ಇದು ಬಂದಿತು) ಅವ್ವ, ಇವ್ವ ಎಂಬ ಶಿ.ಕ. ಅನುಕರಣಾಪಟುಗಳ ಪ್ರಯೋಗವೂ ವಾಕ್ಯ ರಚನೆಯಲ್ಲಿ ನಿಯಮೋಲ್ಲಂಘನೆ ಮಾಡಲು ಸಾಧ್ಯವಾಗದೆ ಅವ್ವ/ಇವ್ವ ಬಾತ್ ಎಂಬ ವಿಕಾರ ರೂಪದ ಮಾತನ್ನೇ ಆಡಬೇಕಾಗುತ್ತದೆ.

ಏಕವಚನ ರೂಪದಲ್ಲಿ ಪುಲ್ಲಿಂಗ ಮತ್ತು ಪುಲ್ಲಿಂಗೇತರ ಭೇದವಿದ್ದರೂ, ಬಹುವಚನದಲ್ಲಿ ಆ ವ್ಯತ್ಯಯವೂ ಗೌ.ಕ. ದಲ್ಲಿಲ್ಲ. ಶಿ.ಕ.ದಲ್ಲಿ ಬಹುವಚನ ರೂಪದಲ್ಲಿ ಮಾತ್ರ ಸ್ತ್ರೀಲಿಂಗ ಮತ್ತು ಪುಲ್ಲಿಂಗಗಳು ಏಕೀಭವಿಸಿ ಗೌರವ ರೂಪದಲ್ಲಿ ಅವರು ಇವರು ಎಂದಾಗಿ ಅದಕ್ಕೆ ಸಂವಾದಿಯಾದ ಕ್ರಿಯಾಪದದಲ್ಲೂ, ಆರು ಎಂಬ ಪ್ರತ್ಯಯವನ್ನು ಹೊಂದುತ್ತದೆ.

| ಉದಾ: ಗೌ.ಕ. | ಶಿ.ಕ. |
|---|---|
| ಅವು/ಇವು ಬಂದೊ<br>(ಮನುಷ್ಯರು,ಪ್ರಾಣಿಗಳು) | |
| | ಅವರು/ಇವರು (ಬಂದರು<br>(ಗಂಡಸರು, ಹೆಂಗಸರು)<br>ಅವುಗಳು) / ಇವು (ಗಳು)<br>ಬಂದುವ (ಪ್ರಾಣಿಗಳು) |

ಗೌ.ಕ.ದಲ್ಲಿ ಸ್ತ್ರೀಲಿಂಗಕ್ಕೆ ಸರ್ವನಾಮಗಳಲ್ಲಿ ಸ್ಥಾನವಿಲ್ಲ ದಿದ್ದರೂ ಇತರೆಡೆಗಳಲ್ಲಿ ಪದಗಳನ್ನು ತದ್ಧಿತವಾಗಿಸಿಕೊಳ್ಳುವಾಗ ಸ್ತ್ರೀಲಿಂಗಕ್ಕೆ ಪ್ರತ್ಯಯ ರೂಪವಿರುವುದ ಕಂಡು ಬರುತ್ತದೆ.

| ಪುಲ್ಲಿಂಗ | ಸ್ತ್ರೀಲಿಂಗ |
|---|---|
| ಕುರುಡ | ಕುರುಡಿ |
| ತುಂಟ | ತುಂಟಿ |
| ಕುಂಟ | ಕುಂಟಿ |
| ಜಾಣ | ಜಾಣೆ |
| ಕಳ್ಳ | ಕಳ್ಳಿ |
| ಕುಳ್ಳ | ಕುಳ್ಳಿ...ಇತ್ಯಾದಿ |

ಅಳ್ ಎಂಬ ಪ್ರತ್ಯಯ ಸ್ತ್ರೀಲಿಂಗವನ್ನು ಸೂಚಿಸುವುದು ಶಬ್ದ ಸಂಯೋಜನೆಯಲ್ಲಿ ಕಂಡು ಬರುತ್ತದೆ. ಉದಾ: ಮಜ (ಮಗನು), ಮಗ (ಮಗಳು) ಮಗ ಪದಕ್ಕೆ ವಿಭಕ್ತಿ ಪ್ರತ್ಯಯಗಳು ಪರವಾದಾಗ ಅಳ್ ಆಗಮವಾಗಿ ಸ್ತ್ರೀವಾಚಿಯಾಗಿ ಬಳಕೆಯಾಗುತ್ತದೆ. ಉದಾ:

| | | |
|---|---|---|
| ಪ್ರಥಮಾ ವಿಭಕ್ತಿ | ಮಜ (ಮಗನು) | ಮಗ(ಮಗಳು) |
| ದ್ವಿ.ವಿ. | ಮಜ್ಜನ (ಮಗನನ್ನು) | ಮಗಳ (ಮಗಳನ್ನು) |
| ತೃ.ವಿ. | ಮಜ್ಜಂದ (ಮಗನಿಂದ) | ಮಗಳಿಂದ |
| ಚ.ವಿ. | ಮಜ್ಜಂಗೆ (ಮಗನಿಗೆ) | ಮಗುಳಿಗೆ (ಮಗಳಿಗೆ) |
| ಪಂ.ವಿ. | ಮಜ್ಜಂದ (ಮಗನಿಂದ) | ಮಗಳ್ಂದ (ಮಗಳಿಂದ) |
| ಷ.ವಿ. | ಮಜ್ಜನ (ಮಗನ) | ಮಗಳ(ಮಗಳ) |
| ಸ.ವಿ. | ಮಜ್ಜನಕ್ಕಲೆ<br>(ಮಗನ ಹತ್ತಿರ) | ಮಗಳಕ್ಕಲೆ<br>(ಮಗಳ ಹತ್ತಿರ) |

ದ್ವಿ. ಮತ್ತು ಷ.ವಿ ಗಳಿಗೆ ತೃಮತ್ತು ಪಂ. ವಿಗಳಿಗೆ ಪರಸ್ಪರ ಏಕರೂಪವನ್ನು ಗೌ.ಕ.ದಲ್ಲಿ ಕಾಣುತ್ತೇವೆ.

ಶಿ.ಕ.ದಲ್ಲಿ ಭೂತ, ವರ್ತಮಾನ, ಭವಿಷ್ಯತ್ಕಾಲವೆಂಬ ಮೂರು ಕಾಲವಾಚಕಗಳಿದ್ದರೂ ಬಳಕೆಯಲ್ಲಿ ವರ್ತಮಾನ ರೂಪವೇ ಭವಿಷ್ಯದರ್ಥದಲ್ಲಿ ಪ್ರಯೋಗವಾಗುತ್ತದೆ. ನಾನು

ಬಂದೆನು, ನಾನು ಬರುತ್ತೇನೆ, ನಾನು ಬರುವೆ;ಆದರೆ ಮಾತಿನಲ್ಲಿ ನಾನು ನಾಳೆ ಬರುತ್ತೇನೆ ಎನ್ನಲೂ ಸಾಧ್ಯ.

ಗೌ.ಕ. ನಾ ಬಂದೆ, ನಾ ಬನ್ನೆ, ನಾ ಬಾವೆ ಎಂಬ ಭೇದವಿದ್ದರೂ ನಾ ನಾಳೆ ಬನ್ನೆ ಎಂಬ ಪ್ರಯೋಗ ಬಳಕೆಯಲ್ಲಿದೆ.

ಹಳಗನ್ನಡದಲ್ಲಿ ಸಬಿಂದುವಾಗಿದ್ದ ಪದಗಳು ನಡುಗನ್ನಡದಲ್ಲಿ ಅಬಿಂದುಕಗಳಾಗಿ ಪರಿವರ್ತನೆಗೊಂಡವು. ಗೌ.ಕ.ದಲ್ಲಿ ಕೆಲವು ಸಬಿಂದುಕಗಳು ಇನ್ನು ಕೆಲವು ಅಬಿಂದುಕ ರೂಪಗಳು ಕಂಡು ಬರುತ್ತಿದ್ದು ಒಂದು ರೀತಿಯ ಮಿಶ್ರ ಚಿತ್ರಣ ದೊರೆಯುತ್ತದೆ.

| ದ.ಗ. | ಶಿ.ಕ. | ಗೌ.ಕ. |
|---|---|---|
| ಅಡಂಗು | ಅಡಗು | ಅಡ್‌ಂಗ್ |
| ಬೇಂಟೆ | ಬೇಟೆ | ಬ್ಯಾಟೆ |
| ದೋಂಟಿ | ದೋಟಿ | ದೋಂಟೆ |
| ತೊಡಂಕು | – | ಚೊಡಂಕ್ |
| ಕಲಂಕು | ಕಲಕು | ಕುಲ್‌ಂಕ್ |

...ಇತ್ಯಾದಿ

ಸಂಕ್ರಮಣಾವಸ್ಥೆಯಲ್ಲಿರುವ ಒಂದು ಪದದ ಕುರಿತು ವಿವೇಚಿಸಬೇಕಾಗಿದೆ. ಹುಗ್ಗೆ =ಬೆಂದ ಅನ್ನ, ಇದು ಹಳಗನ್ನಡದ ಪುಜ್ಬು ಎಂಬ ಮೂಲ ರೂಪದಿಂದ ಬಂದಿದೆ. ಪುಜ್ಬು ಎಂದರೆ ಅಕ್ಕಿದೇ ಆಗಬೇಕಾಗಿರಲಿಲ್ಲ. ಬೇರೆ ಯಾವುದೇ ಧಾನ್ಯದ್ದಾಗಿರ ಬಹುದು. ಆದರೆ ಅದು ಹುಗ್ಗೆ ಎಂಬ ರೂಪ ಧರಿಸಿದಾಗ ಅಕ್ಕಿಯನ್ನು ಬೇಯಿಸಿ, ತಿಳಿಯನ್ನು ಬಸಿದ ಅನ್ನಕ್ಕೆ ಮಾತ್ರ ಸೀಮಿತವಾಯಿತು. ಈಗ ಸುಧಾರಿತರ ಬಾಯಲ್ಲಿ 'ಹುಗ್ಗೆ' ಸೇರದೆ, 'ಅನ್ನ'ವೇ ಇಷ್ಟವಾಗುತ್ತದೆ. ಅಚ್ಚ ದ್ರಾವಿಡ ಪದವಾದ ಈ ಸುಂದರ ಹುಗ್ಗೆಯನ್ನು ಸಂಸ್ಕೃತದ ಅನ್ನದಿಂದ ಸ್ಥಾನಾಂತರಗೊಳಿಸುವುದು ಶೋಚನೀಯ. ಶಿ.ಕ.ದಲ್ಲಿ ಮೊದಲೇ ಈ ದೇಶೀಯ ಪದ ಇಲ್ಲವಾಗಿ ಅನ್ಯಪದವೇ ಬಳಕೆಯಲ್ಲಿದೆ. ಗೌ.ಕ.ದಲ್ಲಿದ್ದುದೂ ಈಗ ಕಣ್ಮರೆಯಾಗಲಾರಂಭಿಸಿದುದು ದುರದೃಷ್ಟಕರ.

ಈಗ ಚೊಕ್ಕವಾದ ನಮ್ಮ ನಮ್ಮ ತಾಯ್ನುಡಿಯನ್ನು ಬಳಸದೆ ಶಿ.ಕ. ವನ್ನೆ ಮಕ್ಕಳಲ್ಲಿ ಮಾತಾಡಿ ತಮ್ಮ ಸಮೀಪ ಬಂಧುಗಳಿಗೇ ಅವರು ಪರಕೀಯರಾಗುವಂತೆ ಮಾಡುವ ಹೊಸ ಫ್ಯಾಷನ್ ಯುಗ ಆರಂಭವಾಗಿದೆ. ಶಿ.ಕ.ವನ್ನು ಕಲಿಯಲು ಬೇಕಾದಷ್ಟು ಅವಕಾಶ ಮಕ್ಕಳಿಗೆ ತಮ್ಮ ಸುತ್ತು ಮುತ್ತಲ ವಾತಾವರಣದಲ್ಲಿ, ಶಾಲೆಗಳಲ್ಲಿ ದೊರೆಯುತ್ತದೆ. ಆದರೆ ಗೌ.ಕ.ವೇ ಆಗಲಿ, ತುಳುವೇ ಮಾತೃಭಾಷೆಯಾಗಿದ್ದ ವಾತಾವರಣ ದಲ್ಲಿ ಅದನ್ನು ಬಳಸದೆ ನಮ್ಮ ಮಕ್ಕಳನ್ನು ವಂಚಿಸುವುದ ಸರಿಯಲ್ಲ. ಯಾವ ಭಾಷಾಪ್ರಭೇಧವವೇ ಆಗಲಿ ಅದಕ್ಕೆ ಶತಮಾನ ಗಳ ಇತಿಹಾಸ ಹಿನ್ನೆಲೆಯಲ್ಲಿದೆ. ಅದು ನಮ್ಮ ಹಿರಿಯರಿಂದ ನಮಗೆ ಬಂದ ಬಳುವಳಿ. ಇದನ್ನು ಅವಜ್ಞೆಗೊಳಪಡಿಸಿದರೆ, ನಾವು ನಮ್ಮ ಅಮೂಲ್ಯ ಪರಂಪರೆಯ ಸೊತ್ತನ್ನು ಕಳಕೊಂಡಂತೆ. ನಮ್ಮ ಸಂಸ್ಕೃತಿಯ ಹೆಮ್ಮರಕ್ಕೆ ಕೊಲಿಯೇಟು ಹಾಕಿದಂತೆ. ನಮ್ಮ ವೈಶಿಷ್ಟ್ಯವನ್ನು ಕಳಕೊಂಡಂತೆ. ಆದುದರಿಂದ ನಮ್ಮ ಮಾತನ್ನು ನಮ್ಮ ಸಾಮಾಜಿಕ ಸಾಂಸಾರಿಕ ನೆಲೆಯಲ್ಲಿ ಮುಕ್ತವಾಗಿ ಬಳಸಲು ಯಾರೂ ಅಂಜಬೇಕಿಲ್ಲ, ನಾಚಬೇಕಿಲ್ಲ. ನಾವೂ ಪ್ರಧಾನ ಸಾಂಸ್ಕೃತಿಕ ಪ್ರತಿನಿಧಿಗಳು. ಮುಂದೆ ನಮ್ಮ ಮಕ್ಕಳೂ ಹಾಗಿರಬೇಕಾದುದು ಅಗತ್ಯ. ನಮ್ಮಲ್ಲೆ ನಾವು ಪರಕೀಯರಾಗುವ ಒಣ ಜಂಬದ ತೋರಿಕೆಯನ್ನು ಬಿಟ್ಟು, ಆತ್ಮಾಭಿಮಾನದಿಂದ ಬಾಳುವುದು ನಮ್ಮ ಶ್ರೇಯಸ್ಸಿಗೆ ದಾರಿಯಾದೀತು.

**— ಪ್ರೊ. ಕೋಡಿ ಕುಶಾಲಪ್ಪ ಗೌಡ, ಜಟ್ಟಿಪಳ್ಳ, ಸುಳ್ಯ.**

## ವ್ಯಕ್ತಿ ಪರಿಚಯ : ಶ್ರೀಮತಿ ಕೆ.ಎಸ್. ಜಾನಕಿ ದೇವಪ್ಪ.



ಸಮಯ ಪಾಲನೆ. ಪ್ರಾಮಾಣಿಕತೆ, ಕಾರ್ಯದಕ್ಷತೆ, ಕರ್ತವ್ಯ ನಿಷ್ಠೆ, ಸೇವಾಕಾಂಕ್ಷೆ, ಸ್ನೇಹಪರತೆ, ಸರಳತೆ ಇವುಗಳನ್ನು ಮೈಗೂಡಿಸಿಕೊಂಡು ಸರ್ಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ಆಸ್ಪತ್ರೆ ಕೊಡಗು ಮಡಿಕೇರಿಯಲ್ಲಿ ಉದ್ಯೋಗಿಯಾ ಗಿರುವ ಶ್ರೀಮತಿ ಅಮೆಮನೆ ಜಾನಕಿ ದೇವಪ್ಪ ಇವರನ್ನು ಸಮಾಜ ಭಾಂಧವರಿಗೆ ಪರಿಚಯಿಸಲು ಹರ್ಷವಾಗುತ್ತಿದೆ.

ಶ್ರೀಮತಿ ಜಾನಕಿಯವರು ಮಡಿಕೇರಿ ತಾಲೂಕು, ಹೆರವನಾಡು ಗ್ರಾಮದ ದಿ|| ಕಲ್ಲಿಂಬಿರ ಸುಬ್ಬಯ್ಯ ತಂಗಮ್ಮ ದಂಪತಿಗಳ ಪುತ್ರಿಯಾಗಿ 1946ನೇ ಇಸವಿ ಜನಿಸಿದರು. 1968ರಲ್ಲಿ ಸರ್ಕಾರಿ ಸೇವೆಗೆ ಸೇರಿದ ಇವರು 1972ರಲ್ಲಿ ಅಮೆಮನೆ ಬೋಪಣ್ಣ ನೀಲಮ್ಮನವರ ಪುತ್ರ ದೇವಪ್ಪನವರನ್ನು ವಿವಾಹವಾದರು. ಸರ್ಕಾರಿ ಆಸ್ಪತ್ರೆಯಲ್ಲಿ 33 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಇವರು ಈಗ ಶುಶ್ರೂಷಧೀಕ್ಷರು ದರ್ಜೆ ಎರಡು ಪದೋನ್ನತಿ ಹೊಂದಿ ಸೇವೆ ಸಲ್ಲಿಸುತ್ತಿರುವರು.

ಇವರಿಗೆ ಮೂವರು ಮಕ್ಕಳಿದ್ದು ಹಿರಿಯ ಪುತ್ರಿ ಆರೋಗ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವರು. ಇಬ್ಬರು ಪುತ್ರರಿದ್ದು, ಒಬ್ಬರು ಖಾಸಗಿ ಕಂಪನಿಯಲ್ಲಿ ಮತ್ತೊಬ್ಬರು ಅರಣ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವರು.

ಇವರ ಸೇವೆ ಅವಧಿಯಲ್ಲಿ ವೆಂಕಟರಮಣ ದೇವರ ಕೃಪಾಕಟಾಕ್ಷ ಸದಾ ಇರಲೆಂದು ಶುಭ ಹಾರೈಸೋಣ.

— ಬರಹ : ಚೆಲ್ಲನ ಗೀತಾ ಗಿರೀಶ್, ಬೆಂಗಳೂರು.

**ದಾಕ್ಷಿಣ್ಯದದಾಸಹೊಟ್ಟೆಗೆಉಪವಾಸ**

# ಬೊಜ್ಜ : ಸಾವಿನ ಸಾಂಕೇತಿಕ ಪ್ರತಿನಿಧೀಕರಣ

– ಡಾ. ಪುರುಷೋತ್ತಮ ಬಿಳಿಮಲೆ

ಅಂತ್ಯ ಸಂಸ್ಕಾರ ಅಥವಾ ಉತ್ತರ ಕ್ರಿಯೆಗಳ ಬಗೆಗೆ ಭಾರತದಲ್ಲಿ ನಡೆದ ಅಧ್ಯಯನಗಳು ತುಂಬ ಕಡಿಮೆ. ಕ್ಷೇತ್ರ ಕಾರ್ಯಕ್ಕಿರುವ ತೊಡಕುಗಳೇ ಅದಕ್ಕೆ ಕಾರಣವಾಗಿರಬೇಕು. ಸಹಜವಾಗಿ ಸಾವಿನ ಸುತ್ತ ಆತಂಕಗಳಿರುತ್ತವೆ, ಭಯ ಮಿಶ್ರಿತ ವಾತಾವರಣವಿರುತ್ತದೆ, ಬದಲಿಸಲಾಗದ ಕಟ್ಟುನಿಟ್ಟಿನ ಆಚರಣೆಗಳಿರುತ್ತವೆ. ಸಾವು ಉಂಟುಮಾಡುವ ದುಃಖವು ಮಾತುಗಳನ್ನು ಕಸಿದುಕೊಂಡಿರುತ್ತದೆ. ಇಂಥ ಬಿಕ್ಕಟ್ಟುಗಳಲ್ಲಿ ಕ್ಷೇತ್ರಕಾರ್ಯಕರ್ತನಿಗೆ ಬೇಕೆಂದರಲ್ಲಿ ಓಡಾಡಲಾಗುವುದಿಲ್ಲ, ಪ್ರಶ್ನೆಗಳನ್ನು ಕೇಳಿಕೊಳ್ಳಲಾಗುವುದಿಲ್ಲ. ಸಂದರ್ಶನ ನಡೆಸಲಾಗುವುದಿಲ್ಲ. ಸಂಶೋಧನ ಉಪಕರಣಗಳನ್ನು ಸ್ವೇಚ್ಛೆಯಿಂದ ಬಳಸಿಕೊಳ್ಳಲಾಗುವುದಿಲ್ಲ, ಕೆಲವು ವಿಧಿಗಳನ್ನು ಪುನರಾವರ್ತಿಸಿಕೊಂಡು ದಾಖಲಿಸಲಾಗುವುದಿಲ್ಲ. ತನ್ನದಲ್ಲದ ಜಾತಿ ಮತ್ತು ಕುಟುಂಬಗಳ ನಡುವೆ ಕ್ಷೇತ್ರಕಾರ್ಯ ನಡೆಸುವುದು, ಸಾವಿಗೆ ಸಂಬಂಧಿಸಿದಂತೆ ತೀರ ಕ್ಲಿಷ್ಟಕರ. ಎಷ್ಟೋ ಬಾರಿ ಅಂಥ ಸಂದರ್ಭದಲ್ಲಿ ಪ್ರವೇಶವನ್ನೇ ನಿರಾಕರಿಸಲಾಗುತ್ತದೆ. ತಮ್ಮ ಕ್ರಿಯಾಚರಣೆಗಳಿಗೆ ಜನರು ತಾವೇ ನೀಡುವ ಅರ್ಥವನ್ನಂತೂ ದಾಖಲಿಸಲಾಗುವುದೇ ಇಲ್ಲ. ಗೋಳಿನ ಕಡಲಿನ ನಡುವೆ ಸಂಶೋಧಕ ಅಸಹಾಯಕನಾಗಿ ಬಿಡುತ್ತಾನೆ. ಬಾವುಕತೆಯು ಸಂಶೋಧಕನ ವೈಚಾರಿಕ ನೆಲೆಗಳನ್ನು ಅಲುಗಾಡಿಸಿ ಬಿಡುತ್ತದೆ. ಕ್ಷೇತ್ರ ಕಾರ್ಯಕ್ಕೆ ಸಂಬಂಧಿಸಿದಂತೆ ಸಾವು ತಂದೊಡ್ಡುವ ಸಮಸ್ಯೆಗಳು ಹೆಚ್ಚು ಮಾನವೀಯವೂ, ಸಂಕೀರ್ಣವೂ ಆಗಿದ್ದು, ಬೇರೆ ಬಗೆಯ ಸಿದ್ಧತೆಗಳನ್ನು ಸಂಶೋಧಕನಿಂದ ನಿರೀಕ್ಷಿಸುತ್ತದೆ. ಇಂಥ ಸಿದ್ಧತೆಗಳನ್ನು ವಿದ್ವಾಂಸರು ಮಾಡಿಕೊಂಡಿಲ್ಲವಾದ್ದರಿಂದ ಒಟ್ಟಾರೆಯಾಗಿ ಈ ಕ್ಷೇತ್ರದಲ್ಲಿ ಬೆಳೆದ ವಿದ್ವತ್ತು ಕಡಿಮೆ ಎಂದೇ ಹೇಳಬಹುದು.

ಇಷ್ಟಿದ್ದರೂ ಅಲ್ಲಿ- ಇಲ್ಲಿ ಕೆಲವು ಅಧ್ಯಯನಗಳು ನಡೆದಿವೆ. ಭಾರತದಲ್ಲಿ ನಡೆದ ಇಂತಹ ಅಧ್ಯಯನಗಳು ಬ್ರಾಹ್ಮಣರ ಅಂತ್ಯ ಸಂಸ್ಕಾರದ ವಿಶ್ಲೇಷಣೆಗೆ ಸೀಮಿತವಾಗಿದೆ. ಬಾರತದಲ್ಲಿನ ಅಂತ್ಯ ಸಂಸ್ಕಾರ ವಿಧಿಗಳ ಕುರಿತು ಬರೆದ ಪಾಶ್ಚಾತ್ಯ ವಿದ್ವಾಂಸರೂ ಬ್ರಾಹ್ಮಣರ ಅಂತ್ಯ ಕ್ರಿಯೆಗಳನ್ನೇ ಆಕರವಾಗಿ ಪರಿಗ್ರಹಿಸಿದ್ದಾರೆ. ಇದಕ್ಕೆ ಕಾರಣ ಸ್ಪಷ್ಟವೇ ಇದೆ. ಅಂಥ ವಿಶ್ಲೇಷಣೆಗೆ ಬೇಕಾದ ಆಕರಗಳನ್ನು ವಿದ್ಯಾವಂತ ಬ್ರಾಹ್ಮಣರು ಒದಗಿಸಿಕೊಡಬಲ್ಲವರಾಗಿರುವುದು ಮತ್ತು ಸಂಸ್ಕಾರದ ವಿವರಗಳು ಗೃಹ್ಯ ಸೂತ್ರಗಳಲ್ಲಿ ಸುಲಭವಾಗಿ ದೊರೆಯುತ್ತಿರುವುದು. ಅಂದರೆ ಇಲ್ಲಿ ವಿಶ್ಲೇಷಕನಿಗೆ ಅಂತ್ಯ ಸಂಸ್ಕಾರದ ಬಗೆಗೂ ಒಂದು 'ಪಠ್ಯ'ಸುಲಭವಾಗಿ ಲಭಿಸುತ್ತದೆ. ಇಂಥ ಲಿಖಿತ ಪಠ್ಯವನ್ನು ಆಧಾರವಾಗಿರಿಸಿಕೊಂಡು ಅಧ್ಯಯನ-ವ್ಯಾಖ್ಯಾನಗಳು ಸ್ವಲ್ಪ ಮಟ್ಟಿಗೆ ನಡೆದಿದೆ ನಿಜ. ಇಂಥ ಲಿಖಿತ ಪಠ್ಯಗಳು ಬ್ರಾಹ್ಮಣೇತರರ ಬಗೆಗೆ ದೊರೆಯುವುದಿಲ್ಲದ ಕಾರಣ. ಬ್ರಾಹ್ಮಣೇತರ ಅಂತ್ಯ ಸಂಸ್ಕಾರದ ಕುರಿತಾಗಿ ನಮಗಿಂದು ಲಿಖಿತವಾಗಿ ಯಾವ ಮಾಹಿತಿಯೂ ಲಭ್ಯವಿಲ್ಲ. ಗೃಹ್ಯ ಸೂತ್ರದ ಲಿಖಿತ ಪಠ್ಯವನ್ನು ವಾಸ್ತವದ ಆಚರಣೆಗಳೊಂದಿಗೆ ಹೋಲಿಸಿನೋಡುವ ಪ್ರಯತ್ನವೂ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಸಾವಿಗೆ ಸಂಬಂಧಿಸಿದಂತೆ ವಿವಿಧ ಸಮುದಾಯಗಳ ಜನರು ನಡೆಸುವ ಆಚರಣೆಗಳ ಕುರಿತಾಗಿ ನಾವು ಇನ್ನಷ್ಟೇ ತಿಳುವಳಿಕೆಯನ್ನು ಬೆಳೆಸಿಕೊಳ್ಳಬೇಕಾಗಿದೆ, ನಮ್ಮ ಅಧ್ಯಯನದ ಹಾದಿಯನ್ನು ಆ ಕಡೆಗೆ ತಿರುಗಿಸಿಕೊಳ್ಳಬೇಕಾಗಿದೆ. ಶಂಭುಶರ್ಮ (1960)ಹರ್ಟ್ಜ್(Hertz 1960) ಬ್ರೆಂಡಾಬೆಕ್(Beck 1976) ಮೀನಾ ಕೌಶಿಕ್(Meena Kaushik 1976), ಇಂಡೆಸ್ ಮತ್ತು ನಿಕೊಲಸ್ (Inden and Nicholas 1977)ನೈಪೆ(Knipe 1977), ವೀಣಾ ದಾಸ್(Veena Das 1977), ಶ್ರೀನಿವಾಸ್ ಎಂ. ಎಸ್. (Srinivas 1978) ಡ್ಯೂಮೋ( Dumount 1980)ಪ್ಯಾರಿ (Parry 1981) ಕುಲಕರಣಿ (1983), ಹೆಬರ್ಟ್(Helbert 1983),ರಾಮಕೃಷ್ಣ ಶಾಸ್ತ್ರಿ(1985), ಸತ್ಯನಾಥ್ (1988), ವೈ. ಸಿ. ಭಾನುಮತಿ (1994)ಮೊದಲಾದವರು ನಡೆಸಿದ ಅಧ್ಯಯನಗಳನ್ನು ನಾವಿಲ್ಲಿ ನೆನಪಿಸಿ ಕೊಳ್ಳಬಹುದು. ಮೇಲೆ ಹೇಳಿದ ವಿದ್ವಾಂಸರಲ್ಲಿ ಕೊನೆಯವರನ್ನು ಹೊರತು ಪಡಿಸಿದರೆ ಉಳಿದವರೆಲ್ಲರೂ ಕೇವಲ ಬ್ರಾಹ್ಮಣರ ಅಂತ್ಯ ಸಂಸ್ಕಾರದ ಬಗ್ಗೆಯೇ ಬರೆದಿದ್ದಾರೆ ಎಂಬುದನ್ನು ಗಮನಿಸಿದರೆ, ಬ್ರಾಹ್ಮಣೇತರರ ಸಾವಿನ ಆಚರಣೆಯ ಅಧ್ಯಯನದ ಅಗತ್ಯವೂ ತಾನೇ ತಾನಾಗಿ ಮನದಟ್ಟಾಗುತ್ತದೆ.

ಈ ಅರಿವಿನಲ್ಲಿ ಪ್ರಸ್ತುತ ಲೇಖನದಲ್ಲಿ ಬ್ರಾಹ್ಮಣೇತರರಲ್ಲಿ ಪ್ರಚಲಿತದಲ್ಲಿರುವ ಅಂತ್ಯ ಸಂಸ್ಕಾರದ ಬಗೆಗೆ ಬೆಳಕು ಚೆಲ್ಲಲು ಪ್ರಯತ್ನಿಸಲಾಗಿದೆ. ಹೀಗೆ ಮಾಡುವುದರಿಂದ ಅಂತ್ಯ ಸಂಸ್ಕಾರದ ಬಗೆಗೂ ಅಧ್ಯಯನಕ್ಕೆ ಬೇರೊಂದು ತಿರುವು ಕೊಡಲು ಸಾಧ್ಯ ಎಂದು ನಾನು ಬಾವಿಸುತ್ತೇನೆ. ಏಕೆಂದರೆ, ಇಲ್ಲಿ ಅಧ್ಯಯನಕ್ಕೆ ಸಾಂಪ್ರದಾಯಕವಲ್ಲದ ಆಕರಗಳನ್ನು ಬಳಸಿಕೊಳ್ಳಲಾಗುತ್ತದೆ ಮತ್ತು ಬ್ರಾಹ್ಮಣೇತರರ ಜನಸಮುದಾಯವೊಂದರ ಸಮಾಜ ಕಲ್ಪನೆಯನ್ನು ಪರಿಶೀಲನೆಗೆ ಒಳಪಡಿಸಲಾಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನಲ್ಲಿ ವಾಸಿಸುತ್ತಿರುವ ಗೌಡ ಜಾತಿಯ ಜನರಲ್ಲಿ ಈಗ ಪ್ರಚಲಿತದಲ್ಲಿರುವ ಅಂತ್ಯ ಸಂಸ್ಕಾರದ ವಿಧಿಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆಗೆ ಎತ್ತಿಕೊಳ್ಳಲಾಗಿದೆ. ಈಗ ಸುಮಾರು 11ವರ್ಷಗಳ ಹಿಂದೆ (1984) ಸುಳ್ಯ ತಾಲೂಕಿನ ಕೂತ್ಕುಂಜ ಗ್ರಾಮ ಮತ್ತು ಅರಂತೋಡುಗಳಲ್ಲಿ ನಾನು ನಡೆಸಿದ ಕ್ಷೇತ್ರಕಾರ್ಯದ ಆಧಾರದಿಂದ ಇಲ್ಲಿನ ವಿವರಗಳನ್ನು ಸಿದ್ಧಪಡಿಸಲಾಗಿದೆ. ಈ ವಿವರಗಳನ್ನು 1994ರ ಜನವರಿಯಲ್ಲಿ ನಾನು ನಡೆಸಿದ ಇನ್ನೊಂದು ಕ್ಷೇತ್ರಕಾರ್ಯದ ವಿವರಗಳೊಂದಿಗೆ (ಕೂತ್ಕುಂಜ ಗ್ರಾಮ) ಹೋಲಿಸಿ ನೋಡಿ, ಹಿಂದಿನ ಕ್ರಮಗಳು ಈಗಲೂ ಮುಂದುವರೆಯುತ್ತಿರುವುದನ್ನು ಖಚಿತ ಪಡಿಸಿಕೊಂಡಿದ್ದೇನೆ.

ಗೌಡರು ಸಾವನ್ನು ಹೇಗೆ ಪ್ರತಿನಿಧೀಕರಿಸಿಕೊಳ್ಳುತ್ತಾರೆ, ಅವರು ನಡೆಸುವ ಅಂತ್ಯ ಸಂಸ್ಕಾರದ ಸ್ವರೂಪ ಮತ್ತು ಅದರ ಕಾರ್ಯ, ಈ ಒಟ್ಟು ಆಚರಣೆಯ ಹಿಂದಿನ ಸೈದ್ಧಾಂತಿಕ ನೆಲೆಗಳು ಇವಿಷ್ಟನ್ನು ಈ ಲೇಖನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಇಲ್ಲಿ ಬಳಸಲಾದ 'ಸ್ವರೂಪ' ಎಂಬ ಪದವನ್ನು ಲೀಚ್ ಬಳಸಿದ (Leach 1961) : 132) Series of clearly definable, related parts that follow one another" ಎಂಬ ಅರ್ಥದಲ್ಲಿ ಬಳಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಸುಮಾರು ಎರಡೂವರೆ ಲಕ್ಷದಷ್ಟು ಸಂಖ್ಯೆಯಲ್ಲಿ ಗೌಡರು ವಾಸಿಸುತ್ತಿದ್ದಾರೆ. ಬಂಟ್ವಾಳ, ವಿಟ್ಲ ಮತ್ತು ಕೊಡಗು ಜಿಲ್ಲೆಯ ಭಾಗಮಂಡಲ ಪರಸರದಲ್ಲಿ ಕೂಡಾ ಗೌಡ ಸಮುದಾಯದ ಜನರಿದ್ದಾರೆ. ಭಾಷಿಕವಾಗಿ ಇವರಲ್ಲಿ ಎರಡು ಪ್ರಬೇಧಗಳಿವೆ. ಸುಳ್ಯ ಮತ್ತು ಭಾಗಮಂಡಲ ಪರಿಸರದಲ್ಲಿ ಇವರು 'ಅರೆಭಾಷೆ'ಯನ್ನಾಡುತ್ತಿದ್ದರೆ, ಇತರೆ ಕಡೆಗಳಲ್ಲಿ ಇವರು ತುಳುವಿನಲ್ಲಿ ವ್ಯವಹರಿಸುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಗೆ ಗೌಡರು ಹಾಸನ ಪರಿಸರದಿಂದ ವಲಸೆ ಬಂದಿದ್ದಾರೆ. ಈ ವಲಸೆಯ ಕ್ರಿ.ಶ. ಸು. 1400-1500 ನಡುವೆ ಆಗಿರಬೇಕು. ಈ ವಲಸೆಯ ಆರಂಭಿಕ ಹಂತದಲ್ಲಿ ಗೌಡರು ರಾಗಿಯನ್ನೇ ಪ್ರಧಾನವಾಗಿ ಆಹಾರಕ್ಕೆ ಬಳಸುತ್ತಿದ್ದರು. ಮುಂದೆ 'ಕುಮೇರಿ' ಬೆಳೆ ಆರಂಭಿಸಿದ ಗೌಡರು ಕರಾವಳಿಯ ಕೃಷಿ ಪದ್ಧತಿಗೆ ಒಗ್ಗಿಕೊಂಡು, ಅಡಿಕೆ ಮತ್ತು ಭತ್ತವನ್ನು ಬೆಳೆಸಲು ಆರಂಭಿಸಿದರು. ಭತ್ತವನ್ನು ಹಣವನ್ನಾಗಿ ಮಾರ್ಪಡಿಸುವ ಬ್ರಿಟಿಷರ ಧೋರಣೆಯನ್ನು ಬಲವಾಗಿ ಪ್ರತಿಭಟಿಸಿದ ಗೌಡರು 1830ರ ದಶಕದಲ್ಲಿ ಬ್ರಿಟಿಷರ ವಿರುದ್ಧ ದೊಡ್ಡ ಹೋರಾಟವನ್ನೇ ನಡೆಸಿದರು. ಈ ಹೋರಾಟವು 'ಅಮರ ಸುಳ್ಯದ ದಂಗೆ' ಅಥವಾ 'ಕಲ್ಯಾಣಪ್ಪನ ಕಾಟಕಾಯಿ' ಎಂದು ಪ್ರಸಿದ್ಧವಾಗಿದೆ. ಈ ದಂಗೆಯ ಪರಿಣಾಮವಾಗಿ ಗೌಡರು ಬ್ರಿಟಿಷರ ಅವಕೃಪೆಗೆ ಒಳಗಾದರು. ಆರ್ಥಿಕವಾಗಿ ಹಿಂದುಳಿದರು. ಎರಡನೇ ಮಹಾಯುದ್ಧದ ಅನಂತರ ಅಡಿಕೆ ಬೆಲೆಯಲ್ಲಿ ಕಾಣಿಸಿಕೊಂಡ ಏರಿಕೆಯಿಂದಾಗಿ ಗೌಡರ ಜೀವನ ಕ್ರಮದಲ್ಲಿ ಸಾಕಷ್ಟು ಪ್ರಗತಿಕಾಣಿಸಿಕೊಂಡಿತು. ಹುಟ್ಟು, ಮುಟ್ಟು, ಮದುವೆ, ಸೀಮಂತ, ಮತ್ತು ಸಾವಿನ ಆಚರಣೆಗಳಲ್ಲಿ ಬದಲಾವಣೆ ಕಾಣಿಸದಿದ್ದರೂ, ಅದಕ್ಕೆ ವೈಭವದ, ಸಂಭ್ರಮದ ಆವರಣವಂತೂ ಪ್ರಾಪ್ತಿಸಿದೆ.

**ಕಾಟಿಕ್ಕಿಸುದು**

ಗೌಡರಲ್ಲಿ ಸುಮಾರು 12 ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗ ಅಥವಾ ಹುಡುಗಿ ಸತ್ತರೆ ಹೆಣವನ್ನು ಹೂಳಲಾಗುವುದು. ಕುಷ್ಠವೇ ಮೊದಲಾದ ಭಯಾನಕ ರೋಗಗಳಿಂದ ಸತ್ತವರನ್ನು ಹೂಳಲಾಗುವುದು. ಉಳಿದಂತೆ ಗಂಡು, ಹೆಣ್ಣು , ವೃದ್ಧರು ಹೀಗೆ ಯಾರು ಸತ್ತರೂ ಅವರನ್ನು ವಿಧಿವತ್ತಾಗಿ ಸುಡಲಾಗುವುದು. ಅಂಥ ವಿಧಿಗಳಲ್ಲಿ ವ್ಯತ್ಯಾಸಗಳಿಲ್ಲ. ಒಟ್ಟು ಸಾವಿಗೆ ಸಂಬಂಧಿಸಿದ ಸಂಸ್ಕಾರಗಳೆಲ್ಲವನ್ನೂ ಸೇರಿಸಿ ಗೌಡರು 'ಬೊಜ್ಜ' ಎಂದು ಕರೆಯುತ್ತಾರೆ.

ಸಾವನ್ನು ಸಮೀಪಿಸಿದ ವ್ಯಕ್ತಿಯನ್ನು ಮೊದಲು ಮನೆಯ ಜಗಲಿಯಲ್ಲಿ ಮಲಗಿಸುತ್ತಾರೆ. ಆತ ಉಸಿರಾಡಲು ಕಷ್ಟಪಡುತ್ತಿರುವಂತೆ, ಗೊರ ಗೊರ ಸದ್ದು ಮಾಡಿದರೆ ಆಗ ಸೇರಿದ ಜನರು"ದೊಡ್ಡ ಜೀವ ಹೋಗಿದೆ, ಸಣ್ಣ ಜೀವ ಮಾತ್ರ ಉಳಿದಿದೆ" ಎನ್ನುತ್ತಾರೆ. ತಕ್ಷಣ ಕುಟುಂಬದ ಸದಸ್ಯರಿಗೆಲ್ಲ ಸುದ್ದಿ ಕಳಿಸುತ್ತಾರೆ. ಇದನ್ನು " ಬಾಯಿಗೆ ನೀರು ಕೊಡ್ದು' ಎನ್ನುತ್ತಾರೆ. ಬಾಯಿಗೆ ನೀರುಕೊಡುವ ಮುನ್ನ ವ್ಯಕ್ತಿ ಸತ್ತರೆ, ಆತ ಮುಂದಿನ ದಿನಗಳಲ್ಲಿ 'ರಣ'ವಾಗಿ ಜನರನ್ನು ಭಯಾನಕವಾಗಿ ಕಾಡುತ್ತಾನೆ ಎಂಬ ನಂಬಿಕೆ ಜನರಲ್ಲಿದೆ.

ವ್ಯಕ್ತಿ ತೀರಿಕೊಂಡರೆ, ಅದನ್ನು ಖಾತ್ರಿಪಡಿಸಿಕೊಂಡ ಅನಂತರ ಇನ್ನೊಮ್ಮೆ ಕುಟುಂಬದ ಸದಸ್ಯರಿಗೆ, ಮೃತನ ಆಪ್ತರಿಗೆ ಮತ್ತು ಊರಿನ ಪ್ರಮುಖರಿಗೆ ಸುದ್ದಿ ತಿಳಿಸಲಾಗುವುದು. ಕೆಲವೆಡೆ ಆಕಾಶಕ್ಕೆ ಮೂರು ಗುಂಡುಗಳನ್ನು ಹಾರಿಸಲಾಗುತ್ತದೆ. ಶವಕ್ಕೆ ಬಿಳಿ ಬಟ್ಟೆ ಹೊದಿಸುತ್ತಾರೆ. ಮತ್ತು ಶವದ ತಲೆಭಾಗದಲ್ಲಿ ಒಂದು ದೊಣ್ಣೆಯನ್ನು ಅಡ್ಡಲಾಗಿ ದಾಟಿಸುತ್ತಾರೆ. ಶವದ ತಲೆ ತೆಂಕು ದಿಕ್ಕಿಗೆ ಇರುವಂತೆ ಮಾಡಿ ಮಲಗಿಸುತ್ತಾರೆ. ಮೂಡಣ ದಿಕ್ಕಿಗೆ ಇರುವ ಮನೆ ಬಾಗಿಲಲ್ಲಿ ಮೃತನ ಆಪ್ತೇಷ್ಟರೆಲ್ಲ ಸೇರುತ್ತಾರೆ. ಶವದ ತಲೆಭಾಗದಲ್ಲಿ ಮೇಲ್ಛದಿಗೆ ಮನೆಯ ಛಾವಣಿಯಲ್ಲಿ ತೂತು ಕೊರೆದು ಆ ತೂತದಲ್ಲಿ ಒನಕೆಯೊಂದನ್ನು ದಾಟಿಸುತ್ತಾರೆ. ಮೃತನ ಆತ್ಮವು ಛಾವಣಿಯ ತೂತಲ್ಲಿ ಆಕಾಶಕ್ಕೆ ಸಾಗುತ್ತದೆ ಎಂದು ಅವರು ವ್ಯಾಖ್ಯಾನಿಸುತ್ತಾರೆ. ಇಷ್ಟರಲ್ಲಿ ಮನೆ ತುಂಬ 'ನಾರಾಯಣ, ನಾರಾಯಣ' ಎಂಬ ಉದ್ಘೋಷ ಕೇಳಿಸುತ್ತದೆ. ಶವಕ್ಕೆ ಪ್ರದಕ್ಷಿಣೆ ಬರುವವರೂ ನಾರಾಯಣಾ, ನಾರಾಯಣಾ ಎನ್ನುತ್ತಿರುತ್ತಾರೆ. ಶವದ ಶಿರೋಭಾಗದಲ್ಲಿ ಎಳ್ಳೆಣ್ಣೆ ದೀಪ ಉರಿಸಿಡುತ್ತಾರೆ. ಕಾಲಿನ ಬದಲಿಯಲ್ಲಿ ಒಂದು ಮಡಿಕೆ ಓಡನ್ನು ಇರಿಸಿ ಅದರಲ್ಲಿ ಕೆಂಡ ಹಾಕುತ್ತಾರೆ.

ಎಲ್ಲರೂ ಸೇರಿದ ಅನಂತರ, ಹೆಣವನ್ನು ಮನೆಯ ಹೊರಗಡೆಗೆ ತಂದು, ಹಲಗೆಯೊಂದರ ಮೇಲೆ ಮಲಗಿಸುತ್ತಾರೆ. ಮೃತನ ಅತ್ಯಂತ ಹತ್ತಿರದ ಸಂಬಂಧಿಗಳು ಶವದ ಮೈಗೆ ಎಣ್ಣೆ ಅರಸಿನ ತೀಡುತ್ತಾರೆ. ಅನಂತರ ಬಿಸಿ ನೀರಿನಲ್ಲಿ ಸ್ನಾನ ಮಾಡಿಸಿ, ಹೊಸ ಬಟ್ಟೆ ಉಡಿಸುತ್ತಾರೆ. ತಲೆಗೆ ಮುಂಡಾಸು ಕಟ್ಟುತ್ತಾರೆ. ಒಟ್ಟಾರೆ ಮದುಮಗನಂತೆ ಸಿಂಗರಿಸುತ್ತಾರೆ. ಈ ಹಂತದಲ್ಲಿ ಇತರರು ತಂದ ಬಿಳಿಬಟ್ಟೆಗಳನ್ನೆಲ್ಲ ಒಂದಾದ ಮೇಲೊಂದರಂತೆ ಶವಕ್ಕೆ ಹೊದಿಸುತ್ತಾರೆ.

ಮೃತನ ಮನೆಯಲ್ಲಿ ಹೀಗೆ ಶವದ ಶೃಂಗಾರ ನಡೆಯುತ್ತಿರುವಾಗ ಇನ್ನೊಂದೆಡೆ, ಮನೆಯ ಪಕ್ಕದ ಗುಡ್ಡದಲ್ಲಿ ಊರವರೆಲ್ಲ ಒಟ್ಟು ಸೇರಿ, ಹೆಣ ಸುಡಲು ಬೇಕಾದ ಒಣ ಸೌದೆಯನ್ನು ಸಂಗ್ರಹಿಸಿ ಒಂದೆಡೆ ರಾಶಿ ಹಾಕುತ್ತಾರೆ. ಈ ಸೌದೆ ರಾಶಿಯ ಪಕ್ಕದಲ್ಲಿ ಹೆಣ ಸುಡುತ್ತಾರೆ ಮತ್ತು ಈ ಜಾಗವನ್ನು 'ಸುಡ್ಕಳ' ಎಂದು ಕರೆಯಲಾಗುತ್ತದೆ. ಸೌದೆ ರಾಶಿಯನ್ನು ಸಿದ್ಧಪಡಿಸಿದ ಜನರೆಲ್ಲ ಅನಂತರ ಶವದ ಬಳಿ ಬರುತ್ತಾರೆ. ಬಂದು ಬಿದಿರಿನಿಂದ ಮಾಡಿದ 'ಚಟ್ಟ'ವನ್ನು ತಯಾರಿಸುತ್ತಾರೆ. ಅನಂತರ ಶವವನ್ನು ಚಟ್ಟದ ಮೇಲೆ ಮಲಗಿಸುತ್ತಾರೆ. ಆಗ ಶವದ

ಹಣೆಯಲ್ಲಿ ಬೆಳ್ಳಿಯ ನಾಣ್ಯಗಳನ್ನು, ಎದೆಯಲ್ಲಿ ವೀಳ್ಯದೆಲೆಯನ್ನು ಇರಿಸುತ್ತಾರೆ. ತಲೆಯ ಭಾಗದಲ್ಲಿ ಸ್ವಲ್ಪ ಅಕ್ಕಿಯನ್ನೂ, ಕಾಲಿನ ಭಾಗದಲ್ಲಿ ಬೇಯಿಸಿದ ಭತ್ತವನ್ನು ಇಡುತ್ತಾರೆ. ಅನಂತರ ತೆಂಗಿನಕಾಯಿಯೊಂದನ್ನು ಪೆಟ್ಟಲಿಗೆ ಅಪ್ಪಳಿಸಿ ಪುಡಿ ಮಾಡುತ್ತಾರೆ. ಎಲೆ ಅಡಿಕೆಯನ್ನು ಶವದ ಬಾಯಲ್ಲಿ ಇಡುತ್ತಾರೆ. ತೆಂಗಿನ ಚಿಪ್ಪಿಯಲ್ಲಿ ದೀಪ ಉರಿಸಿ, ಚಟ್ಟದ ಮೇಲೆ ಇಡುತ್ತಾರೆ.

ಈಗ ಹೆಣಕ್ಕೆ ಹೊದಿಸಿದ ಬಟ್ಟೆಗಳಲ್ಲಿ ಒಂದನ್ನು ತೆಗೆದು ಅಡ್ಡಲಾಗಿ ಹರಿಯುತ್ತಾರೆ. ಹೀಗೆ ಹರಿದ ತುಂಡನ್ನು ವೃತ್ತಾಕಾರದ ಮಾಲೆಯಂತೆ ಮಾಡಿ ಮೃತನ ಸಂಸ್ಕಾರದ ಹೊಣೆ ಹೊತ್ತವನ ಕೊರಳಿಗೆ (ಸಾಮಾನ್ಯವಾಗಿ ಮೃತನ ಹಿರಿಯ ಮಗ) ಹಾಕುತ್ತಾರೆ. ಇದನ್ನು 'ಕುಂಟಿ ಹರಿಯುವುದು'ಎನ್ನುತ್ತಾರೆ. ಕೆಲವೆಡೆ ಇದನ್ನು 'ದಳ್ಳ ಹಾಕುವುದು' ಎನ್ನುತ್ತಾರೆ. ಅದೇ ಬಟ್ಟೆಯ ತುಂಡುಗಳನ್ನು ಆತ ತನ್ನ ಕೈ ಬೆರಳಿಗೆ, ಕಾಲಿನ ಬೆರಳಿಗೆ ಕಟ್ಟಿಕೊಳ್ಳುತ್ತಾನೆ. ಉಳಿದ ಬಟ್ಟೆಯನ್ನು ಸೊಂಟಕ್ಕೆ ಸುತ್ತಿಕೊಳ್ಳುತ್ತಾನೆ. ಹೀಗೆ ಅಂತ್ಯ ಸಂಸ್ಕಾರದ ಕ್ರಿಯೆಗಳಿಗೆ ಅಧಿಕೃತನಾದ ವ್ಯಕ್ತಿಯನ್ನು 'ಸುದ್ದಕ್ಕೆ ನಿಂತವ' ಇಲ್ಲವೇ'ಕುಂಟಿ ಹಿಡ್ದಂವ' ಎಂದು ಕರೆಯುತ್ತಾರೆ. ಈ ವ್ಯಕ್ತಿ ಮುಂದೆ 16 ದಿವಸಗಳ ಕಾಲ ಕೆಲವು ಬಗೆಯ ನಿಯಮಗಳಿಗೆ ಒಳಪಟ್ಟು ಬದುಕುತ್ತಾನೆ. ಮುಖ್ಯವಾಗಿ ಆತ ಅಕ್ಕಿಯಿಂದ ಮಾಡಿದ, ಉಪ್ಪು ಹಾಕಿದ ಆಹಾರವನ್ನು ಸೇವಿಸಬಾರದು, ಸಂಭೋಗದಿಂದ ದೂರ ಇರಬೇಕು, ರಾಗಿಯಿಂದ ಮಾಡಿದ ಮುದ್ದೆ ಮಾತ್ರ ಸೇವಿಸಬೇಕು, ಇತ್ಯಾದಿ ನಿಯಮಗಳಿರುತ್ತವೆ.

ಈಗ ಚಟ್ಟವನ್ನು 'ಸುಡ್ಮಳಿ'ಯತ್ತ ಸಾಗಿಸುತ್ತಾರೆ. ಚಟ್ಟದ ಮುಂಭಾಗದಲ್ಲಿ ಅಂದರೆ ಶವದ ತಲೆ ಇರುವಲ್ಲಿ ಮೃತನ ಕುಟುಂಬದವರು ಚಟ್ಟವನ್ನು ಹಿಡಿಯುತ್ತಾರೆ. ಹಿಂಭಾಗದಲ್ಲಿ ಊರವರು ಹಿಡಿಯುತ್ತಾರೆ. ಶವಸಾಗಿಸುವಾಗ ಅರ್ಧ ಹಾದಿಯಲ್ಲಿ ಚಟ್ಟ ಹೊತ್ತವರು ಹೆಗಲು ಬದಲಾಯಿಸಬೇಕಾದರೆ, ಅಥವಾ ಹೆಣವನ್ನು ಹೆಗಲಿನಿಂದ ಇಳಿಸಬೇಕೆಂದಾದರೆ ಅದಕ್ಕೆ ಅವಕಾಶವಿದೆ. ಹಾಗೆ ಮಾಡಿದಾಗ ಹೆಣ ಇಳಿಸಿದ ಸ್ಥಳದಲ್ಲಿ 5 ವೀಳ್ಯದೆಲೆ ಮತ್ತು ಒಂದು ಅಡಿಕೆ ಇರಿಸಿ, ಕೈ ಮುಗಿಯಬೇಕಾಗುತ್ತದೆ. ಸುದ್ದಕ್ಕೆ ನಿಂತವನು ಎರಡು ಮೊಣಕಾಲೂರಿ ಕುಳಿತು ಕೊಳ್ಳಬೇಕಾಗುತ್ತದೆ. ಇದಕ್ಕೆ'ಇರ್ಮುಂಡಿ ಹಾಕುವುದು' ಎನ್ನುತ್ತಾರೆ.

ಸುಡ್ಮಳಿಯಲ್ಲಿ ಹೆಣ ಇರಿಸಿ. ಅದನ್ನು ಸೌದೆಯಿಂದ ಮುಚ್ಚಿ, ಮೂರು ಸುತ್ತು ಬಂದು ಬೆಂಕಿ ಕೊಡುತ್ತಾರೆ. ಚಟ್ಟವನ್ನು ಮುರಿದು ಬೆಂಕಿಗೇ ಹಾಕುತ್ತಾರೆ. ಈ ಬೆಂಕಿಗೆ' ಕಾಟ' ಎಂದು ಹೆಸರು. ಕಾಟದಲ್ಲಿ ಹೆಣ ಉರಿಯುವಾಗ ಶವದ ಮೈಯನ್ನು ಯಾವ ವಸ್ತುವೂ ಕೂಡಾ ಬಂಧಿಸಿರಬಾರದೆಂಬ ನಂಬಿಕೆ ಇದೆ. ಹಾಗಾಗಿ ಕೈಯಲ್ಲಿ ಉಂಗುರವಿದ್ದರೆ, ಸೊಂಟದಲ್ಲಿ ಉಡಿದಾರ ವಿದ್ದರೆ, ಕಾಲಿನಲ್ಲಿ ಬಲೆ ಇದ್ದರೆ ಅದನ್ನು ತೆಗೆದು ಬಿಡುತ್ತಾರೆ. ಇಲ್ಲವೇ ತುಂಡರಿಸುತ್ತಾರೆ. ಶವವು ಬೆಂಕಿಯಲ್ಲಿ ಉರಿಯುತ್ತಲೇ ಸೇರಿದವರು ಮುಂದಿನ ಕ್ರಿಯೆಗಳ ಬಗ್ಗೆ ಮಾತಾಡುತ್ತಾರೆ. ಮುಂದೆ, ಐದು, ಏಳು, ಒಂಬತ್ತು ಅಥವಾ 11ನೇ ದಿವಸ ನಡೆಸಬೇಕಾದ 'ಬೊಜ್ಜ'ದ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತಾರೆ. ಅನಂತರ ಎಲ್ಲರೂ ಹಿಂದಿರುಗಿ ಬಂದು, ಸ್ನಾನ ಮಾಡಿ, ತಮ್ಮ ಮನೆಗಳಿಗೆ ತೆರಳುತ್ತಾರೆ. ಮೊದಲ ದಿನದ ಈ ಕೆಲಸಗಳನ್ನು 'ಕಾಟಕ್ಕಿಸುದು' ಎನ್ನುತ್ತಾರೆ.

**ಕೊಳ್ಳಿ ಕೂಡುವುದು**

ಹೆಣವನ್ನು ಸುಟ್ಟ ಮರುದಿನ ನಡೆಯುವ ಕೆಲಸವಿದು. ಈ ದಿವಸ ಮೃತನ ಕುಟುಂಬದಲ್ಲಿನ ಕೆಲವರು ತಂಬಿಗೆ ಹಾಲು ಮತ್ತು ಗಿಂಡಿತುಪ್ಪ ತೆಗೆದುಕೊಂಡು ಸುಡ್ಮಳಿಯ ಹತ್ತಿರ ಹೋಗುತ್ತಾರೆ. ಹಾಲು ಮತ್ತು ತುಪ್ಪವನ್ನು ಕಾಟಕ್ಕೆ ಸುರಿದು, ಹೊತ್ತಿ ಉರಿಯದೇ ಉಳಿದ ಸೌದೆ ಮತ್ತು ಭಸ್ಮವಾಗದೆ ಉಳಿದಿರಬಹುದಾದ ಶವದ ಭಾಗಗಳನ್ನು ಒಟ್ಟು ಸೇರಿಸಿ ಅದಕ್ಕೆ ಪುನಃ ಬೆಂಕಿ ಕೊಡುತ್ತಾರೆ. ಮತ್ತೆ ಸ್ನಾನ ಮಾಡಿ ತಮ್ಮ ಮನೆಗಳಿಗೆ ತೆರಳುತ್ತಾರೆ. ಇದಕ್ಕೆ 'ಕೊಳ್ಳಿ ಕೂಡುವುದು' ಎಂಬ ಹೆಸರಿದೆ.

**ಮೂರರ ಸುದ್ದ-ಬೂದಿ ಮುಚ್ಚುವುದು**

ಮೃತನು ತೀರಿಕೊಂಡ ಮೂರನೇ ದಿವಸದಂದು ಮೃತನ ಮನೆಗೆ ಕ್ಷೌರಿಕ ಬರುತ್ತಾನೆ. ಆತನು ಮೃತನ ಕುಟುಂಬದವರ ತಲೆಯನ್ನು ಮತ್ತು ಮೀಸೆಯನ್ನು ನುಣ್ಣಗೆ ಬೋಳಿಸುತ್ತಾನೆ. ಇದನ್ನು 'ತಲೆ ಪಳಿ ತೆಗೆದು' ಎನ್ನುತ್ತಾರೆ. ಆ ದಿವಸ ಮಡಿವಾಳನೂ ಬರುತ್ತಾನೆ. ಮಡಿವಾಳನು ಎಳನೀರನ್ನು ಚಿಮುಕಿಸಿ 'ಸುಡ್ಮಳಿ'ಯನ್ನು ಶುದ್ಧಗೊಳಿಸುತ್ತಾನೆ. ಅನಂತರ ಆತ ಶವವನ್ನು ಸುಟ್ಟ ಸ್ಥಳದಲ್ಲಿರುವ ಬೂದಿಯನ್ನು ತಲೆಯ ಭಾಗ, ನಡುವಿನ ಭಾಗ ಮತ್ತು ಕಾಲಿನ ಭಾಗ ಎಂದು ಮೂರು ಭಾಗ ಮಾಡುತ್ತಾನೆ. ಕಾಟದ ನಡುವೆ ಸುಮಾರು ಎರಡು ಅಡಿ ಹೊಂಡ ತೆಗೆದು, ಅದರಲ್ಲಿ ಮೊದಲು ಕಾಲಿನ ಕಡೆಯ ಬೂದಿಯನ್ನೂ, ಅನಂತರ ನಡುವಿನ ಬೂದಿಯನ್ನೂ, ಕೊನೆಗೆ ತಲೆಯ ಭಾಗದ ಬೂದಿಯನ್ನೂ ತುಂಬುತ್ತಾನೆ. ಉಳಿದ ಬೂದಿಯನ್ನು ಹೊಂಡದ ಮೇಲ್ಬದಿಯಲ್ಲಿ ಮಡಕೆಯಾಕಾರದಲ್ಲಿ ಮೆತ್ತುತ್ತಾನೆ. ಈಗ ಈ ಜಾಪನ್ನು 'ದೂಪೆ' ಎಂದು ಕರೆಯುತ್ತಾರೆ. ದೂಪೆಯ ದಕ್ಷಿಣ ಭಾಗದಲ್ಲಿ ಒಂದೆರಡು ಪುಟ್ಟ ಮೆಟ್ಟಿಲುಗಳನ್ನು ಮಾಡುತ್ತಾನೆ. ಕೊನೆಯಲ್ಲಿ ದೂಪೆಯ ಸುತ್ತ ಸರಳಿಗಿಡದ ಒಂದೆರಡು ಗಿಡಗಳನ್ನು ಅಥವಾ ನೆಕ್ಕಿ ಮರದ ಗಿಡಗಳನ್ನು ನೆಟ್ಟು ಮಡಿವಾಳ ಹಿಂದಿರುಗುತ್ತಾನೆ. ಜನರೂ ಹಿಂದಿರುಗುತ್ತಾರೆ. ಇದನ್ನು 'ಮೂರರ ಸುದ್ದ'ಎಂದು ಕರೆಯುತ್ತಾರೆ.

**ಒಂಬತ್ತರ ಬೊಜ್ಜ**

ವ್ಯಕ್ತಿಯು ಮೃತಪಟ್ಟ ಒಂಬತ್ತನೇ ದಿನದಂದು ಸಾಮಾನ್ಯವಾಗಿ ಬೊಜ್ಜ ಆಚರಿಸುತ್ತಾರೆ. ಅಂತ್ಯ ಸಂಸ್ಕಾರದ ವಿಧಿಗಳಲ್ಲಿ ಇದುವೇ ಅತ್ಯಂತ ಮುಖ್ಯವಾದ ಆಚರಣೆಯಾಗಿದೆ.

ಬೊಜ್ಜದ ಹಿಂದಿನ ದಿನ ರಾತ್ರಿ ಅಂದರೆ ಸಾವಿನ ಎಂಟನೇ ದಿವಸದಂದು ರಾತ್ರಿ 'ಮಿಂಚಿಲೂಟ' ಎಂಬ ಕಾರ್ಯಕ್ರಮವಿದೆ. ಆ ದಿವಸ ಕುಟುಂಬದವರೆಲ್ಲ ಸಹಭೋಜನವೊಂದರಲ್ಲಿ ಭಾಗವಹಿಸಿ, 'ನೀರ್ ನೆರಳಿಗೆ ಇಸುದು' ಎಂಬ ಕಾರ್ಯಕ್ರಮವೊಂದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ.

*(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುತ್ತದೆ)*

ಆಸಕ್ತಿಯಿಂದ ಪ್ರಗತಿ, ಆಲಸ್ಯದಿಂದ ವಿಗತಿ.

# ಕೊಡಗು ಸಂಗಾತಿ ಲಾಟರಿ (ಅದೃಷ್ಟ) ಯೋಜನೆ ಮತ್ತು ಫಲಿತಾಂಶ

9-4-1997ರ ಯುಗಾದಿಯ ಶುಭದಿನದಂದು ಸಂಗಾತಿಯು ಜನಾಂಗದ ನಾಡಿನ ಸಂಘಟನೆ, ಐಕ್ಯತೆ, ಏಕತೆಯನ್ನು ಬಯಸಿ ಜನನವಾಗಿ 8-4-2001 ಕ್ಕೆ ತನ್ನ ನಾಲ್ಕನೇ ವರ್ಷವನ್ನು ಮುಗಿಸಿ ಐದನೇ ವರ್ಷಕ್ಕೆ ಪಾದಾರ್ಪಣೆ ಮಾಡುವ ಈ ಶುಭ ಸಂದರ್ಭದಲ್ಲಿ ಸಂಗಾತಿ ಚಂದದಾರರಿಗೂ ಮತ್ತು ಅಜೀವ ಸದಸ್ಯರಿಗಾಗಿ ಲಾಟರಿ ಯೋಜನೆಯನ್ನು ಹಮ್ಮಿಕೊಂಡಿತ್ತು. 31-12-2001ರ ತನಕ ನವೀಕರಿಸಿದವರ ಹೆಸರಿನಲ್ಲಿ ಲಾಟರಿಯನ್ನು ಎತ್ತಲಾಗಿ, ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ತಮ್ಮ ಅದೃಷ್ಟ ಪರೀಕ್ಷೆಯ ಫಲಿತಾಂಶಕ್ಕೆ ಪೂರ್ಣವಿರಾಮ ನೀಡಲಾಯಿತು.

ದಿನಾಂಕ 8-4-2001ರ ಭಾನುವಾರ 11-20 ರ ಸಮಯಕ್ಕೆ ಸರಿಯಾಗಿ ಲಾಟರಿಯನ್ನು ಮುಖ್ಯ ಅತಿಥಿಯಾಗಿ ಆಗಮಿಸಿದ ಸೂದನ ಪೊನ್ನಪ್ಪ ಮೋಹನ ಮತ್ತು ಗೀತಾಂಜಲಿ ದಂಪತಿಗಳು ಪ್ರಥಮ ಮತ್ತು ದ್ವಿತೀಯ ಬಹುಮಾನದ ಚೀಟಿಯನ್ನು ಎತ್ತಿದರು. ಸೂದನ ಮೋಹನ ದಂಪತಿಗಳು ಈ ಹಿಂದೆ ಅಂದರೆ 12-6-1997ರಲ್ಲಿ ಪ್ರಥಮ ಬಾರಿಗೆ ಸಂಗಾತಿ ಅಭಿವೃದ್ಧಿ ಬಯಸಿ ಜೀವಾವಧಿ ನೀಡಿದ ದಂಪತಿ ಮಹಾಶಯರವರು.

ಮೂರನೇ ಬಹುಮಾನವನ್ನು ಪೇರಿಯನ ಉತ್ತಯ್ಯ ನವರು ಎತ್ತಿದರೆ 4ನೇ ಬಹುಮಾನವನ್ನು ಗುಡ್ಡೇರ ಕುಮಾರಪ್ಪನವರು, 5ನೇ ಬಹುಮಾನವನ್ನು ಪಟ್ಟಡ ಜಯರಾಮ್‌ನವರು, 6ನೇ ಬಹುಮಾನವನ್ನು ಕುಂಟುಪುಣಿ ರಾಮಕೃಷ್ಣನವರು, 7ನೇ ಬಹುಮಾನವನ್ನು ಮಂಜಾಪುರ ಧರಣಿ ಗಣಪತಿಯವರು, 8ನೇ ಬಹುಮಾನವನ್ನು ಹುದೇರಿ ಟೀನಾ ಸೋಮಣ್ಣನವರು, 9ನೇ ಬಹುಮಾನವನ್ನು ಪೋರೆಯನ ಬೇಬಿ ಚಾಂದಿನಿಯು ಮತ್ತು 10ನೇ ಹಾಗೂ ಕೊನೆಯ ಬಹುಮಾನವನ್ನು ಕೊಡಗು ಸಂಗಾತಿಯ ಸಂಪಾದಕೀಯರಾದ ಶ್ರೀಮತಿ ಪಟ್ಟಡ ಶೀಲಾಮಣಿ ಪ್ರಭಾಕರನವರು ತೆಗೆದರು.

ಕೊಡಗಿನ ಪದ್ಧತಿಯಂತೆ ಕುಲದೇವ್ರು ವೆಂಕಟ ರಮಣ, ಶೃಂಗೇರಿ ತಾಯಿ ಹಾಗೂ ಕಾವೇರಿಯಮ್ಮಳನ್ನು ನೆನೆದು, ವಿಘ್ನೇಶ್ವರನಿಗೆ ಅಕ್ಕಿ ಕಾಳು ಹಾಕುವ ಮೂಲಕ ಒಕ್ಕಣೆ ಹೇಳಿ ಪ್ರಾರ್ಥಿಸಿ ಶುಭ ಕೋರಿ ಲಾಟರಿ ಚೀಟಿಯನ್ನು ಗೌರವ ಸಂಪಾದಕರಾದ ಪಟ್ಟಡ ಪ್ರಭಾಕರನವರು ಸಂಪಾದಕೀಯವರಿಗೆ ನೀಡಿದರು.

ಒಂದನೇ ಬಹುಮಾನವನ್ನು ಪುತ್ತೂರಿನ ಯನ್. ಡಿ. ಕೃಷ್ಣನವರು ಪಡೆದರು. ಎರಡನೇ ಬಹುಮಾನವನ್ನು ಪಡಿಕಲ್. ಪಿ. ಚಿಣ್ಣಪ್ಪನವರು, ಮೂರನೇ ಬಹುಮಾನವನ್ನು ಪಿ.ಯಸ್. ಮಾದಪ್ಪನವರು, 4ನೇ ಬಹುಮಾನವನ್ನು ಪಾಣತ್ತಲೆ ಬಿದ್ದಪ್ಪ ನವರು, 5ನೇ ಬಹುಮಾನವನ್ನು ಚೆರಿಯಮನೆ ಶಶಿದಧರ್‌ನವರು, 6ನೇ ಬಹುಮಾನವನ್ನು ಬಿದ್ರುಪಣೆ ನಾಣಯ್ಯನವರು, 7ನೇ ಬಹುಮಾನವನ್ನು ಕೊಂಬನ ಪಿ. ಪ್ರವೀಣ್ ನವರು, 8ನೇ ಬಹುಮಾನವನ್ನು ಕಲ್ಲುಮುಟ್ಲು ಪಿ. ಬೋಪಯ್ಯನವರು, 9ನೇ ಬಹುಮಾನವನ್ನು ಶ್ರೀಮತಿ ಬೊಟ್ಟಂಗಡ ಜಾಜಿ ಮೇದಪ್ಪನವರು 10ನೇ ಬಹುಮಾನವನ್ನು ಮಾಲ್ದಾರೆಯ ಸೂದನ ಯತೀಶ್‌ನವರು ಪಡೆದುಕೊಂಡರು.

ಮೈಸೂರಿನ ಹಿನಕಲ್ಲ್‌ನಲ್ಲಿರುವ ನೂತನ ಸಂಗಾತಿ ಕಛೇರಿಯಲ್ಲಿ ನಡೆದ ಈ ಸುಂದರ ಸರಳ ಸಮಾರಂಭದಲ್ಲಿ ಮುಖ್ಯ ಅತಿಥಿ ಸೂದನ ಮೋಹನ್‌ರವರು ಪತ್ರಿಕೆ ನಿಮಿತ್ತ ಮತ್ತು ಲಾಟರಿ ಬಗ್ಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು. ಕೊನೆಯದಾಗಿ ವಂದನಾರ್ಪಣೆಯೊಂದಿಗೆ ಸರಳ ಸಮಾರಂಭ ಮುಕ್ತಾಯವಾಯಿತು. ನೆರೆದ ಹಿತೈಷಿಗಳೆಲ್ಲರಿಗೂ ಕಾಫಿ, ತಿಂಡಿಯ ವ್ಯವಸ್ಥೆ ಇತ್ತು.

— ಮಂಜ್ಞಪುರ ಧರಣಿ ಗಣಪತಿ, ಮೈಸೂರು.

---

## ಕವನ : ಪ್ರೌಢ ಕೋಗಿಲೆ

ಹಾಡುತಿರುವ ಪ್ರೌಢ ಕೋಗಿಲೆ
ಹೇಳು ನಿನ್ನ ತವರು ಮನೆ ಎಲ್ಲಿದೆ
ನಿನಗಿಲ್ಲವೇ ನನ್ನಂತೆ ತೌರಾಸೆಯು
ನಿನಗಿಲ್ಲವೇ ನನ್ನಂತೆ ಬಂಧು ಬಳಗವು
|| ಹಾಡುತಿರುವ ||

ಚೈತ್ರ ಮಾಸಕೆ ಸ್ವಾಗತ ಬಯಸಿ
ಪಂಚಮ ಸ್ವರಕೆ ಜೀವ ತುಂಬಿ
ಹೇಳುತ್ತಿರುವೆ ಏನು ಮುಗಿಲ ಮುಟ್ಟಿ
ನನ್ನೆದೆಯ ಗೂಡಿನ ಕದವ ತಟ್ಟಿ
|| ಹಾಡುತಿರುವ ||

ಯೌವ್ವನ ಬಂದಾಗ ನಿನಗಾರು ಸರಿಸಾಟಿ
ಮನ್ಮಥನ ಬಾಣಕೂಡ ಬೇಕಿಲ್ಲವೆ
ವಸಂತ ಋತುವಿಗೂ ಹರುಷದ ಹೊನಲು
ಬೇಸಿಗೆಯ ಬಿಸಿಲಲ್ಲೂ ತಂಪನೆರೆದು
|| ಹಾಡುತಿರುವ ||

ಹಸಿವು ಬಾಯಾರಿಕೆಗಳನೆಲ್ಲಾ ಮರೆತು
ಮನೆ ಮಠಾದಿಗಳ ತೊರೆದು ಬಂದು
ಹಸಿರೆಲೆಯ ಮರೆಯಲ್ಲಿ ಅವಿತು ಕುಳಿತು
ಕಾಯುತ್ತಿರುವೆ ಯಾರ ನೀನು ಒಂಟಿಯಾಗಿ
|| ಹಾಡುತಿರುವ ||

— ಬಿಟ್ಟೀರ ಚೋಂದಮ್ಮ ಶಂಭು, ಬೆಂಗಳೂರು

---

ವಾದಿಯ ಕೂಡ ವಾದ ಸಲ್ಲ, ಕುಂಟನ ಕೂಡ ದಾರಿ ಸಲ್ಲ.

## ವಾಂಟೆಡ್ ಮಿಸ್ಟರ್ ರಾಜು : [ನಮ್ಮ ರಾಜು ಮಂಜ ಕಥೆ]

ಲೇಖನ : ಶಂಕರನ ಬಸಪ್ಪ

**ಧಾರಾವಾಹಿ - 31**

ಇಲ್ಲಿ ತಾಳೊತ್ತುಮ್ಮಾನಿ ಕೆಳಮನೆ ಬೋಪಜ್ಜ ಬೆಳಿಗ್ಗೆ ಆರುಗಂಟೆಗೇ ಹಾಸಿಗೆಂದ ಎದ್ದ್ ಕುದ್ದಿತ್. ಅವುಕೆ ತಲೆತುಂಬಾ ಕಿರಿ ಕಿರಿ ಶರೀರಕ್ಕೆ ತುಂಬಾ ಸುಸ್ತ್. ಮನ್ಸ್‌ಗೆ ವ್ಯಥೆ ಜಾಸ್ತಿ ಆಗಿಹೋಗಿತ್ತ್. ಮಗಳ ಮದ್ವೆದಿನ ಹತ್ರ ಬಂದೇ ಬುಟ್ಟುಟು. ಇನ್ನ್ ಬೇಕಾದಷ್ಟ್ ಕೆಲ್ಸಗ ಬಾಕಿಉಟ್ಟು ಇನ್ನ್ ಬರೀ 4ದಿನನೇ ಬಾಕಿ ಇರ್ದು. ಮನೆಂದ ಓಡಿಹೋದ ಮಂಜ ರಾಜುದು ಇನ್ನೂ ಪತ್ತನೇ ಇಲ್ಲೆಲ್ಲಾ? ಇಂತಹ ಕಷ್ಟದ ಕಾರ್‌ಬಾರ್‌ನ ಕೈಲಾಗದ ನಾನ್ ಹೆಂಗೆ ನಡ್ಸುದೂ? ಇನ್ನೂ ಎಷ್ಟೊಂದ್ ಕಡೆ ನಾನ್ ಓಡಾಡಿಕಂಡ್ ಕೆಲ್ಸಗಳ ಮುಗ್ಸಕ್ಕೂ ಸುತ್ತ ಮುತ್ತ ದೂರದ ನೆಂಟರಿಷ್ಟರಿಗೆಲ್ಲಾ ಮದ್ವೆ ಕಾಗದನ ಹಂಚಿ ಆತ್‌ಲ್ಲೆ. ಮದ್ವೆಗೆ ಬೇಕಾದ ಇನ್ನೂ ತುಂಬಾ ಸಾಮಾನುಗಳ ಮನೆಗೆ ತಕಂಡ್ ಬಾಕೆ ಆತ್. ಮದ್ವೆ ಚಪ್ಪರ ಹಾಕ್ಸಿಕೆ ಆತ್ಲೆ ನಾನೊಬ್ಬನೇ ಹೆಂಗೆ ಮಾಡ್ಲೂ. ಈ ಮದ್ವೆ ಕೆಲ್ಸನ ಮುಗ್ಸುದೊರೊಳಗೆ ನಾನ್ ಸತ್ತ್ ಹೋನೆ ಕಂಡದೆ ತಾ ಬೆಳಿಗ್ಗೆನೇ ಎದ್ದ್ ತಲೆ ಬಿಸಿ ಮಾಡಿಕಂಡ್ ಎಲೆ ಅಡಿಕೆನ ಕುಟ್ಟುತಿದ್ದೊ.

ಅಲ್ಲಾ ಆ ಗಂಡ್‌ನ ಕಡೆವು ಮೊನ್ನೆ ದಿನ ಬಂದಿದ್ದವು ಎಲ್ಲಾ ಮಾತಾಡಿ ಆದ ಮೇಲೆ ಅವರ ಕಡೆಯ ಸ್ವಲ್ಪ ಮದ್ವೆ ಕಾಗದನೂ ನನ್ನ ಕೈಗೇ ಹಿಡ್ಸಿ ಅದರ ಹಂಚಿಕೆ ಹೇಳಿ ಹೋಗಿ ಬುಟ್ಟೊಲ್ಲಾ? ಅವು ಎಂಥಾ ಕೆಟ್ಟಜನ? ಇವು ಸ್ವಲ್ಪಾನೂ ನಂಗಿರುವ ಕಷ್ಟನ ಅರ್ಥ ಮಾಡಿಕಂಬಕೆ ಆತ್‌ಲ್ಲಾ? ಇವು ಕೇಳ್ದ ವರದಕ್ಷಿಣೆ ಹಣಕೋಸ್ಕರ ತಾನೆ ನನ್ನ ಚಿನ್ನದಂತಹ ಮಂಜ ಮನೆಬುಟ್ಟ್ ಓಡಿಹೋದ್. ಈ ಜನಿಕೆ ಮದ್ವೆ ಆದುತ್ತೇಳಿರೆ ಅದೂ ಒಂದ್ ಸಂಪಾದನೆ ಮಾಡಿಕಂಬ ದಾರಿ ಇದ್ದಂಗೆ ಕಂಡದೆ. ಇವುಕೆಲ್ಲಾ ಬಂಧು ಬಳಗಗತ್ತೇಳುವ ಪ್ರೀತಿ ಇಲ್ಲೆ. ಇಷ್ಟೆಲ್ಲಾ ನನ್ನ ಕಷ್ಟನ ನೋಡಿಕೂಡಾ ನನ್ನ ಮಂಜ ಓಡಿಹೋದ ಸಂಗತಿನ ತಿಳ್ದುಕೂಡಾ ಒಂದ್ ಸಮಧಾನಕ್ಕಾದ್ರೂ ಒಳ್ಳೆಮಾತ್‌ನ ಆಡ್ತ್‌ಲೆ. ತಾ ಆ ನೆಂಟ್ರ್‌ಗಳ ಬೊಯ್ದಿಕಂಡ್ ಎದ್ದ್ ಗುಡ್ಡದ ಮನೆಗೆ ಹೋದೊ. ಅಲ್ಲಿ ಬಟ್ಟೆ ಬಿಚ್ಚಿ ಎರಡ್ ಬಂಡಿಗೆ ತಣ್ಣೀರ್‌ನ ಮೈಗೆ ಸುರ್ಕಂಡ್ ಸ್ನಾನ ಮಾಡಿಕಂಡ್ ಒದ್ದೆ ಬಟ್ಟೆಲೇ ಮನೆ ಒಳಗೆ ಬಂದೊ. ಮಗಳು ಶೋಭ ಬೇಗ ಎದ್ದ್ ಮನೆ ಕಸನೆಲ್ಲಾ ಗುಡ್ಸಿ ಮನೆಸುತ್ತೆಲ್ಲಾ ಸೆಗಣಿ ನೀರ್‌ನ ತಕ್ಕಳಿಸಿ ಮನೆನ ಸುದ್ದಮಾಡ್ತ್. ಬಾಡೆಗೆ ಬಂದ ಬೋಪಜ್ಜ ನೆಲ್ಲಕ್ಕಿಲಿದ್ದ ದೇವರ ದೀಪನ ಹೊತ್ತಿಸಿ ಮಡಿಗಿ ಆಮೇಲೆ ಕೈಮುಕ್ಕಂಡ್ ಸ್ವಾಮಿ ನಮ್ಮ ಕೊಡಿಬೀರ, ಗುರುಕಾರಣವನೇ ನಂದ್ ಏನಾದ್ರೂ ತಪ್ಪಿದ್ರೆ ಕ್ಷಮಿಸಿಕಂಡ್ ನಮ್ಮ ಓಡಿಹೋದ ಮಂಜ ರಾಜು ಇನ್ನ್ ಎರಡ್ ದಿನದ ಒಳಗೆ ಅಂವ ಎಲ್ಲಿದ್ರೂ, ಹೆಂಗಿದ್ರೂ ನನ್ನ ಮನೆಗೆ ಬಂದ್ ಸೇರ್ವಂಗೆ ಅಂವಂಗೆ ಬುದ್ಧಿಕೊಟ್ಟ್ ಈ ಗುರುನ ಮನೆಗೆ ತರ್ಸುವಭಾರ ನಮ್ಮ ಗುರುಕಾರಣವಂಗೇ ಸೇರ್ದ್. ಮಗಳ ಮದ್ವೆಗೆ ಮೊದ್ಲ್ ನನ್ನ ಮಂಜ ಮನೆಗೆ ಬಂದ್ ಸೇರಿರೆ ನಾನ್ ನಮ್ಮ ಬೀರಂಗೇ ನಾಲ್ಕ್‌ಕಾಲ್‌ನ ಬೇಟೆನ ಮದ್ವೆಕಳ್ದ್‌ವಾರದ ಒಳಗೆ ಕಲಾಯಕೊಡಿಕೆ ಕೊಡ್ಸಿಕಂಡನೆ ತಾ ದೇವರ ಮುಂದೆ ಬೇಡಿ ಕಂಡ್ ಅಕ್ಕಿಕಾಳು ಹಾಕಿ ಹರಕೆ ಹೊತ್ತ್‌ಕಂಡತ್.

ಅಷ್ಟೊತ್ತಿಗೆ ಕುರ್ಚಿಕೆಳಗೆ ಮಲಗಿ ಕಂಡಿದ್ದ ರೋಭ ನಾಯಿ ಎದ್ದ್‌ಬಂದ್ ಅಜ್ಜನ ಕಾಲ್‌ನ ಮೂಸಿಕಂಡ್ ಕುಯ್ ಕುಯ್ ತ್ತೇಳಿಕಂಡ್ ಕಾಲ್‌ನ ನೆಕ್ಕಿಕೆ ಸುರುಮಾಡ್ತ್. ಆಗ ಅವ್ವ ಪೂವಮ್ಮ ಈ ನಾಯಿ ಆಡುದರ ನೋಡಿಕಂಡ್ ಹೇಳ್ದೊ. ಏಯ್ ರೋಭ ಅಣ್ಣ ರಾಜ ಯಾಗ ಬಂದದೆತಾ ಗೊತ್ತುಟಾ? ತಾ ಹೇಳಿಕಾಕನ ಆ ನಾಯಿ ಖುಷೀಲಿ ಅವ್ವನ ಮೈ ಮೇಲೆ ನಗ್ದ್ ನಗ್ದ್ ಹತ್ತಿಕೆ ಹಾರಾಡಿಕಂಡ್ ಅವರ ಮುಖನ ದವುಡೆನ ನೆಕ್ಕಿ ಸಮಾಧಾನ ಮಾಡಿಕೆ ಶುರುಮಾಡ್ತ್. ಸಾಮಾನ್ಯವಾಗಿ ಈ ನಾಯಿಗಳಿಗೆ ಮುಂದೆ ಆಗುವಂತಹ ಭವಿಷ್ಯಗಳ ಅರಿವು ಆಗ್ತಾ ಇದ್ದದೆಗಡ. ಹಂಗಾಗಿ ಅವು ಕೆಲವು ಟೈಂಲಿ ಒಂದ್‌ತರ ವಿಚಿತ್ರವಾಗಿ ಆಡುತಾ ನಮಿಗೆ ಹಲವಾರು ತರದ ಸೂಚನೆಗಳ ಕೊಡ್ತಿದ್ದವೆ. ಆದ್ರೆ ಅದರ ತಿಳ್ಕಂಬಂತಹ ಸಾಮರ್ಥ್ಯ ನಮ್ಮ ಜನರ ಬುದ್ದಿಗೆ ಬೇಕಷ್ಟೆ.

ಇನ್ನ್ ಹಿಂಗೇ ಕುದ್ದರೆ ಆಕಿಲ್ಲೆತ್ತೇಳಿ ಬೋಪಜ್ಜ ಮಂಜನ ಒಂದ್ ಒಳ್ಳೆ ದೊಡ್ಡ ಸೈಜ್ ಫೋಟೋನ ತೆಗ್ದ್‌ಕೊಡು ಶೋಭತ ಮಗಳ ಹತ್ರ ಕೇಳಿ ಒಂದ್ ಒಳ್ಳ ಸಿಂಗಲ್ ಪೋಟೋನ ತಕಂಡ್ ಜೋಬೊಳಗೆ ಮಡಿಗಿಕಂಡೊ. ನಾನ್ ಸ್ವಲ್ಪ ಮಡಿಕೇರಿಗೆ ಹೋಗಿ ಬನ್ನೆತಾ ಹೇಳಿಕಂಡ್ ಬೆಳಿಗ್ಗೆನೇ ಮಡಿಕೇರಿಗೆ ಬಸ್ ಹತ್ತಿದೊ. ಅಲ್ಲೇ ಬಸ್ ಸ್ಟಾಂಡ್ ಹತ್ರ ಇದ್ದ ಮೈಸೂರು ಮಿತ್ರ ದಿನ ಪತ್ರಿಕೆಯ ಆಫೀಶ್‌ನ ಒಳಗೆ ಹೋದ ಬೋಪಜ್ಜ ಈ ಮಂಜನ ಪೋಟೋನ ಕೊಟ್ಟ್ ನೋಡಣ್ಣಾ ಇದ್ ನನ್ನ ಮಂಜನ ಪೋಟೋ. ಇಂವ ಎಲ್ಲೋ ದೂರ ಮನೆಬುಟ್ಟು ಹೋಗುಟ್ಟು. ಇಂವನ ತಂಗೆನ ಮದ್ವೆ ನಾಡ್‌ದ್ ತಾ| 25ಕ್ಕೆ ಗುರುವಾರ ಉಟ್ಟು. ಆದ್ರಂದ ಇಂವಂಗೆ ಏನ್ ಸಿಟ್ಟ್ ಇದ್ರೂ ಅದರ ಮರ್ತ್ ಹಣ ಸಂಪಾದನೆ ಮಾಡಿಕೆ ಆತ್‌ಲ್ಲೇತ್ತೇಳಿರೆ ಅದರ ಚಿಂತೆನೂ ಬುಟ್ಟ್ ತಂಗೆನ ಮದ್ವೆಒಳಗೆ ಬಂದ್ ಮನೆಗೆ ಸೇರೋಕು. ನೀನ್ ಮನೆ ಬುಟ್ಟ್ ಹೋದಮೇಲೆ ನಿನ್ನ ತಂಗೆ, ಅಪ್ಪ, ಅವ್ವಂದಿರ್

**ಕಳ್ದ ಸಂಚಿಕೆಂದ ......**

ಅಭಯಹಸ್ತ ಆಸ್ಪತ್ರೆಯ ಸಾಹುಕಾರನ ಮಂಕ್‌ಬುದ್ದಿನ ಬುಡ್ಸಿ ಅಂವನ ಕೈಯಿಂದ ವೃದ್ಧರ ಸೇವಾಶ್ರಮಕ್ಕೆ ಒಂದ್ ಕೋಟಿ ರೂಪಾಯಿನ ದಾನಕೊಡ್ಸಿದೆ. ಎದುರುಗಡೆಯ ಗಿರ್ವಿ ಅಂಗಡಿಯ ಸುರರಾಂನ ಅನ್ಯಾಯನ ಬಡ್ಡಿ ವ್ಯವಹಾರನ ನೋಡಿ Mr.ರಾಜು ಸಹಿಸಿಕಂಬೆಕೆ ಆಗದೆ ಅವಂಗೆ ನಕಲಿ ಚಿನ್ನದ ಆಭರಣಗಳ ಹಿಡ್ಸಿ 25,000ರೂಪಾಯಿನ ಹೊಡ್ಕಂಡದೆ. ........

ಮುಂದಕೆ ........

ಅನ್ನನೀರ್ ಬುಟ್ಟು ಬೇಜಾರ್‌ಲಿ ಕುದ್ದೊಳೊ ತಾ ಪ್ರಿಂಟ್ ಹಾಕಿಸಿ, ಅಲ್ಲದೆ ಈ ಪೋಟೋಲಿ ಇರುವ ಈ ಮನ್ಸನ ಪತ್ತೆ ಹಚ್ಚಿ ಕೊಟ್ಟವಕೆ ಸೂಕ್ತ ಬಹುಮಾನನ ಕೊಟ್ಟವೆ ತಾ ಹಾಕಿ ಈ ಕೆಳಗಿನ ಅಡ್ರಸ್ಸಿಗೆ ತಿಳ್ಸಲಿ ತಾ ಬೊಪಜ್ಜ ತಮ್ಮ ಮನೆ ಅಡ್ರಸ್‌ನ ಕೊಟ್ಟತ್.

ಅಣ್ಣಾ ಇದರ ನಾಳೆ ಬೆಳಿಗ್ಗೆ ನಿಮ್ಮ ಪೇಪರ್‌ಲಿ ಪ್ರಿಂಟ್ ಆಗಿ ಬರ್‍ವಂಗೆ ಮಾಡೋಕು. ಇದ್ ತುಂಬಾ ಅರ್ಜೆಂಟ್‌ನ ವಿಷ್ಯದ್ ತಾ ಹೇಳಿ ಅವುಕೆ ಎಡ್ವಟೈಸ್‌ನ ಚಾರ್ಜ್‌ನ ಕೊಟ್ಟೊ.

ತಾರೀಕು 20-2-2000 ಆಂದೋಲನ ದಿನಪತ್ರಿಕೆ. ಇದ್ ಬೆಳಿಗ್ಗೆ 7ಗಂಟೆ ಒಳಗೆಲ್ಲಾ ಮೈಸೂರು, ಕೊಳ್ಳೆಗಾಲ, ಕೊಡಗು, ಚಾಮರಾಜನಗರ ಮಂಡ್ಯ ಹಿಂಗೆ ಸಾವಿರಾರು ಮನೆಗಳಿಗೆ ಪೇಪರ್ ಹಾಕುವ ಹುಡುಗರು ಸೈಕಲ್ಲು ಮೇಲೆ ಸುತ್ತಾಡಿಕಂಡ್ ಮನೆ ಮನೆಗಳಿಗೂ ಪೇಪರ್ಸ್‌ಗಳ ಹಂಚಿ ಬುಟ್ಟಿದ್ದವೆ. ಅಂದ್‌ನ ಆಂದೋಲನ ದಿನಪತ್ರಿಕೆಯ ಮುಖಪುಟದ ಕೆಳಗಡೆ ಒಂದ್ ಚೌಕಾಕಾರದ ಕಲಂ ಒಳಗೆ Mr.ರಾಜುನ ಒಳ್ಳೆ ಲಾಯ್ಕಕಾದ ಪೋಟೋ ಪ್ರಿಂಟ್ ಆಗಿತ್ತ್.

**Wanted MR. Raju**

ನನ್ನ ರಾಜುಮಂಜ ನೀನ್ ಎಲ್ಲಿ ಇದ್ರೂ ಮನ್ಸಿಗೆ ಬೇಜಾರು ಮಾಡಿಕಣದೆ ನನ್ನ ತಪ್ಪ್‌ನ ಕ್ಷಮಿಸಿ ನೀನ್ ಕೂಡ್ಲೆ ಮನೆಗೆ ಹೊರಟ್ ಬರೋಕು. ನಿಂಗಾಗಿ ನಿನ್ನ ಅಪ್ಪ ಅವ್ವ, ತಂಗೆ ಶೋಭ ಅನ್ನ ನೀರ್‌ನ ಬುಟ್ಟು ಕುದ್ದೊಳೊ. ತಂಗೆ ಶೋಭಳ ಮದ್ವೆ ಇದೆ ತಿಂಗ 25 ಬುಧುವಾರ ನಡ್ದದೆ ನಿನ್ನ ಪ್ರೀತಿಯ ತಂಗೆ ಗೊಸ್ಕರನಾದ್ರೂ ನೀನ್ ಬಂದ್ ಅವಳನ ಸಂತೋಷಲಿ ಮದ್ವೆಮಾಡಿ ಕಳ್ಸಿಕೊಡೋಕುತ್ತೆಳಿ ನಿನ್ನ ಅಪ್ಪನಾದ ನಾನ್ ಕೇಳಿಕಂಡನೆ. ಈ ಪೋಟೋದಲ್ಲಿರುವ ವ್ಯಕ್ತಿಯ ಸುಳಿವು ಸಿಕ್ಕಿದವ್ರು ಈ ಕೆಳಗಿನ ಅಡ್ರಸಿಗೆ ತಿಳಿಸಿರೆ ಅವುಕೆ ಸೂಕ್ತ ಬಹುಮಾನನ ಕೊಡಲಾಗುವುದು ತಾ ಬೇರೇ ಒಂದ್ ಲೈನ್‌ಲಿ ಬರ್ದಿದ್ದೊ.

ಛೇ! ಎಂಥಾ ಪರಿಸ್ಥಿತಿ ಬಂದ್ ಹೋಗುಟ್ಟು. ಈ ವಯಸ್ಸಾದ ಬೋಪಜ್ಜಂಗೆ ಓಡಿಹೋದ ಮಂಜನ ಹುಡುಕಿ ಸಾಕಾಗಿ ಹೋಗಿ ಈಗ ಕಂಗಾಲಾಗಿ ಹೋಗೋಳೊ. ಮಗಳ ಮದ್ವೆ ಬೇರೆ ಹತ್ರ ಬಂದ್ ಬುಟ್ಟುಟು. ಮಂಜ ಓಡಿಹೋಗಿದ್ದ ವ್ಯಶನನ ಇಷ್ಟ್‌ದಿನ ಬೋಪಜ್ಜ ಯಾರಿಗೂ ಹೇಳ್ದೆ ಗುಟ್ಟಾಗಿ ಇಟ್ಟ್‌ಕಂಡಿತ್. ಆದ್ರೆ ಈಗ ರಾಜು ಹೈದನ ಪೋಟೋನ ಪೇಪರ್‌ಲಿ ಪ್ರಿಂಟ್ ಹಾಕಿಸಿ ಮಗನ ಪತ್ತೆಗಾಗಿ ಹುಡುಕಾಡಿಸಿಕೆ ಇಡೀ ಈ ನಾಡ್‌ನ ಜನಿಕೆ ಗೊತ್ತಾಗುವಂಗೆ ಮಾಡಿ ಬುಟುಟಿಲ್ಲಾ? ಛೇ! ಛೇ! ಎಂಥಾ ನಾಚಿಕೆಗೇಡ್ ಕೆಲ್ಸನ ಈ ಬೋಪಜ್ಜ ಮಾಡಿಬುಡ್ತ್? ಆದ್ರೂ ಏನ್ ಮಾಡ್ದು ವಿಧಿ ಇಲ್ಲದೆ ಪಾಪ ಆ ಬೋಪಜ್ಜ ಹಿಂಗೆ ಮಾಡಿದ್ದೆ ಸರಿಕಂಡದೆ ತಾ ಬೋಪಜ್ಜನ ಊರವು ನೆಂಟ್ರ್‌ಗ ಬೇಜಾರ್ ಪಟ್ಟ್‌ಕಂಡೊ. ಬೋಪಜ್ಜನ ಕೆಲವು ಹತ್ರದ ಸಮ್ಮಂದಿಕರ್ ಇದರ ಬಗ್ಗೆ ನಿಜಸಂಗತಿನ ತಿಳ್ಕಂಡ್ ಆಮೇಲೆ ತಮ್ಮ ಕೈಲಾದ ಸಹಾಯನ ಮಾಡಿವೆ ತಾ ಬಂದ್ ವಿಚಾರಿಸಿ ಕಂಡ್ ಹೋದೊ.

ಆದ್ರೇ ಇದೆ ಪೇಪರ್‌ಲಿ Wanted Mr. Rajuತಾ ಬೋಲ್ಡ್ ಲೆಟರ್ ಹೆಡ್‌ಲಿ ಹಾಕಿ ಒಂದ್ ಚೌಕಾಕಾರದ ಕಲಂ ಒಳಗೆ Mr. Rajuನ ದೊಡ್ಡ ಒಂದ್ ಪೋಟೋನ ನೋಡ್ದ Mr. ರಾಜುನ ವೈರಿಜನ ಅಂವನ ತಂಗೆನ ಮದ್ವೆ ದಿನ ಮತ್ತೆ ಅಂವನ ಮನೆ ಅಡ್ರಸ್‌ನ ನೋಡ್ದ ಸಮಾಜ ದ್ರೋಹಿ ಜನಂಗ ಈ Mr. ರಾಜುನ ಕೈಯಿಂದ ಅವಮಾನಗೊಂಡ ಕೆಲವು ದಗಾಖೋರ ಜನಿಕೆ ಹಿಂಗೆ ತುಂಬಾ ಜನಿಕೆ ಅಲ್ಲದೆ ಪೋಲಿಸ್ ಪೇದೆಗಳಿಗೆ, ರೋಡ್ ರಾಬರ್ಸ್‌ಗಳಿಗೆ, ಬಾಂಬೆ ಗಾರ್ಮೆಂಟ್ಸ್‌ನ ಸಾಹುಕಾರಂಗೆ ಇವುಕೆಲ್ಲಾ Wanted Mr. Raju ನ ಪಬ್ಲಿಕೇಷನ್ ನೋಡಿ ಬಹಳ ಕುಷಿಆಗಿ ಹೋತ್. ಯಾಕೆತ್ತೇಳಿರೆ ಇವೆಲ್ಲಾ Mr.ರಾಜುನ ಬಹಳ ದಿನದಿಂದ ಹುಡುಕಾಡುತಿದ್ದೊ. ಆದ್ರೆ ಇಂವ ದಿನಕ್ಕೊಂದ್ ತರದ ವೇಷನ ಹಾಕಂಡ್ ತಿರುಗಾಡುತಿದ್ದದರಿಂದ ಆ ಜನಿಕೆಲ್ಲಾ Mr. ರಾಜುನ ನಿಜವಾದ ಗುರ್ತ್ ಇದೂವರ್ಗೂ ಸಿಕ್ಕಿತಿಲ್ಲೆ. ಆದ್ರೇ ಇಂದ್ ಈ 420 ಕಿಲಾಡಿ ಮೋಸಗಾರನ ಸುಲಬಲಿ ಹಿಡ್ದ್ ಹಾಕಿಕೆ ಅವನ ಅಪ್ಪನೇ ತನ್ನ ಸ್ವಂತ ಮಂಜನ ಚರಿತ್ರೆಗಳ ಏನೂ ಗೊತ್ತಿಲ್ಲದೆ Wanted Mr. Raju ತಾ ಅಂವನ ಭಾವ ಚಿತ್ರದ ಜೊತೆಗೆ ಪ್ರಿಂಟ್ ಹಾಕಿಸಿ ಅಂವ ಎಲ್ಲಿದ್ದರೂ ಹಾರಿಕಂಡ್ ಮನೆಗೆ ಬರ್‍ವ ದಿನನೂ ಅಡ್ರಾಸ್‌ನೂ ಕೊಟ್ಟ್ ಬುಟ್ಟೊಳೊ. ಈಗ ನಮ್ಮ ಕೆಲ್ಸ ಬಹಳ ಆರಾಂ ಆಗಿ ಹೋತ್. ನಮ್ಮ ಸೇಡ್‌ನ ತೀರ್‍ಸಿಕಂಬಕೆ ಒಳ್ಳೆ ಅವಕಾಶ ಈಗ ಅಂವ ಅಂದ್ ವೇಷ ಮರ್‍ಸಿಕಂಡ್ ನಮ್ಮನೆಲ್ಲಾ ಮೋಸ ಮಾಡ್ದಂಗೆ ಈಗ ನಾವು ಸನ ಬೇರೆ ತರದ ವೇಷನ ಹಾಕಂಡ್ ಹೋಗಿ ಮದ್ವೆ ಮನೆಲಿ ಅಂವನ ಮುಗ್ಸಿಕೆ ಸುಲಭ ಆಗಿಹೋತ್ ತಾ ಹೇಳಿಕಂಡ್ ಈ ಜನ ಆ ಪೇಪರ್‌ಲಿ ಇದ್ದ ಕಟೌಟ್‌ನ ಕತ್ತರಿಸಿಕಂಡ್ ಜೋಬೊಳಗೆ ಮಡಿಗಿಕಂಡೋ.

ಆದ್ರೇ ಇದೇ ಜಾಹಿರಾತ್ ಕಬನಿ ಹೊಳೆದಂಡೆ ಮೇಲಿದ್ದ ಕರ್ಕಳ್ಳಿ ಊರ್‌ನ ಶಾಂತಿ ಗೂಡೆನ ಕೈಗೆ ಸಿಕ್ಕಿಹೋತ್. ಅವಳು ಈ ಕಟೌಟ್ ಪೇಪರ್‌ನ ಬಹಳ ಆಶ್ಚರ್ಯದಿಂದ ಖುಷೀಲಿ ನೋಡಿ ಆ ಪೋಟೋಕೆ ಒಂದ್ ಕೊಟ್ ಆ ಮೇಲೆ ಜೋಪಾನ ಆಗಿ ಆ ಫ್ರೇಂ ನಷ್ಟೇ ಕಟ್ ಮಾಡಿ ಜೋಪಾನವಾಗಿ ಮಡ್‌ಚಿ ಅಡಂಗಿಸಿ ಮಡಗಿ ತನ್ನ ತಂಗೆಗಳಿಗೂ ಹೇಳದೆ ಮನ್ಸ್‌ಲೇ ಖುಷಿ ಪಟ್ಟ್‌ಕಂಡಿತ್.

ಆದ್ರೇ ಈ ಪೇಪರ್ ಪಬ್ಲಿಸಿಟಿಯ ವಿಚಾರ Mr. ರಾಜುಗೆ ಗೊತ್ತೇ ಆಗಿತ್ತ್‌ಲೆ. ಇವಂಗೆ ನೆನ್ನೆ ದಿನ ಮಾರ್‍ವಾಡಿ ಸುರರಾಂಗೆ ನಕಲಿ ಒಡವೆಗಳ ಕೊಟ್ಟ್ ಅಂವನ ಕೈಯಿಂದ ಹಣ ಪಡ್ದ್ ಕಂಡಿದ್ದರಿಂದ Mr. ರಾಜುನ ಮನ್ಸ್‌ಗೆ ಒಂದ್ ತರಹದ ಬೇಜಾರ್ ಹಿಡ್ದ್ ಬುಟ್ಟಿತ್. ಛೂ! ತರ್ಕೆ ಲೆ! ನಾನ್ ಆ ಮಾರ್‍ವಾಡಿಗೆ ಡೈರೆಕ್ಟಾಗಿ ಮೋಸ ಮಾಡಿ ಬುಟೆಲ್ಲಾ? ತಾ ಗೆನ ಮಾಡಿಕಂಡ್ ಇನ್ನ್ ಮುಂದೆ ನನ್ನ ಈ ತರದ ವ್ಯವಹಾರನ ನಿಲ್ಸಿ ಬುಡೋಕು ತಾ ತೀರ್ಮಾನ ಮಾಡಿ ಕಂಡ್ ಮಾನಸಿಕವಾಗಿ ನೊಂದ್ ಕಂಡತ್. ಹಂಗಾಗಿ ಈ ದಿನ ಬೆಳಿಗ್ಗೆ ಬಹಳ ತಡಾಗಿ 8 1/2 ಗಂಟೆಗೆ ತನ್ನ ಹಾಸಿಗೆನ ಬುಟ್ಟ್ ಎದ್ದತ್.

ಇಂದ್ ಏನೂ ಕೆಲ್ಸಕಾರ್ಯಂಗ ಬೇಡ. ಇಂದ್ ಒಳ್ಳೆ ಒಂದ್ ಹೋಟೆಲ್‌ಲಿ ಲಾಯಕಲಿ ಟಿಫನ್ ಮಾಡಿ ಹಂಗೇ ತಲೆ ಬಿಸಿ ಸ್ವಲ್ಪ ಕೂಲ್ ಆಕೆ ಯಾವುದಾದರೂ ಒಳ್ಳೆ ಪಿಚ್ಚರ್‌ನ

ಏಳಲಾರದ ಅತ್ತೆಗೆ ಎತ್ತಕ್ಕಾಗದ ಸೊಸೆ.

ನೋಡಿಕಂಡ್ ಬರೋಕು. ಆಮೇಲೆ ನಾನ್ ಊರಿಗೆ ಹೊರಡುವ ಸ್ವಲ್ಪ ತಯಾರಿನ ಮಾಡಿಕಂಬೊಕಲ್ಲಾ? ತಾ ಗೇನ ಮಾಡಿಕಂಡೇ ಹೊಟೆಲ್ ಮೈಸೂರು ಕಾಂಪ್ಲೆಕ್ಸ್‌ನ ಒಳಗೆ ಹೋಗಿ ಕುದ್ದ್ ಕಂಡತ್ ಯಾಗೋಳು ಒಂದೊಂದು ತರಹದ ರಿಸ್ಕ್‌ಗಳ ತಕಂಡ್, ತಕಂಡ್, ಈಗ ನಂಗೆ ಸುತ್ತಮುತ್ತ ನನ್ನನ ಹುಡುಕಾಡುವ ವೈರಿಗಳೇ ಜಾಸ್ತಿ ಆಗಿಹೋಗೊಳೊ. ಆದ್ರಂದ ಈ ಊರುಂದ ಬೇಗ ಜಾಗ ಖಾಲಿ ಮಾಡಿ ಹೊರಡಕು ಆದ್ರೇ ಈ ದಿನ ನನ್ನ ಮನ್ಸ್‌ಗೆ ಸ್ವಲ್ಪ ಚೇಂಜ್ ಆಫ್ ಮೂಡ್ ಮಾಡಿಕಂಬೋಕು ಸ್ವಲ್ಪ ಟೆನ್ಷನ್‌ನ ಕಮ್ಮಿ ಮಾಡಿಕಂಬೋಕು ಆದ್ರಂದ ಇಲ್ಲೇ ಒಂದ್ ಪಿಚ್ಚರ್‌ನ ನೋಡಿರೆ ಆದುತಾ ಗ್ಯಾನ ಮಾಡಿಕಂಡ್ ಅಲ್ಲೇ ಪಕ್ಕದ ಲಿಡೋ ಥಿಯೇಟರ್‌ಲಿ "ಹಂ ಆಪ್‌ಕೆ ಕೌನ್ ಹೈ ತ್ತೆಳುವ ಒಂದ್ ಒಳ್ಳೆ ಫಿಲಂ ನಡಿಯುತಿತ್ತ್. ಸರಿ Mr. ರಾಜು ತನ್ನ ಲೈಫ್‌ಲೆಲ್ಲಾ ಬರೇ ಸ್ಟಂಟ್‌ಗಳ ಫೈಟಿಂಗ್‌ಗಳ ಮಾಡಿ ಮಾಡಿ ಬೇಜಾರಾಗಿತ್. ಆದ್ರಂದ ಈ ಮೊರಾಲ್ಟೀ ಲವ್ ಪಿಚ್ಚರ್‌ನ ನೋಡಿಕೆ ಇಷ್ಟಪಟ್ಟತ್. ಹಂಗೇ ಬಾಲ್ಕನಿಗಿರುವ ಕೌಂಟರ್‌ನ ಕ್ಯೂಲಿ ನಿಂತ್ ಕಂಡತ್.

ಆಗ ಆ ಕ್ಯೂಲಿದ್ದ ಹೈದಂಗ ಗೂಡೆಗ ಎಲ್ಲಾ Mr. ರಾಜುನ ನೋಡಿಕಂಡ್ ಕಿಸಕಿಸನೆ ನಗೆ ಆಡ್ದೊ. ಕೆಲವು ಹೈದಂಗ ಇಂವನ ನೋಡಿ ಏಯ್ ನೋಡೋ ಅಲ್ಲಿ Waned Mr. Raju ತ್ತೇಳಿ ಗೇಲಿ ಮಾಡ್ದೊ ಆದ್ರೆ ಇದ್ಯಾವುದೂ Mr. Raju ಗೆ ಅರ್ಥ ಆತ್‌ಲೆ. ಅವರೊಟ್ಟಿಗೆ ಇಂವನೂ ಕೂಡಾ ಪೆದ್ದ್‌ಪೆದ್ದಾಗಿ ನಗೆ ಆಡ್ತ್. ಪಿಚ್ಚರ್ ಒಳ್ಳೆ ಲಾಯಕಣಿತ್ತ್ ಈ ಪಿಚ್ಚರ್ ಈಗಿನ ಕಾಲಲಿ ಹೆಚ್ಚ್ ಹಣನ ಸಂಪಾದನೆ ಮಾಡ್ದ ಫಿಲ್ಮಂತ್ತೇಳುವ ಹೆಚ್ಚ್‌ಗಾರಿಕೆ ಈ ಪಿಚ್ಚರಿಗಿತ್ತ್. ಈ ಪಿಚ್ಚರ್ ಮುಗ್ದಂಗೆ Mr. Raju ಅಲ್ಲಿಂದ ನೆಟ್ಟಂಗೆ ಉಡ್‌ಲ್ಯಾಂಡ್ ಥಿಯೇಟರ್ ಕಡೆಂದ ಹೊಟೆಲ್ ಗೋವರ್ಧನಕ್ಕೆ ನಡಕಂಡ್ ಹೋತ್. ಅಲ್ಲಿ ಒಂದ್ ಕಡೆ ಆರಾಂ ಆಗಿ ಕುದ್ದ್‌ಕಂಡ್ ಸೆಖೆ. ಬೆವರಿಗೋಸ್ಕರ ಫ್ಯಾನ್‌ನ ಗಾಳಿಗೆ ಮೈಯೊಡ್ಡಿಕಂಡ್ ಕುದ್ದ್‌ಕಂಡ್ ಒಂದ್ ಸ್ಟ್ರಾಂಗ್ ಕಾಫಿಗೆ ಆರ್ಡರ್ ಮಾಡ್ತ್. ಆಗ ಸಪ್ಲೈಯರ್ ಬಂದ್ Mr. ರಾಜುನ ಮಿಕಮಿಕನೆ ನೋಡಿಕೆ ಸುರುಮಾಡ್ತ್ ಆಗ Mr. ರಾಜು ಹೇಯ್? ಅದೇನ್ ನನ್ನ ಮುಖನ ಹಂಗೆ ಕೆಕ್ಕರಿಸಿಕಂಡ್ ನೋಡ್ತಾ ಒಳಾ? ನನ್ನ ಮುಖಲಿ ಏನ್ ಕೋತಿ ಕುಣಿತಾ ಉಟ್ಟಾ? ಹೋಗಿ ಒಂದ್ ಗ್ಲಾಸ್ ಕಾಫಿ ತಕಂಡ್ ಬಾ ತ್ತೇಳಿ ಪುನಃ ಆರ್ಡರ್ ಕೊಡ್ತ್.

ಆಗ ಸಪ್ಲೈಯರ್ ಮಾತಡದೆ ಹೋಗಿ ಕಾಫಿ ಸಾಸರ್ ಜೊತೆಗೆ ಅಂದ್‌ನ ಆಂದೋಲನ ಪೇಪರ್‌ನ ಹಿಡ್ಕಂಡ್ ಬಂದ್ ಇಂವನ ಕೈಗೆ ಕೊಡ್ತ್. ನೋಡಿಸಾರ್ ನೀವು ನನ್ನ ತಪ್ಪ್ ತಿಳ್ಕಂಡ್ ಬುಟ್ಬೊಳರಿ ನೋಡಿ ಈ ಪೇಪರ್‌ಲಿ ಇರ್‌ವ ಪೋಟೋಲಿ ಇರ್‌ವ ಹೈದ ತಂಗೇ ನೀವು ಕೂಡಾ ಒಳೊರಿ, ನಿಮ್ಮ ಹೆಸ್ರ್ ಏನ್ ಸಾರ್? ತಾ ಕೇಳ್ತ್. ಆಗ Mr. ರಾಜು ನನ್ನ ಹೆಸ್ರ್ ಚೆಂಗಪತ ಕೂಡ್ಲೆ ತಪ್ಪು ಹೆಸ್ರ್‌ನ ಹೇಳಿ ಬುಟ್ಟು ಆ ಪೇಪರ್‌ಲಿ ಇದ್ದ ಪರಿಚಯದ ಅಡ್ರಸ್‌ನ ನೋಡ್ತ್. ಹಂಗೇ ತನ್ನ ಪಪ್ಪ ಬಹಳ ಬೇಜಾರ್ ಪಟ್ಟ್‌ಕಂಡ್ ನಿವೇದಿಸಿಕಂಡ ಒಕ್ಕಣೆಗಳ ನೋಡಿ ಇಂವನ ಮನ್ಸ್ ಒಮ್ಮೆಗೆ ದಸ್ಸಕ್‌ತಾ ಹೇಳಿಕಂಡತ್. ಬೇಜಾರ್‌ಲಿ ಮುಖ ಬಾಡಿಹೋಗಿ ಕಣ್ಣೀರ್ ಬರ್‌ವಹಂಗೆ ಆಗಿಹೋತ್. ಆದ್ರೂ ಈಗ ನನ್ನ ಸೆಂಟಿಮೆಂಟ್ಸ್‌ನ ಈ ಜನರ ಮುಂದೆ ತೋರ್ಸಿಕಂಡರೆ ಬಹಳ ಆಪತ್ ಉಟ್ಟುತಾ ಬೇಗ ಅರ್ಥಮಾಡಿಕಂಡ್ ತನ್ನ ಮುಖಲಿ ಬಲವಂತದ ನಗೆನ ತಂದ್‌ಕಂಡ್ ಹೌದು ಹೌದು ಮನುಷ್ಯರಂಗೇ ಇನ್ನೊಬ್ಬ ಮನುಷ್ಯಂಗ ಅಪರೂಪಕೆ ಕಾಂಬಕೆ ಸಿಕ್ಕಿವೆ ಆದ್ರೇ ಈ ಪೇಪರ್‌ಲಿ ಇರ್‌ವ ಮನುಷ್ಯ ಮಾತ್ರ ನಾನ್ ಅಲ್ಲಾತಾ ಹೇಳಿಬುಡ್ತ್. ಅಂವ ತಂದ್ ಮೊಡಗಿದ ಕಾಫಿನೆಲ್ಲಾ ಒಂದೇ ಗುಟುಕಿಗೆ ಕುಡ್ದ್ ಬುಡ್ತ್. ಅಲ್ಲಿಂದ ಎದ್ದ್ ಬೇಗ ಹೊರಗೆ ಬಾಕಾಕನ ಆಪೇಪರ್ ಕೂಡಾ ತನ್ನ ಜೇಬೊಳಗೆ ಮಡಗಿಕಂಡತ್ ಪಾಪ ನನ್ನ ಪಪ್ಪನ ಮನ್ಸಿಗೆ ನಾನ್ ಎಷ್ಟೊಂದ್ ಬೇನೆ ಕೊಟ್ಟ್‌ಬುಟ್ಟೆ, ತಾ Mr. ರಾಜುಗೆ ಈಗತಾನೇ ಅರ್ಥ ಆದ್. ನನ್ನ ಪಪ್ಪನೇ ರಿಕ್ವೆಷ್ಟ್ ಮಾಡಿಕಂಡ್ ಕೇಳಿಕಂಡುಟಲ್ಲಾ? ನನ್ನ ಹಿಡ್ದ್ ಕೊಟ್ಟವಕೆ ಬಹುಮಾನನ ಬೇರೆ ಕೊಟ್ಟನೆತಾ ಪೇಪರ್‌ಲಿ ಹಾಕಿಸಿಬುಟ್ಟು ಈಗ ನನ್ನ ಮುಖನ ಎಲ್ಲೂ ಹೊರಗೆ ತೋರ್ಸಿಕಂಬಕೆ ಖಂಡಿತಾ ಸಾಧ್ಯ ಇಲ್ಲದಂಗೆ ಆಗಿಹೋತಲ್ಲಾ? ನನ್ನ ವೈರಿಗಳ ಕೈಗೆಲ್ಲಾ ನನ್ನ ಈ ಪೋಟೋ ಮತ್ತೆ ಅಡ್ರಾಸ್ ಬಹಳ ಆರಾಂ ಆಗಿ ಸಿಕ್ಕಿದಂಗೆ ಆಗಿಹೋತಲ್ಲಾ? ಈಗ ನೆಟ್ಟಂಗೆ ನನ್ನ ಹುಡುಕುತಿದ್ದ ನನ್ನ ಎದುರಾಳಿಗ, ಪೋಲಿಸ್‌ಗ, ಸಲೀಸಾಗಿ ನನ್ನ ಊರಿಗೆ ನನ್ನ ಹುಡ್‌ಕಂಡ್ ಬಂದುಬುಡಿಕೆ ಆರಾಂ ಆಗಿಹೋತಲ್ಲಾ? ಆದರಂದ ನಾನ್ ಈಗ ನನ್ನ ತಂಗೆನ ಮದ್ವೆಗೆ ಕೂಡಾ ಹೋಗದಂಗೆ ಆಗಿಹೋತಲ್ಲಾ ? ಅಯ್ಯೋ ದೇವರೇ? ಎಂಥ ವಿಪರ್ಯಾಸ ನನ್ನದ್ ಯಾಗೋಳು ಆದು ಹಿಂಗೇನೆ. ಎಲ್ಲಾ ಉಲ್ಟಾನೆ, ಆದು ನಾನ್ ನನ್ನ ತಂಗೆನ ಮದ್ವೆಗೆ ಹೋಗದೆ ಇದ್ರೆ ಆದ್ಯಾ? ನನ್ನ ಶಾಂತಿಗೂಡೆಗೆ ಅದೇ ದಿನ ಅದೇ ಚಪ್ಪರದ ಕೆಳಗೆ ತಾಳಿ ಕಟ್ಟದಿದ್ರೆ ಆದ್ಯಾ? ಈಗ ನಾನ್ ಇಷ್ಟ್ ದಿನ ನನ್ನ ಚಾಲಾಕ್ ತನದಿಂದ ಸಂಪಾದಿಸಿದ ಹಣನೆಲ್ಲಾ ವಾಪಾಸ್ಸ್ ವಸೂಲಿ ಮಾಡಿಕೆ ನನ್ನ ಎದುರಾಳಿಗ ಖಂಡಿತಾ ಊರಿಗೆ ಬಂದ್ ಹೊಂಚ್ ಹಾಕಿವೆ. ಈಗ ನಾನ್ ಇವರ ಕೈಯಿಂದ ತಪ್ಪಿಸಿಕಣೋಕು ಹಂಗೇ ನನ್ನ ಮತ್ತೆ ನನ್ನ ತಂಗೆನ ಮದ್ವೆ ಕೂಡಾ ನಡಿಯೋಕು. ಈಗ ನಾನ್ ಎನ್ ಮಾಡ್ದು?" ಈಗ ಒಟ್ಟಾರೆ ನಾನ್ ತುಂಬಾ ಜನಿಕೆ ಒಳ್ಳೆದಕ್ಕೂ ಕೆಟ್ಟದಕ್ಕೂ ಒಮ್ಮೆಗೆ ಬೇಕಾಗಿ ಹೋಗೊಳೆ" ಒಂದ್‌ಕಡೆ ಅರ್ಜೆಂಟಾಗಿ ನನ್ನ ಪ್ರೀತಿಯ ಅಪ್ಪ, ಅವ್ವ, ತಂಗೆಗೆ ಬೇಕಾಗ್ಯೊಳೆ, ಅಲ್ಲದೆ ನನ್ನ ಶಾಂತಿ ಗೂಡೆಗೆ ಬೇಕಾಗ್ಯೊಳೆ.

ಇನ್ನೊಂದ್ ಕಡೆ ನನ್ನ ಕೈಯಿಂದ ಪ್ರಯೋಜನ ಪಡ್ಕಂಡ ಎಷ್ಟೋ ಜನಿಕೆ ಬೇಕಾದ್ರೆ ಇನ್ನೂ ತುಂಬಾ ಸಮಾಜ ದ್ರೋಹಿ, ಕೇಡುಮಾಡುವ ಜನಕ್ಕೆ ನಾನ್ ಬೇಕಾಗ್ಯೊಳೆ. ಅಲ್ಲದೆ ಪೋಲಿಸ್‌ನವು ಕೂಡಾ ನನ್ನನ್ನ ಒಂದೊಂದು ಕಾರಣಗಳಿಗೋಸ್ಕರ ಹುಡುಕುತಾ ಒಳೊ. ಆದ್ರಂದ ಈಗ ನಾನ್ ಈ ಒಳ್ಳವುಕೆ ಕೆಟ್ಟವುಕೆ. ಒಂದೇ ಸಮಯಲಿ ಒಟ್ಟಿಗೆ ಒಂದೇ ಜಾಗಲಿ ಅದೂ ಮನೆಲಿ ನಡಿಯುವ ಮದುವೆಯ ಶುಭಸಮಾರಂಬಲೇ ನಮ್ಮ ಎಲ್ಲಾ ಸಮ್ಮಂದಿರಕರ ನೆಂಟ್ರ್‌ಗಳ ಮುಂದೆ ಮುಖಾ ಮುಖಿ ಬೇಟಿ ಆಗುವಂಗೆ ನನ್ನ ಪರಿಸ್ತಿತಿ ಬಂದ್ ಹೋತಲ್ಲಾ? ದೇವರೇ ಇಂತಹ

ಪರಿಸ್ಥಿತಿ ನನ್ನ ವೈರಿಗಳಿಗೂ ಬಾಕೆ ಆಗದ್. ಈ ಪರಿಸ್ತಿನ ನಾನ್ ಹೆಂಗೆ ನಿಬಾಯಿಸುದು? ನನ್ನ ತಂಗೆನ ಮದ್ವೆಗೆ ನಾನ್ ಹೋದ್ರೆ ಅಲ್ಲಿ ನನ್ನ ಮೇಲೆ ಸೇಡು ಇದ್ದ ಈ ಜನ ನನ್ನ ಹಿಡ್ದ್ ಸಾಯಿಸಿ ಬುಟ್ಟರೆ ಏನ್‌ಗತಿ! ಈ ಅವಮಾನನ ನಾವು ಹೆಂಗೆ ತಡಕಂಬೋದು? ಇದ್‌ಕೆ ಏನಾದ್ರೂ ಒಂದ್ ದಾರಿನ ಹುಡಿಕೇ ಹುಡುಕಕು ಆಗಲಿ ಇಷ್ಟೆಲ್ಲಾ ಕೆಲ್ಸಗಳನ್ನ ಚಾಲೆಂಜ್ ಆಗಿ ಮಾಡ್ದವಂಗೆ ಇದ್ ಒಂದೇ ಕೊನೇ ಅಗ್ನಿ ಪರೀಕ್ಷೆ. ಈ ಚಾಲೆಂಜಿಂಗ್ ವರ್ಕ್‌ಲಿ ನಾನ್ ಗೆದ್ದೇ ಗೆದ್ದನೆ. ಇದ್‌ಕೆ ಒಂದ್ ದಾರಿನ ನಾನ್ ಹುಡಿಕೇ ಹುಡ್‌ಕಿನೆ. ತಾ ತಲೆಲಿ ಸಾವಿರ ಚಿಂತೆನ ತುಂಬಿಕಂಡ್ ತಲೆಕೂದ್ಲ್‌ಗಳ ಎಳ್ದ್ ಕಿತ್ತಾಡಿಕಂಡ್ Mr. ರಾಜು ಗೋವರ್ಧನ ಹೋಟಲ್‌ಂದ ಬೇಗ ಹೊರಗೆ ಹೊರಟತ್

*(ಮುಂದಿನ ಸಂಚಿಕೆಯಲ್ಲಿ Mr. ರಾಜುವಿನ ಬರುವಿಕೆಯನ್ನು ನಿರೀಕ್ಷಿಸಿರಿ)*

---

ಕವನ : ಮಣ್ಣಿನ ಮಕ್ಕಳಿಗೆ

ಮಣ್ಣಿನ ಮಕ್ಕಳೆ ಎದ್ದೇಳಿ ಒಂದಾಗುತ ಬಿಡುಗಡೆಗೆ |
ಒಕ್ಕಲು ಮಕ್ಕಳೆ ಸಿಡಿದೇಳಿ ಸಾಗುತ ಗುರಿಯೆಡೆಗೆ

ಈ ದೇಶದ ಬೆನ್ನೆಲುಬೆನಿಸಿದ ನೀವು
ದುಡಿಯುತಲೇ ದಿನ ಸವೆಸಿದಿರೀ |
ಶತ ಶತಮಾನದಿ ಅರೆ ಹೊಟ್ಟೆಯಲೇ ನೀವ್
ಎಲ್ಲರಿಗನ್ನವ ನೀಡಿದಿರೀ ||

ಇಂದಿಗು ನಿಮ್ಮನು ಕೇಳ್ವವರಾರು
ಒಗ್ಗಟ್ಟಿದುವೇ ತಾರಕ ಮಂತ್ರ |
ಅಂದಿಗೆ ಗದ್ದುಗೆ ಕಣ್ತೆರೆಯುವುದೂ
ತೊರೆಯುತ ಬಗೆ ಬಗೆಯಾ ತಂತ್ರಾ ||

ಎಚ್ಚರಗೊಳ್ಳಿರಿ ಶಿಕ್ಷಣ ಪಡೆಯಿರಿ
ಮುನ್ನುಗ್ಗಿರಿ ವಿಧವಿಧ ಕ್ಷೇತ್ರದಲೀ |
ಸಾಧನೆ ಮೆರೆಯಿರಿ ಕಾಯ ಹಿಡಿಯಿರಿ
ಹಿಡಿಯಿರಿ ಗದ್ದುಗೆ ಕ್ಷಾತ್ರದಲೀ ||

ನಿಮ್ಮೊಡನಿರುವಾ ಬಡಬಗ್ಗರಿಗೇ
ನೀಡುತ ಸಹಾಯ ಹಸ್ತಾ |
ಜತೆಜತೆಗೂಡುತ ಮಣ್ಣಿನ ಋಣದಲಿ
ಲೆಕ್ಕವ ಮಾಡಿರಿ ಚುಕ್ತಾ ||

ಮರೆಯದಿರಾದರು ದೇಶಹಿತಾ ಎಚ್ಚರವಿರಬೇಕು
ಮಣ್ಣಿನ ಮಕ್ಕಳ ಹಿತ ಸಾಧಿಸುವಾ ಕೆಚ್ಚೆದೆಯಿರಬೇಕು
ಒಕ್ಕಲು ಮಕ್ಕಳೆ ಒಕ್ಕಲುತನವಾ ನೆಚ್ಚುತಲಿರಬೇಕು
ಭಾರತ ಮಾತೆಯ ಭಕ್ತಿಯು ಸೇವೆಯು ಹೆಚ್ಚುತಲಿರಬೇಕು

**– ಯನ್. ಪದ್ಮನಾಭಗೌಡ, ಐವರ್ನಾಡು.**

# ಪತ್ರ ವಿಭಾಗ

570012

ಮಾನ್ಯರೆ,

ಸಂಗಾತಿಯಲ್ಲಿ ಇತ್ತೀಚೆಗೆ ಬರುತ್ತಿರುವ ಕೊಡವ ಭಾಷೆಯಿಂದ ಅರೆಭಾಷೆಗೆ ಪಟ್ಟಡ ಶ್ರೀ ಪ್ರಭಾಕರನವರು ತರ್ಜುಮೆ ಮಾಡುವ ಜೀವನಕ್ಕೆ ಬೆಳ್ಕ್, ಬುದ್ಧಿ ಬೆಳೆಯಕು, ನಿನ್ನ ಕೈಲೆ ಉಟ್ಟು, ಮನಸ್ಸ್, ಲೇಖನಗಳನ್ನು ಮನಃ ಪೂರ್ವಕವಾಗಿ ಓದಿದರೆ ತಾನು ಏನೋ ಒಂದು ಸಾಧಿಸಿದ ಹಾಗೆ ಅನ್ನಿಸುತ್ತದೆ ಹಾಗೂ ಮನುಷ್ಯನ ಒಳ್ಳೆಯ ಬದುಕಿಗೆ ಸಾಕ್ಷಿಯಾಗಿರುತ್ತದೆ. ಕಳೆದ ಶತಮಾನಗಳಲ್ಲಿ ಗಣ್ಯ ವ್ಯಕ್ತಿಗಳು ಇದನ್ನು ಭೋಧಿಸಿ ಬರೆದಿದ್ದರು, ಕೆಲವರು ಅರ್ಥಮಾಡಿಕೊಳ್ಳಲಿಲ್ಲಾ. ಇಂತಹ ಲೇಖನಗಳನ್ನು ಓದಿ ಅದರಂತೆ ನಡೆದರೆ ಮನುಷ್ಯ ಜನ್ಮ ಪಡೆದುದಕ್ಕೆ ಸಾರ್ಥಕವಾಗುತ್ತದೆ. ಹಾಗೂ ನಡೆಯಬಾರದಂತಹ ಘಟನೆಗಳನ್ನು ತಪ್ಪಿಸಬಹುದು. ಪುನಃ ಮನುಷ್ಯ ಜನ್ಮ ಸಿಕ್ಕುತ್ತದೆಯೋ ಇಲ್ಲವೋ ಯಾರು ಬಲ್ಲವರು. ಇಂತಹ ಲೇಖನಗಳನ್ನು ಓದಿ ಮನಸ್ಸಿಗೆ ಹಚ್ಚಿಕೊಂಡರೆ ಒಳ್ಳೆಯ ಗುಣ, ನಡತೆ, ಜ್ಞಾನ ಶಕ್ತಿಗಳನ್ನು ಬೆಳೆಸಿಕೊಳ್ಳಬಹುದು. ಇಂತಹ ಲೇಖನಗಳು ನಮ್ಮ ಅರೆಭಾಷೆಯ ಸಂಗಾತಿಯಲ್ಲಿ ಬಂದದಕ್ಕೆ ಆ ಪುಸ್ತಕ ಬರೆದವರಿಗೆ, ಶ್ರಮಿಸಿದವರಿಗೆ, ಪ್ರತಿಯೊಬ್ಬರು ಕೃತಜ್ಞತೆಗಳನ್ನು ಸಲ್ಲಿಸೋಣವಲ್ಲವೇ

**– ತೆಕ್ಕಡೆ ಬಿ. ರಘುನಾಥ, ಮುತ್ತಾರ್‌ಮುಡಿ.**

---

## ಹಟ ಬೇಕು - 8

ಒಳ್ಳ ಜೀವಮಾನ ನಮ್ಮದಾತೆತ ಹೇಳ್ದು, ಗ್ಯಾನ ಮಾಡ್ದು ಸುಲಭ. ಆದರೆ, ಒಳ್ಳೆ ಜೀವಮಾನ ಮಾಡ್ದು ಅಷ್ಟ್ ಸುಲಭ ಅಲ್ಲ. ಹೆಳ್ದಂಗೆ ಮಾಡುವ, ಮಾಡ್ದಂಗೆ ಹೇಳ್ಕ್ ಮಾತಾಡಿಕೆ ನಮ್ಮ ಜೀವನ ಒಳ್ಳೆದಾದೆ. ನಾವು ಗ್ಯಾನ ಮಾಡ್‌ದೊಂದು. ಹೇಳ್ದೊಂದು ಮಾಡ್ದೊಂದ್. ಮಾಡಿಕಂಡ್ ಒಂದಾಂಗೊಂದು ಸಂಭಂದ ಇಲ್ಲದೆ ಮಾಡುವ ಕಾರ್ಯಕ್ಕೆ "ರಾಜಕಾರಣೆಗಳ ಕಾರ್ಯ" ತ ಹೇಳ್ಟೆ. ನಮ್ಮ ಕೀಳರಿಮೆಗೆ ಅದೇ ಏಟು. ಒಳ್ಳ ಭಾವನೆ, ಕೆಲಸ ಒಂದಾಗಿ ಬಂದು ಸರಿಯಾಗಿರುದೇ ಧರ್ಮ, ಅದೇ ವೇದಾಂತ! ಅದೇ ದೇವರ ಪ್ರಾರ್ಥನೆ. ಅದೇ ಸರ್ವಸ್ವ, ಅದೇ ಸ್ವರ್ಗ, ಇವರ ಸಾಧನೆ ಕಷ್ಟ ಕಷ್ಟಾಂತ ಬುಡುಕ್ಕಾಗದ್. ಸಾಧನೆ ಮಾಡುವ ಹಟ ಬೇಕು. ಕಷ್ಟ ಪಡದೆ ಸುಖ ಕೈಗೆ ಸಿಕ್ಕುಲೆ. ಪ್ರಾಣಿಗೆ ಬುದ್ಧಿ ಕಲಿಸುವ ಮನುಸ, ತನ್ನ ಬುದ್ಧಿನ ಹೆಂಗೆ ತಿದ್ದಿಕಾದೆ? ಅದ್ಕೆ ಕರ್ತವ್ಯ ನಿಷ್ಠೆ ಬೇಕು. ತಿದ್ದಿಕಣೆ ತ್ತೇಳುವ ಹಟ ಬೇಕು.

ಕೊಡವ ಭಾಷೆಲಿ : ಚೇಂದ್ರಿಮಾಡ ಮುತ್ತಪ್ಪ
ಅರೆಭಾಷೆಗೆ : ಪಟ್ಟಡ ಪ್ರಭಾಕರ.

---

**ಸುಳ್ಳುಗಳು ಇಲ್ಲದಿದ್ದರೆ ಚರಿತ್ರೆ ಓದಲು ಬೇಸರವಾಗುತ್ತದೆ.**

# ಪತ್ರವಿಭಾಗ –ಉತ್ತರ

✉ **ಕಲ್ಯಾಣ ಮಂಟಪ ವ್ಯವಸ್ಥೆ :** ಏಪ್ರಿಲ್ 1-15 ವಿಭಾಗದಲ್ಲಿ ಹಲವಾರು ಜನರ ಸಮಸ್ಯೆಗಳನ್ನು ನಾನು ಓದಿದೆ. ಅದರಲ್ಲಿ ಕಲ್ಯಾಣ ಮಂಟಪಗಳಲ್ಲಿ ವ್ಯವಸ್ಥೆ ಅವಶ್ಯ. ಇದು ಒಂದು ಬಹುಮುಖ್ಯವಾದ ಅಂಶ. ಯಾಕೆಂದರೆ ಕೆಲವು ಕಡೆ ಹಾಗೂ ಕೆಲವರಲ್ಲಿ ಬಡವರು ಮದುವೆಯೆಂಬುದನ್ನು ಬಹಳ ಶ್ರಮಪಟ್ಟು ಅಂದರೆ ಇಂದಿನ ಸಂಸ್ಕೃತಿ ಸಮಾಜದಲ್ಲಿ ನಡೆಯುವ ಸಮಾರಂಭಕ್ಕೆ ಸರಿಯಾಗಿ ವ್ಯವಸ್ಥೆ ಇಲ್ಲದಿದ್ದಲ್ಲಿ ತುಂಬಾ ತೊಂದರೆ ಹಾಗೂ ಬವಣೆಯಾಗುವುವದು. ಆದ್ದರಿಂದ ಎಲ್ಲಾ ಗೌಡ ಸಮಾಜದಲ್ಲಿಯೂ ಕೂಡ ಇಂತಹ ವ್ಯವಸ್ಥೆ ಅಂದರೆ ಮದು ಮಕ್ಕಳಿಗೆ ಬೇಕಾದಂತಹ ಸಾಮಗ್ರಿಗಳು ಒದಗಿಸುವಂತಾಗಲಿ, ಇಂತಹ ಸಲಹೆ ಕೊಟ್ಟಂತ ಪೂಜಾರಿ ಪೂವಯ್ಯನವರಿಗೆ ಧನ್ಯವಾದಗಳು.

✉ **ಭಿನ್ನ - ಭೇಧ :** ಈ ವಿಭಾಗವನ್ನು ನಾನು ಓದಿದೆ ಅಂದರೆ ಇವರು ಹೇಳುತ್ತಾರೆ ನಾನು ಜೋಕ್ಸ್ ಬರೆದರೆ ಅವರ ಪೂರ್ಣ ವಿಳಾಸ ಹಾಕುವುದಿಲ್ಲಂತ, ಆದರೆ ಈ ಪತ್ರ ಬರೆದವರು ಪೂರ್ಣ ವಿಳಾಸ ಕೊಡದ ಮೇಲೆ ಹಾಕುವುದು ಹೇಗೆ? ಅಲ್ಲದೆ ಈ ಪತ್ರ ಬರೆದವರು ಒಂದು ಸಲ ಸಂಪಾದಕರನ್ನು ಭೇಟಿ ಮಾಡಲಿ ಯಾಕೆ? ಅಂದರೆ ಅವರು ಅರೆಭಾಷೆ ಮಾತನಾಡುತ್ತಾರ? ಅಥವಾ ಕನ್ನಡ ಮಾತನಾಡುತ್ತಾರ? ನಿಮಗೆ ಗೊತ್ತಾಗುತ್ತದೆ. ಮತ್ತೆ ನಾವು ಬರೆಯುವಾಗ 50ಪೈ. ಪೇಪರ್ ಕೊಟ್ಟು ಪತ್ರ ಬರೆದು ಹಾಕುತ್ತೇವೆ. ಆದರೆ ಕಲರ್ ಪೇಪರ್‌ಗೆ ಹಣ ಜಾಸ್ತಿ ಎಂದು ನಿಮಗೆ ತಿಳಿದರಬೇಕಲ್ಲ? ಅವು ಸ್ವಲ್ಪ ದುಬಾರಿಯಾದ ಕಾರಣ ಅಂತಹ ಕಾರ್ಯವನ್ನು ಒಬ್ಬರಿಂದ ಒದಗಿಸಲು ಸಾಧ್ಯನಾ? ನೀವೆ ಹೇಳಿ ಸ್ವಲ್ಪ ಸಹಕರಿಸಿ ಸಹಾಯ ಮಾಡಿದರೆ ಒಳಿತಲ್ಲವೆ? ಮತ್ತೆ ಈ ಪತ್ರಿಕೆ ಒಬ್ಬರಿಂದ ಕಾರ್ಯ ನಿರ್ವಹಿಸುತ್ತಿರುವರು. ಅದಕ್ಕೆ ನಾವು ಹೆಮ್ಮೆ ಪಡಬೇಕು. ಗೌಡ ಜನ ಪತ್ರಿಕೆ ನಡೆಸಲು ಎಷ್ಟು ಶ್ರಮ ಬೇಕೆಂಬುವುದು ಅದು ತಿಳಿದವರಿಗೆ ಗೊತ್ತು. ಅಂತೂ ನಿಮ್ಮ ಅಭಿಪ್ರಾಯವನ್ನು ಬರೆದು ತಿಳಿಸಿದ್ದೀರಾ? ನಿಮ್ಮ ಹೆಸರು ಬರೆಯಲಿಲ್ಲ. ನಿಮಗೂ ಧನ್ಯವಾದಗಳು.

✉ **ಜಾಸ್ತಿಗೊಳಿಸಿ :** ಕುಮಾರಿ ಪ್ರವೀಣಾ, ಕಾನತ್ತಿಲ, ಸುಳ್ಯ ಇವರು "ಕೊಡಗು ಸಂಗಾತಿ" ಪತ್ರಿಕೆಯನ್ನು ಕೊಂಡು ಓದುವುದು ತುಂಬಾ ಸಂತೋಷ. ಗೌಡ ಜನಾಂಗದ ಸಂಸ್ಕೃತಿ, ಭಾಷೆ, ಕಲೆ, ಸಾಹಿತ್ಯ ಇವುಗಳಿಗೆ ಪ್ರೋತ್ಸಾಹಿಸುತ್ತಿದ್ದಾರೆ. ಅದು ಸಂತೋಷವೇ, ಈ ಪತ್ರಿಕೆ ಗಗನಕ್ಕೆ ಏರಲೀ ಎಂದು ಶುಭ ಹಾರೈಸಿದ್ದಾರೆ. ಇವರಿಗೂ ಅನಂತ ಧನ್ಯವಾದಗಳು.

✉ **ಹವ್ಯಕ ಬ್ರಾಹ್ಮಣ :** ಎ. ವಿ. ಚಿತ್ತರಂಜನ್ ದಾಸ್ ಇವರು ಒಬ್ಬ ಬ್ರಾಹ್ಮಣನಾಗಿ ಅರೆ ಭಾಷೆಯ ಮ್ಯಾಲೆ ಅಭಿಮಾನ ಇಟ್ಟು ಕೊಡಗು ಸಂಗಾತಿ ಪತ್ರಿಕೆನ ಓದುತ್ತಾರೆ. ಅದು ತುಂಬಾ ಹೆಮ್ಮೆಯ ವಿಷಯನೇ. ನಮ್ಮ ಅರೆ ಭಾಷೆಗೆ ಎಷ್ಟು ಪ್ರಾತಿನಿಧ್ಯ ಇದೆ ಎಂದು ಗೊತ್ತಾಗುತ್ತದೆ. ಮತ್ತೆ ಆರ್ಥಿಕ ಸ್ಥಿತಿ ಚೆನ್ನಾಗಿಲ್ಲಂತ ಹೇಳಿ ಟಾಂ ಟಾಂ ಮಾಡಬೇಡಿ ಎಂದು ಬರೆದಿರುವವರು. "ಹೊಟ್ಟೆ ಹಸಿವಾದಾಗ ಅನ್ನ ಕೇಳದೇ ಆಗುತ್ತದೆಯೇ" ಪರಿಸ್ಥಿತಿ ಹಾಗೆ. ಹೀಗಿರುವಾಗ ತಿಳಿಸಿ ಸಿಕ್ಕದ ಮೇಲೆ ಏನು ಮಾಡುವುದು ಹೇಳಿ? ಇರಲಿ ಅಂತೂ "ಕೊಡಗು ಸಂಗಾತಿ" ಪತ್ರಿಕೆ ಕೊಂಡು ಓದುವರು. ಅದೇ ಮುಖ್ಯವಾದ ಸಂತೋಷ. ಎ. ವಿ. ಚಿತ್ತರಂಜನ್ ದಾಸ್‌ರವರಿಗೂ ಧನ್ಯವಾದಗಳು.

✉ **ಮರ್ಯಾದೆ ಉಳಿಸಿ :** ಈ ವಿಭಾಗ ಪತ್ರಿಕೆ ಓದಿದೆ. ಏನು ಹೇಳಬೇಕು ಎಂಬುವುದು ಗೊತ್ತಾಗುವುದಿಲ್ಲ. ಯಾಕೆಂದರೆ, ಈ ಹಿಂದೆ ಪತ್ರಿಕೆಯಲ್ಲಿ ಜನಗಣತಿಗೆ ಬಂದಾಗ ಅರೆ ಭಾಷೆ ಎಂದು ನಮೂದಿಸಲು ತಿಳಿಯ ಪಡಿಸಿದ್ದರು. "ಅರೆಭಾಷೆ" ಎಂದು ಎಲ್ಲರು ಹೇಳುವುದು ಗೌಡ ಜನಾಂಗದಲ್ಲಿ ರೂಢಿಯಾಗಿದೆ. ಯಾರು ಹಳೆ ಕನ್ನಡಿಗರೆಂದು ಹೇಳುವುದಿಲ್ಲ. ಬೆಳೆದು ಬಂದ ರೀತಿ ಹಾಗೆ ಇದೆ. ಇದು ಒಬ್ಬರಿಂದ ಬಗೆ ಹರಿಸುವಂತಹದಲ್ಲ. ಕೆಲವೊಮ್ಮೆ ನನ್ನನ್ನು ಕೇಳುತ್ತಾರೆ. Gowdas ಅಂದರೆ ನೀವು ಅರೆಗೌಡುಗಳ (ನಾಡ್‌ಗೌಡುಗಳ) ನಂಗೆ ಲಾಯಿಕ್ ಅರೆಭಾಷೆ ಬಂದತೆತ. ಹೀಗೆ ಪರಜನರು ಹೇಳತ್ತಾರೆ. ಇದಕ್ಕೆ ಏನು ಹೇಳುತ್ತೀರಾ? ಹಳೆಗನ್ನಡ ಎಂಬುವುದು ಸರಿ. ಅಂದರೆ ಪಾಠದ ಪಠ್ಯ ಪುಸ್ತಕದಲ್ಲಿ ಬರುವ ಉಚ್ಚಾರಣೆಯಾಗಿರುವುದು. ಅದು ಅವುಗಳು ಹಳೆಗನ್ನಡಕ್ಕೆ ಸ್ಪಂದಿಸುವವು. ಅವುಗಳು ಈ ರೀತಿ (ರ) (ಱ) ಬರೆ ಹೀಗೆ. ಹೀಗಿರುವಾಗ ಕನ್ನಡ ಮತ್ತು ಸಂಸ್ಕೃತ ಒಳಗೊಂಡಿರುವುದು. ಆದ್ದರಿಂದ ಈ ರೀತಿಯ ಭಿನ್ನಾಭಿಪ್ರಾಯಗಳು ಇರುವವು. ಜಿಲ್ಲೆಯಲ್ಲಿ ಒಂದೊಂದು ತರಹ ಮಾತನಾಡುತ್ತಾರೆ ನಿಜ. ದಕ್ಷಿಣ ಕನ್ನಡ ಜಿಲ್ಲೆಗೂ ಕೊಡಗು ಜಿಲ್ಲೆಗೂ ಮಾತಿನ ಸ್ವಾರಸ್ಯದಲ್ಲಿಯೆ ಕೆಲವು ವ್ಯತ್ಯಾಸಗಳು ಕಂಡು ಬರುವವು. ಆದರೇ ಜನರು "ಅರೆ ಭಾಷೆಯ ಗೌಡರು" ಎಂದು ಕೆಲವರು ಹೇಳಿಕೊಳ್ಳಲು ನಾಚುವರು. ನಾವು ತುಳು ನಾಡಿನ ಹಳೇ ಕನ್ನಡಿಗರೆಂದು ಹೇಳಿಕೊಳ್ಳುತ್ತಾರೆಯೇ? ನೀವೆ ಊಹಿಸಿ, ಇಂತಹ ವಿಷಯ ನಿಮ್ಮ ಮನಸ್ಸಿನ ಅಭಿಪ್ರಾಯಗಳನ್ನು "ಕೊಡಗು ಸಂಗಾತಿ ಪತ್ರಿಕೆಯ ವಿಭಾಗದಲ್ಲಿ ತಿಳಿಯಪಡಿಸಿದಕ್ಕೆ ಕುದುಕುಳಿ, ಟಿ. ಸುಬ್ಬಯ್ಯನವರಿಗೆ ಧನ್ಯವಾದಗಳು.

*ಈ ಎಲ್ಲಾ ವಿಷಯಗಳ ವಿವರವನ್ನು ಅವರವರು ತಮ ತಮ್ಮ ಸಮಸ್ಯೆಗಳನ್ನು*
*ಬರೆದಂತಹ ನಮ್ಮ ಗೌಡ ಜನಾಂಗದವರಿಗೆ ಅನಂತ ಧನ್ಯವಾದಗಳು*

ಲೇಖಕಿ : ಆಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ.

Reg. No. KA/SK/MYS-88 Registered : 10-01-96 TCI Kar. 09592

# ಕೊಡಗು ಸಂಗಾತಿ ಲಾಟರಿ ಯೋಜನೆ
# ದಿ॥ 8-4-2001 ಫಲಿತಾಂಶ

| | | | |
|---|---|---|---|
| 1) | 1ನೇ ಬಹುಮಾನ<br>2ಗ್ರಾಂ ಚಿನ್ನ | ಪುತ್ತೂರು<br>D.K. - 64 | ಎನ್. ಡಿ. ಕೃಷ್ಣ ಲೀಲಾವತಿ<br>"ಸ್ಫೂರ್ತಿ" ನಿಸರ್ಗ ಹೆಲ್ತ್ ಸೆಂಟರ್ ಹತ್ತಿರ<br>ದರ್ಬೆ, ಪುತ್ತೂರು. |
| 2) | 2ನೇ ಬಹುಮಾನ<br>2½ ಲೀಟರ್ ಕುಕ್ಕರ್ | ಕೈಕೇರಿ<br>KDG - 450 | ಪಡಿಕಲ್ ಪಿ. ಚಿನ್ನಪ್ಪ<br>ಕೈಕೇರಿ ಗ್ರಾಮ ಮತ್ತು ಅಂಚೆ, ಗೋಣಿಕೊಪ್ಪ, ಕೊಡಗು. |
| 3) | 3ನೇ ಬಹುಮಾನ<br>ಬಟ್ಲೆಟ್ ಕುಕ್ಕರ್ | ಬೆಂಗಳೂರು<br>BNG - 267 | ಪಿ. ಎಸ್. ಮಾದಪ್ಪ<br>ನಿಸರ್ಗ ವುಡ್ ಕ್ರಾಫ್ಟ್ ಹತ್ತಿರ, 8ನೇ ಮೇನ್<br>ಹೆಸರಗಟ್ಟ ರೋಡ್, ಟಿ. ದಾಸರಹಳ್ಳಿ, ಬೆಂಗಳೂರು - 57 |
| 4) | 4ನೇ ಬಹುಮಾನ<br>ದೋಸೆ ತವ | ಮಡಿಕೇರಿ<br>MRC - 117 | ಪಾಣತ್ತಲೆ ಪಿ. ಬಿದ್ದಪ್ಪ<br>ಹೌಸಿಂಗ್ ಕಾಲೋನಿ, ದೇಚೂರು, ಬ್ರಾಹ್ಮಣ ವ್ಯಾಲಿ ಹತ್ತಿರ,<br>ಚಾಮರಾಜ ರಸ್ತೆ, ಮಡಿಕೇರಿ. |
| 5) | 5ನೇ ಬಹುಮಾನ<br>ಸ್ಟೀಲ್ ಜಗ್ಗ್ | ಉಲ್ಲಾಳ್<br>DK- 63 | ಚೆರಿಯಮನೆ ಕೆ. ಶಶಿಧರ<br>ಪೋಲಿಸ್ ಸರ್ಕಲ್ ಇನ್ಸ್‌ಪೆಕ್ಟರ್,<br>ಮಂಗಳೂರು ಗ್ರಾಮಾಂತರ ಸ್ಟೇಷನ್<br>ಉಲ್ಲಾಳ, ದ.ಕ.- 574159 |
| 6) | 6ನೇ ಬಹುಮಾನ<br>ಸ್ಟೀಲ್ ಮಿಲ್ಕ್ ಕುಕ್ಕರ್ | ಕಟ್ಟೆಮಾಡು<br>KDG- 1101 | ಬಿದುರುಪಣೆ ಎಣ್. ನಾಣಯ್ಯ<br>ಕಟ್ಟೆಮಾಡು ಗ್ರಾಮ ಮತ್ತು ಅಂಚೆ, ಮಡಿಕೇರಿ ತಾ.<br>ಕೊಡಗು ಡಿಸ್ಟ್ರಿಕ್ಟ್ |
| 7) | 7ನೇ ಬಹುಮಾನ<br>ಗೋಡೆ ಗಡಿಯಾರ | ಕಾಟಕೇರಿ<br>KDG- 1144 | ಕೊಂಬನ ಪಿ. ಪ್ರವೀಣ್<br>ಕಾಟಕೇರಿ ಗ್ರಾಮ, ಮದೆ ಅಂಚೆ, ಮಡಿಕೇರಿ ತಾ. ಕೊಡಗು ಡಿಸ್ಟ್ರಿಕ್ಟ್ |
| 8) | 8ನೇ ಬಹುಮಾನ<br>ಸ್ಟೀಲ್ ಡಬ್ಬ | ಬೆಂಗಳೂರು<br>BNG- 142 | ಕಲ್ಲುಮುಟ್ಲು ಪಿ. ಬೋಪಯ್ಯ<br>189/B, 2ನೇ ಮೇನ್, 5ನೇ ಕ್ರಾಸ್<br>ಪ್ರಕಾಶ್ ನಗರ, ಬೆಂಗಳೂರು-21 |
| 9) | 9ನೇ ಬಹುಮಾನ<br>ಕಾಪರ್ ಬಾಟಂ ಚೆಟ್ಟಿ | ಮೈಸೂರು<br>MYS- 274 | ಬೊಟ್ಟನಗಡ ಜಾಜಿ ಮಾದಪ್ಪ<br>C/o ಎಂ.ಎ. ನವೀನಚಂದ್ರ, # 975, 26ನೇ ಮೇನ್<br>13ನೇ ಕ್ರಾಸ್, ಜೆ.ಪಿ. ನಗರ, ಮೈಸೂರು -8 |
| 10) | 10ನೇ ಬಹುಮಾನ<br>ಟೇಬಲ್ ಗಡಿಯಾರ | ತಟ್ಟಳ್ಳಿ ಗ್ರಾಮ<br>ಮಾಲ್ದಾರೆ<br>KDG- 1091 | ಸೂದನ ಯತೀಶ್<br>ತಟ್ಟಳ್ಳಿ ಗ್ರಾಮ, ಮಾಲ್ದಾರೆ ಅಂಚೆ<br>ಸಿದ್ದಾಪುರ (Via)ಕೊಡಗು. |

ವಿ. ಸೂ : ಸಂಗಾತಿ ಲಾಟರಿ ವಿಜೇತರು ಶೀಘ್ರವಾಗಿ ತಮ್ಮ ಹಿಂದಿನ ರಶೀದಿಯನ್ನು ಸಂಗಾತಿ ಕಛೇರಿಯಲ್ಲಿ ತೋರ್ಪಡಿಸಿ ಬಹುಮಾನ ಪಡೆದುಕೊಳ್ಳುವುದು. ☎ : 0821- 516771 – ಸಂಪಾದಕಿ.

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.